بِسْمِ اللهِ الرَّحْمٰنِ الرَّحِيْمِ     نَحْمَدُهٗ وَنُصَلِّیْ عَلٰی رَسُوْلِہِ الْکَرِیْمِ     وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 15

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

15 ಏಪ್ರಿಲ್ 2021, 15 ಶಹಾದತ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
02 ರಮಝಾನ್ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَتَعَاوَنُوْا عَلَى الْبِرِّ وَالتَّقْوٰى ۪
وَلَا تَعَاوَنُوْا عَلَى الْاِثْمِ وَالْعُدْوَانِ ۪
وَاتَّقُوا اللّٰهَ ؕ اِنَّ اللّٰهَ شَدِيْدُ الْعِقَابِ

(ಅಲ್‌ಮಾಇದ: 03)

ಅಂದರೆ: ಸತ್ಕರ್ಮಗಳಲ್ಲಿ ಮತ್ತು ಅಲ್ಲಾಹನ ಆಜ್ಞೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಲ್ಲಿ ನೀವು ಪರಸ್ಪರ ಸಹಕರಿಸಿರಿ. (ಆದರೆ) ಪಾಪಕರ್ಮ ಮತ್ತು ಅನ್ಯಾಯವೆಸಗುವುದರಲ್ಲಿ ನೀವು ಅನ್ಯೋನ್ಯ ಸಹಕರಿಸಬಾರದು. ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ. ಖಂಡಿತವಾಗಿಯೂ ಅಲ್ಲಾಹನು ಕಠಿಣವಾಗಿ ಶಿಕ್ಷಿಸುವವನಾಗಿದ್ದಾನೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಫಜರ್ ನಮಾಝ್‌ನ ಅನುಗ್ರಹಗಳು

(1142) ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ಹೇಳಿದರು. ಶೈತಾನನು ನಿಮ್ಮಲ್ಲಿ ಯಾರೊಬ್ಬರ ಹಾಸಿಗೆಯಲ್ಲಿ ಮಲಗಿಕೊಂಡರೆ ಮೂರು ಗೆರೆಗಳನ್ನು ಹಾಕುತ್ತಾನೆ. ಎಲ್ಲ ಗೀರುಗಳನ್ನು ಗಟ್ಟಿಯಾಗಿ ಹಾಕಿರುತ್ತಾನೆ. (ಹೇಳುತ್ತಾನೆ.) ಇನ್ನೂ ನಿನಗಾಗಿ ದೀರ್ಘ ರಾತ್ರಿ ಉಳಿದಿದೆ ಮಲಗಿಬಿಡು. ಅವನು ಜಾಗೃತಗೊಂಡರೆ ಮತ್ತು ಅಲ್ಲಾಹನನ್ನು ಸ್ತುತಿಸತೊಡಗಿದರೆ ಒಂದು ಗೀಟು ತೆರೆಯಲ್ಪಡುತ್ತದೆ. ಅವನು ವುಝು ಮಾಡಿಕೊಂಡರೆ ಇನ್ನೊಂದು ಗೀಟು ತೆರೆಯಲ್ಪಡುತ್ತದೆ ಮತ್ತು ನಮಾಝ್ ನಿರ್ವಹಿಸಿದರೆ ಮೂರನೇ ಗೀಟು ಸಹ ತೆರೆಯಲ್ಪಡುತ್ತದೆ. ಆಗ ಅವನು ಮುಂಜಾನೆ ಸ್ಪಷ್ಟವಾಗಿ ಸಂತೋಷದಲ್ಲಿರುತ್ತಾನೆ. ಇಲ್ಲವಾದರೆ ಆಲಸಿಯಾಗಿ ದುಷ್ಟನಾಗಿರುತ್ತಾನೆ.

### ತಹಜ್ಜುದ್ ನಮಾಝಿನ ಅನುಗ್ರಹಗಳು

(1145) ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ನುಡಿದರು. ನಮ್ಮ ಪ್ರಭುವು ಅತ್ಯಂತ ಕಾರುಣ್ಯವಂತನು ಮತ್ತು ಮಹೋನ್ನತನೂ ಆಗಿದ್ದಾನೆ. ಪ್ರತಿ ರಾತ್ರಿ, ರಾತ್ರಿಯ ಅಂತಿಮ ಮೂರನೇ ಭಾಗದಲ್ಲಿ ಸಮೀಪದಲ್ಲಿರುವ ಆಕಾಶದ ಮೇಲೆ ಇಳಿದು ಹೇಳುತ್ತಾನೆ. ಯಾರು ನನ್ನೊಡನೆ ದುಆ ಮಾಡುವನು. ನಾನು ಅವನ ದುಆ ಸ್ವೀಕರಿಸುವೆನು. ಯಾರು ನನ್ನೊಡನೆ ಬೇಡುವನು, ನಾನು ಅವನ ಬೇಡಿಕೆಗಳನ್ನು ಮನ್ನಿಸುವೆನು. ಯಾರು ನನ್ನಲ್ಲಿ ಕ್ಷಮೆ ಬೇಡುವನು. ನಾನು ಅವನನ್ನು ಕ್ಷಮಿಸುವೆನು. **(ಸಹೀಹ್ ಬುಖಾರಿ, ಸಂಪುಟ–2, ಕಿತಾಬುತ್ತಹಜ್ಜುದ್, ಮುದ್ರಣ ಖಾದಿಯಾನ್)**

**ನಮ್ಮ ಈ ಸಂಘಟನೆ ದೇವನ ಕಡೆಯಿಂದ ಸ್ಥಾಪಿತವಾದುದಲ್ಲವೆಂದಾದರೆ ಯಾವುದೇ ಸಮುದಾಯದ ಇತಿಹಾಸದಿಂದ ತೋರಿಸಿಕೊಡಲಿ. ಅಲ್ಲಾಹನ ಮೇಲೆ ಸುಳ್ಳು ಹೇಳಿಯೂ ಅವನಿಗೆ ರಿಯಾಯಿತಿ ದೊರೆತಿರಬೇಕು.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಸುಳ್ಳುಗಾರನಿಗೆ ಎಂದೂ ರಿಯಾಯಿತಿ ದೊರೆಯುವುದಿಲ್ಲ

ನಮ್ಮ ದೇವವಾಣಿ ಹಾಗೂ ದೇವ ಸಂಭಾಷಣೆಗಳು ಪ್ರಕಟಣೆಗೊಂಡು ತುಂಬ ವರ್ಷಗಳಾಗಿವೆ. ಬರಾಹೀನೆ ಅಹ್ಮದಿಯಾ ಪ್ರಕಟಗೊಂಡ ಸಮಯ ಹಿಡಿದರೆ ಸುಮಾರು ಇಪ್ಪತ್ತು ವರ್ಷಗಳು ಕಳೆದಿವೆ. ನಮ್ಮ ವಿರೋಧಿಗಳು ನಮ್ಮನ್ನು ಸುಳ್ಳುಗಾರರು ಹಾಗೂ ನನ್ನನ್ನು ಮಿಥ್ಯವಾದಿ ಎನ್ನುವರು. ಯಾರೊಂದಿಗಾದರೂ ಪ್ರಶ್ನಿಸಿ ಅಲ್ಲಾಹನು ಇಂತಹ ಮಿಥ್ಯವಾದಿಯನ್ನು, ಅಂದರೆ ಯಾರು ಅವನೊಂದಿಗೆ ಸಂಭಾಷಣೆಯ ಅಥವಾ ದೇವವಾಣಿಯ ಸುಳ್ಳುವಾದ ಮಾಡಿದರೆ ದೇವನು ಅವನಿಗೆ ರಿಯಾಯಿತಿ ನೀಡುವುದಿಲ್ಲ. ರಸೂಲುಲ್ಲಾಹ್(ಸ) ರವರು ಸಹ ಹೇಳಿದರು. ತನ್ನ ಕಡೆಯಿಂದ ಹೇಳಿದ ಮಾತುಗಳನ್ನು ದೇವನಿಂದ ಪಡೆದದ್ದು ಎಂದು ಹೇಳಿದರೆ ದೇವನು ಅವನ ಜೀವನಾಡಿಯನ್ನೇ ಕೊಯ್ಯುವನು. ಅಂದ ಮೇಲೆ ಯಾರು ತಾನೇ ಹೇಗೆ ಉಳಿಯುವವರು? ಇದರಿಂದ ಸ್ಪಷ್ಟವಾಗಿ ತಿಳಿದುಬರುವುದೇನೆಂದರೆ ಅಲ್ಲಾಹನು ದೇವವಾಣಿಯ ಸುಳ್ಳುವಾದಿಗಳಿಗೆ ಎಂದೂ ರಿಯಾಯಿತಿ ನೀಡುವುದಿಲ್ಲ. ಅಂದ ಹಾಗೆ ನಾವು ಕೇಳುವುದು ನಮ್ಮ ಈ ಸಂಘಟನೆ ದೇವನ ಕಡೆಯಿಂದ ಸ್ಥಾಪಿತವದುದಲ್ಲವೆಂದಾದರೆ ಯಾವುದೇ ಸಮುದಾಯದ ಇತಿಹಾಸದಿಂದ ತೋರಿಸಿಕೊಡಲಿ. ಅಲ್ಲಾಹನ ಮೇಲೆ ಸುಳ್ಳು ಹೇಳಿಯೂ ಅವನಿಗೆ ರಿಯಾಯಿತಿ ದೊರೆತಿರಬೇಕು. ನಮಗೆ ರಸೂಲುಲ್ಲಾಹ್(ಸ) ರವರ 23 ವರ್ಷಗಳ ದೀರ್ಘವಾದ ಅವಧಿ ಒಂದು ಸ್ಪಷ್ಟವಾದ ಮಾನದಂಡವಾಗಿದೆ. ಆ ಸತ್ಯಸಂಧ ಮತ್ತು ಪರಿಪೂರ್ಣರಾದ ನಬಿಯವರ ಕಾಲಾವಧಿಗೆ ಹೋಲುವಂತಹ ಕಾಲಾವಧಿ ಅಲ್ಲಾಹನು ದಯಪಾಲಿಸಿದ್ದಾನೆ. ಏಕೆಂದರೆ ಬರಾಹೀನೆ ಅಹ್ಮದಿಯಾ ಪ್ರಕಟಗೊಂಡು 20 ವರ್ಷಗಳು ಕಳೆದಿವೆ. ಅದು ಅಂಧವಿಶ್ವಾಸಿ ಆರೋಪಿಗಳ ದೃಷ್ಟಿಯಲ್ಲಿ ಮಿಥ್ಯವಾದದ ಪ್ರಥಮ ಕಾಲವಾಗಿದೆ. ಈಗಂತೂ ನಾವು ಒಂದು ದೃಢೀಕೃತ ಸತ್ಯ ಅಲ್ಲದೇ ಎಲ್ಲ ಸತ್ಯಸಂಧ ಸರದಾರರಿಗೆ ಹೋಲುವ ಕಾಲಾವಧಿ ಪ್ರಸ್ತುತಪಡಿಸುತ್ತಿದ್ದೇವೆ. ಈ ಅತಿಕರ್ಮಿಗಳು ಈಗಲೂ ಸಹ ಸುಳ್ಳುಗಾರನೆಂದೇ ಕರೆಯುತ್ತಿದ್ದಾರೆ. ಅಕಟಕಟ! ನಮಗೆ ಸುಳ್ಳುವಾದಿ  ಎನ್ನುವ ಚಪಲದಲ್ಲಿ ರಸೂಲುಲ್ಲಾಹ್(ಸ) ರವರ ಮೇಲೂ ಈ ಆರೋಪ ಹೊರಿಸಿದಂತಾಗುತ್ತದೆ ಎಂಬುದು ಸಹ ಲೆಕ್ಕಿಸುವುದಿಲ್ಲ. ಏಕೆಂದರೆ ಇಪ್ಪತ್ತು ಇಪ್ಪತ್ತೆರಡು ವರ್ಷಗಳವೆಗೂ ಅಲ್ಲಾಹನು ಒಬ್ಬ ಸುಳ್ಳುಗಾರನಿಗೆ ರಕ್ಷಣೆ ನೀಡಬಹುದಾಗಿದೆ ಎಂದರೆ ನನಗೆ ಆಶ್ಚರ್ಯವಾಗುತ್ತದೆ, ಅಷ್ಟೇ ಅಲ್ಲ ಇವರು ರಸೂಲುಲ್ಲಾಹ್(ಸ) ರವರ ಸತ್ಯತೆಗೆ ಯಾವ ಸಾಕ್ಷ್ಯ ನೀಡುವರು? ಎಂದು ಯೋಚಿಸಿ ನನ್ನ ಹೃದಯ ಕಂಪನಗೊಳ್ಳುತ್ತದೆ. ಒಬ್ಬ ಮುಸಲ್ಮಾನನಾಗಿ, ರಸೂಲುಲ್ಲಾಹ್(ಸ) ನಿಷ್ಠಾವಂತ ಅನುಯಾಯಿಯಾಗಿ ಇಷ್ಟೊಂದು ದೀರ್ಘವಾದ ಅವಧಿಯ ಒಬ್ಬ ಮಿಥ್ಯವಾದಿ ರಿಯಾಯಿತಿ ಪಡೆದದ್ದನ್ನು ಕಂಡರೆ ಎಂದೂ ಅವರ ಬಾಯಿಯಿಂದ ಸುಳ್ಳುಗಾರ ಎಂದು ಹೊರಡಲು ಸಾಧ್ಯವಿಲ್ಲ. ಅವನ ಸತ್ಯತೆಗೋಸ್ಕರ ಯಾವುದೇ ಬೇರೆ ದೃಷ್ಟಾಂತ ಅಥವಾ ಪುರಾವೆ ದೊರಕಲಿಲ್ಲವಾದರೂ ಒಬ್ಬ ಸತ್ಯವಂತ ಮುಸಲ್ಮಾನನು ನಿರಾಕರಿಸಲು ಮುಂದಾಗಲಿಕ್ಕಿಲ್ಲ. ಏಕೆಂದರೆ ಅವರ ಕಾಲಾವಧಿ ರಸೂಲುಲ್ಲಾಹ್(ಸ) ರವರ ಕಾಲಾವಧಿಗೆ ಹೋಲುತ್ತದೆ. **(ಮಲ್ಫೂಝಾತ್ ಸಂಪುಟ–1, ಪುಟ–274, ಮುದ್ರಣ ಖಾದಿಯಾನ್ 2018)**

**ಮನುಷ್ಯನು ಕೊಡುವ ಶಿಕ್ಷೆಯ ಪರಿಣಾಮ ಕೇವಲ ಅವನ ಶರೀರದ ಮೇಲೆ ಆಗುತ್ತದೆ. ಆದರೆ ಅದು ಹೃದಯವನ್ನು ಗೆಲ್ಲುವ ಶಕ್ತಿ ಹೊಂದಿರುವುದಿಲ್ಲ ಆದರೆ ಅಲ್ಲಾಹನು ಹೃದಯಗಳ ಮೇಲು ಪ್ರಭುತ್ವ ಹೊಂದಿದವನಾಗುತ್ತಾನೆ. ಆದುದರಿಂದ ಅವನ ಶಿಕ್ಷೆ ಕೇವಲ ಶರೀರಗಳ ಮೇಲೆ ಅವತರಿಸುವುದಿಲ್ಲ. ಬದಲು ಹೃದಯಗಳ ಮೇಲೂ ಅವತರಿಸುತ್ತದೆ. ಹೀಗೆ ಹೃದಯಗಳನ್ನು ಶುದ್ಧಗೊಳಿಸಲಾಗುತ್ತದೆ.**

**ವಲೌಅನ್ನ ಲಿಕುಲ್ಲಿ ಝುಲಮತ್ ಮಾ ಫಿಲ್ ಅರ್‌ಝಿ ಲಫ್‌ತದತ್‌ಬಿಹೀ, ವಸರ್‍ರುನ್ನದಾಮತ ಲಮ್ಮಾ ರಅಉಲ್ ಅಝಾಬ, ವಖುಝಿಅ ಬೈನಹುಮ್ ಬಿಲ್‌ಖಿಸ್ತಿ ವಹುಮ್ ಲಾ ಯುಝ್‌ಲಮೂನ್** (ಸೂರಃ ಯೂನುಸ್ ವಚನ 55ರ ವ್ಯಾಖ್ಯಾನ (ತಫ್ಸೀರ್) ಮಾಡುತ್ತ ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ (ದ್ವಿತೀಯ

ಹೇಳುತ್ತಾರೆ. "ಮಾನವ ಪ್ರಕೃತಿ ಹೇಗಿದೆ ಎಂದರೆ ಅವನ ಮೇಲೆ ಶಿಕ್ಷೆಯ ಪರಿಣಾಮ ಎರಡು ರೀತಿಯಲ್ಲಿ ಹೊರಬರುತ್ತದೆ. ಕೆಲವರು ಶಿಕ್ಷೆಯಿಂದ ಇನ್ನಷ್ಟು ಉಗ್ರರಾಗುತ್ತಾರೆ ಮತ್ತು ಎದುರಿಸ ಬಯಸುತ್ತಾರೆ. ಕೆಲವರು ಸೋತುಬಿಡುತ್ತಾರೆ. ಅಲ್ಲಾಹನು ಹೇಳುವನು. ನಮ್ಮ ಶಿಕ್ಷೆ ಸಂಶಯಾಸ್ಪದ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**
ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرٌّ مَا فِی الْعَالَمِ ✿ شَرَّ السُّمُوْمِ عَدَاوَۃُ الصُّلَحَاءِ

## ನೂರುಲ್–ಹಖ್ ಗ್ರಂಥದ ಪ್ರತಿರೂಪ ಬರೆದರೆ ಪಾದರಿ ಇಮಾಮುದ್ದೀನ್‌ಗೆ ಐದು ಸಾವಿರ ರೂಪಾಯಿಗಳ ಬಹುಮಾನ.

ಹಿಂದಿನ ಸಂಚಿಕೆಯಲ್ಲಿ ನಾವು ಇಮಾಮುದ್ದೀನ್‌ನ ಬರಹಗಳು ಹೇಗಿದ್ದವು ಎಂಬುದನ್ನು ವಿವರಿಸಿದ್ದೆವು. ಇಮಾಮುದ್ದೀನ್ ಯಾವ ಗುಣಗಳ ಮನುಷ್ಯನಾಗಿದ್ದ ಅಂತಿಮವಾಗಿ ಮುಸ್ಲಿಂ ಪಂಡಿತರು, ಇಸ್ಲಾಂನಂತಹ ಉನ್ನತ ಪರಮೋಚ್ಚ ಧರ್ಮವನ್ನು ಬಿಟ್ಟು ಕ್ರೈಸ್ತರ ಮಡಿಲಿನಲ್ಲಿ ಏಕೆ ಸೇರುತ್ತಿದ್ದರು ಎಂಬುದನ್ನು ವಿವರಿಸಿದೆವು. ಈ ಸಂಚಿಕೆಯಲ್ಲಿ ನಾವು ಪಾದರಿ ಇಮಾದುದ್ದೀನ್ ಪವಿತ್ರ ಖುರ್‌ಅನ್‌ನ ಮೇಲೆ ಮಾಡಿದ ಆರೋಪಗಳು ಮತ್ತು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಉತ್ತರವನ್ನು ಪ್ರಸ್ತುತಪಡಿಸುವೆವು.

ಪಾದರಿ ಇಮಾಮುದ್ದೀನ್ ಮುಂಚೆಯೂ ಸಹ ತನ್ನ ಗ್ರಂಥ "ಹಿದಾಯತುಲ್ ಮುಸ್ಲಿಮೀನ್" ನಲ್ಲಿ ಪವಿತ್ರ ಖುರಅನ್‌ನ ಸಾಹಿತ್ಯ ವಾಕ್‌ಚಾತುರ್ಯಗಳ ಬಗ್ಗೆ ಆರೋಪವನ್ನು ಹಚ್ಚಿದ್ದ. ಅದರ ಉತ್ತರ ಸಯ್ಯದ್‌ನಾ ಹಜ್‌ರತ್ ಮಸೀಹ್ ಮೌಊದ್(ಅ) ತನ್ನ ಮೇರುಕೃತಿಯಾದ ಬರಾಹೀನ್ ಅಹ್ಮದಿಯಾದಲ್ಲಿ ನೀಡಿದ್ದರು. ಅವನಿಗೆ ಪಂಥಹ್ವಾನ ನೀಡಿದ್ದರು. ಅವನು ಅರಬರ ರೀತಿಯಲ್ಲಿ ಸರಳವಾದ ಭಾಷೆಯಲ್ಲೇ ಸಾಬೀತು ಮಾಡಿದರೆ, ಅವನಿಗೆ ನಾನು ತಕ್ಷಣದಿಂದ ಐವತ್ತು ರೂಪಾಯಿ ನಗದು ಬಹುಮಾನ ನೀಡುವೆನು. ಇಮಾದುದ್ದೀನ್ ಈ ಪಂಥಾಹ್ವಾನ ಸ್ವೀಕರಿಸಲಿಲ್ಲ. ಅವನು ಮೌನವಾಗಿದ್ದು ತನಗೆ ಅರಬಿ ಭಾಷೆ ಬರುವುದಿಲ್ಲವೆಂಬುದನ್ನು ಸಾಬೀತುಪಡಿಸಿದ್ದಾನೆ. ಅದರ ವಿವರ ನಾವು ಬದರ್ ಪತ್ರಿಕೆ 26 ಮಾರ್ಚ್ 2020 ಸಂಚಿಕೆಯಲ್ಲಿ ನೀಡಿರುತ್ತೇವೆ. ಅದು ಪಾದರಿ ಇಮಾಮುದ್ದೀನನ ನಾಚಿಕೆಗೇಡಿತನವಾಗಿದೆ. ಅವನು ತನ್ನ ಅಪಮಾನವನ್ನು ಮರೆಯಾಚಿಸಿ ಪುನಃ ಪವಿತ್ರ ಖುರ್‌ಆನ್‌ನ ಸಾಹಿತ್ಯ ವಾಕ್‌ಚಾತುರ್ಯಗಳ ಬಗ್ಗೆ ಆರೋಪಗಳನ್ನು ಹೊರಿಸಿದ್ದಾನೆ. "ಪವಿತ್ರ ಖುರ್‌ಆನ್ ತನ್ನ ಸಾಹಿತ್ಯ ಪ್ರದರ್ಶಿಸುವುದಿಲ್ಲ. ಬದಲು ಅದರಲ್ಲಿ ಕುಂದುಕೊರತೆಗಳು ಎದ್ದು ಕಾಣುತ್ತವೆ. ಅದು ಮಿಥ್ಯ ಹಾಗೂ ಅಪಶಬ್ಧಗಳಿಂದ ಮುಕ್ತವಲ್ಲ. ಅದರಲ್ಲಿ ಅನುಪಯುಕ್ತ ಪದಗಳು ಮತ್ತು ಅಶ್ಲೀಲ ಪದಗಳಿವೆ. ಉತ್ತಮ ಸಾಹಿತ್ಯಕ ಅರಬಿಯಲ್ಲ." ಅದರ ಅತ್ಯಂತ ಸೂಕ್ತವಾದ ಮತ್ತು ಜ್ಞಾನಯುಕ್ತ ಉತ್ತರ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರು ಕೊಟ್ಟಿದ್ದನ್ನು ನಾವು ಇಲ್ಲಿ ಪ್ರಸ್ತುತಪಡಿಸುತ್ತಿದ್ದೇವೆ.

### ಪವಿತ್ರ ಖುರ್‌ಆನ್‌ನ ಭಾಷಿಕರೆ ಅದರ ಸಾಹಿತ್ಯಕ ಉನ್ನತಿಯನ್ನು ಒಪ್ಪಿಕೊಂಡಿದ್ದರು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರ ಆರೋಪದ ಉತ್ತರವಾಗಿ ಹೇಳುತ್ತಾರೆ. ಓ ಮೂಢನೇ! ನೀನು ಈ ಗ್ರಂಥದ ಮೇಲೆ ಹಲ್ಲೆ ನಡೆಸಲು ಹೇಗೆ ಸಾಧ್ಯವಾದೀತು. ಅದು ದೊಡ್ಡ ದೊಡ್ಡ ವಿದ್ವಾಂಸರನ್ನೇ ಮೌನವಾಗಿಸಿದೆ. ಕಾಲದ ಪ್ರಸಿದ್ಧ ಪಂಡಿತರನ್ನೇ ತನ್ನ ನ್ಯಾಯಪೂರ್ತಿಕರಣ ಸಾಬೀತುಪಡಿಸಿದೆ. ಸಾಹಿತ್ಯಗಾರರೇ ಅದರ ಮುಂದೆ ತಲೆಬಾಗಿಸಿದ್ದಾರೆ. ಉನ್ನತ ದರ್ಜೆಯ ಕವಿಗಳೆ ಅದರ ಮೇಲೆ ವಿಶ್ವಾಸ ಹೊಂದಿದ್ದಾರೆ. ಅದರ ಮಹಾನತೆಯನ್ನು ವಿನೀತರಾಗಿ ಒಪ್ಪಿಕೊಂಡಿರುವರು. ಅಂತೂ ಭಾಷಾ ಪಾಂಡಿತ್ಯದಲ್ಲಿ ನೀನು ಅವರಿಗಿಂತ ಮೀರಿರುವನೇ! ತಪ್ಪು ಯಾವುದು? ಸರಿ ಯಾವುದು? ಎಂದು ಕಂಡು ಹಿಡಿಯುವುದರಲ್ಲಿ ನೀನು ಅವರಿಗಿಂತ ಹೆಚ್ಚು ಶಕ್ತಿಯುಳ್ಳವನೇ! ಒಂದೋ ನೀನು ಹುಚ್ಚನೇ ಸರಿ. ಇಲ್ಲವಾದರೆ ನಿನಗೆ ಅದರ ಭಾಷಾ ಪಾಂಡಿತ್ಯದ ಕುರಿತು ಯಾವ ಮಾಹಿತಿಯೂ ಇಲ್ಲ. ಅವರು ಉನ್ನತ ದರ್ಜೆಯ ವಾಗ್ಮಿಯಾಗಿದ್ದರು. ಭಾಷಾ ಪಾಂಡಿತ್ಯದಿಂದ ಸುಂದರ ವರ್ಣನೆಯಿಂದ ಜನರ ಮನಸ್ಸುಗಳನ್ನು ಸೂರೆಗೊಳ್ಳುತ್ತಿದ್ದರು. ಅವರು ಅರಬಿ ಸಾಹಿತ್ಯದಲ್ಲಿ ತಜ್ಞತೆಯನ್ನು ಹೊಂದಿದ್ದರು. **(ನೂರುಲ್ ಹಖ್, ಭಗ–1, ರೂಹಾನಿ ಖಝಾಈನ್ ಸಂಪುಟ–8, ಪುಟ–145)**

### ಖುರ್‌ಆನ್ ತನ್ನ ಸಾಹಿತ್ಯ ವಾಕ್‌ಚಾತುರ್ಯದ ದಾವೆಯು ಆ ಕಾಲಘಟ್ಟದ ವಿದ್ವಾಂಸರ ಸಾಹಿತ್ಯಗಾರರ ಮಧ್ಯೆ ಮಂಡಿಸಿತ್ತು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅರುಹಿದರು. ಖುರ್‌ಆನ್ ತನ್ನ ವಾಕ್‌ಚಾತುರ್ಯದ ಮಹಿಮೆಯನ್ನು ಮೈದಾನದ ಬಟ್ಟೆ ಬಯಲಿನಲ್ಲಿ ಮಾಡಿದ್ದನ್ನು ನೀನು ಅರಿಯಲಿಲ್ಲವೇ. ಏಕೆಂದರೆ ಆ ಕಾಲಘಟ್ಟದಲ್ಲಿಯೂ ಮಹೋನ್ನತ ವಿದ್ವಾಂಸರು, ಸಾಹಿತ್ಯಗಾರರು ಉಪಸ್ಥಿತರಿದ್ದರು. ಪರಸ್ಪರ ಗೌರವಪಡುವ ವಿಷಯ ಅವರ ಸಾಹಿತ್ಯ ವಾಚನ ಮತ್ತು ಭಾಷಣಗಳಲ್ಲಿ ಅಡಗಿತ್ತು. ಅಲ್ಲದೇ ಭಾಷಾ ಸೌಂದರ್ಯದ ಮೇಲೆ ಗೌರವ ಹೊಂದಿದ್ದರು. ಹೊಸ ಹೊಸ ಪದ್ಯ ಸಾಹಿತ್ಯ ಮತ್ತು ಪರಿಶುದ್ಧ ಭಾಷಣಗಳ ಸ್ಪರ್ಧೆ ನಡೆಯುತ್ತಿತ್ತು. ಅವರು ದೀರ್ಘ ಕಾಲಗಳಿಂದ ಪದ್ಯ ಮತ್ತು ಗದ್ಯ ಸಾಹಿತ್ಯದಲ್ಲಿಲ್ಲ ಮುಂದುವರೆದವರಾಗಿದ್ದರು. ತಮ್ಮ ಸಮಾಜದಲ್ಲಿ ಖ್ಯಾತಿ ಪಡೆದವರಾಗಿದ್ದರು. ಭಾಷ ಸಾಹಿತ್ಯ ಮೈದಾನದಲ್ಲಿ ಪರಿಣತಿ ಹೊಂದಿದವರಾಗಿದ್ದರು. ಅಲ್ಲಾಹನು ಅವರನ್ನು ಸಂಬೋಧಿಸಿ ಹೇಳಿದನು. ತನ್ನ ದಾಸನ ಮೇಲೆ ನಾವು ಇಳಿಸಿದ ಈ ಗ್ರಂಥದ ಮೇಲೆ ನಿಮಗೆ ಏನಾದರೂ ಸಂಶಯವಿದ್ದರೆ. ನೀವು ಸಹ ಯಾವುದೇ ಸೂರ (ಅಧ್ಯಾಯ) ಅದರಂತೆ ಸೃಷ್ಟಿಸಿ ತೋರಿಸಿ, ಸೃಷ್ಟಿಸಲು ಸಾದ್ಯವಾಗಲಿಲ್ಲ ಎಂದಾದರೆ, ನೆನಪಿಡಿರಿ" ಖಂಡಿತವಾಗಿಯೂ ಸಾಧ್ಯವಾಗಲಿಕ್ಕಿಲ್ಲ. ಅಂತೂ ಆ ಅಗ್ನಿಯಿಂದ ಭಯಪಡಿರಿ. ಮನುಷ್ಯ ಮತ್ತು ಕಲ್ಲುಗಳು ಅದರ ಇಂಧನವಾಗಿರುವುದು. ಆ ಅಗ್ನಿ ಧಿಕ್ಕಾರಿಗಳಿಗಾಗಿ ತಯಾರಿಸಲ್ಪಟ್ಟಿದೆ. (ಅದೇ ಪುಟ 145)

### ಎಲ್ಲಾ ಜಿನ್ ಮತ್ತು ಇನ್ಸ್‌ಗಳಿಗೆ ಖುರ್‌ಆನ್‌ನ ಪಂಥಾಹ್ವಾನ ಮತ್ತು ಎಲ್ಲರ ಪರಿಪೂರ್ಣ ಮೌನವಹಿಸುವಿಕೆ

ಎಲ್ಲ ಜಿನ್ನ ಮತ್ತು ಇನ್ಸ್‌ಗಳು ಒಟ್ಟು ಸೇರಿ ಖುರ್‌ಆನ್‌ನ ಪ್ರತಿರೂಪ ಸೃಷ್ಟಿಸ ಬಯಸಿದರೆ ನಿಶ್ಚಯವಾಗಿಯೂ ಸೃಷ್ಟಿಸಲಾರರು. ಅದಾಗ್ಯೂ ಅವರು ಒಬ್ಬರು ಇನ್ನೊಬ್ಬರ ಸಹಾಯ ಪಡೆದವರು ಸರಿ. ಆದುದರಿಂದ ಅವಿಶ್ವಾಸಿಗಳು ಎದುರಿಸಿದಂತಾಯಿತು ಮತ್ತು ಸೋಲನ್ನು ಒಪ್ಪಿಕೊಂಡು ಬೆನ್ನು ತಿರುಗಿಸಿದರು. ಹಲವರು ಖುರ್‌ಆನ್‌ನ ಪಾಂಡಿತ್ಯ ಒಪ್ಪಿಕೊಂಡು ವಿಶ್ವಾಸ ತಂದರು. ಉದಾಹರಣೆಗೆ ಲುಬೇದ್ ಬಿನ್ ರಖಿಅತುಲ್ ಆಮಿರಿ ಅವರು ಮುಅಲ್ಲಿಖ ರಾಬಿ ಗ್ರಂಥದ ಲೇಖಕರಾಗಿದ್ದರು. ಅವರು ಇಸ್ಲಾಮಿನ ಕಾಲಘಟ್ಟ ಕಂಡಾಗ ಇಸ್ಲಾಂ ಸ್ವೀಕರಿಸಿದುರ. ಪೂರ್ಣ ನಿಷ್ಠೆ ತೋರಿದರು. 41 ವಯಸ್ಸಿನಲ್ಲಿ ನಿಧನಗೊಂಡರು. ಅದೇ ರೀತಿ ಹಲವರು ಖುರ್‌ಆನ್‌ನ ವಾಕ್‌ಚಾತುರ್ಯವನ್ನು ಒಪ್ಪಿಕೊಂಡು ಹೇಳಿದರು. ನಿಜವಾಗಿಯೂ ಖುರ್‌ಆನ್ ಬರಹವು ಪರಿಶುದ್ಧವಾಗಿದೆ. ಅಹ್ಲಾದಕರವಾಗಿದೆ. ಉದಾಹರಣೆ ಸಹಿತ ಒಳಗೂಡಿ ಮಾರ್ಮಿಕ ಭಾಷಣಗಳಿಂದ, ಜ್ಞಾನಯುಕ್ತ ವಿಷಯಗಳಿಂದ ತುಂಬಿಹೋಗಿದೆ. ಅಲ್ಲದೇ, ಯಾರೆಲ್ಲ ಅದರ ಬಗ್ಗೆ ಚಿಂತಿಸಿ ನೋಡಿದರೋ ಅವರು ಇಸ್ಲಾಮಿನತ್ತ ಸೆಳೆಯಲ್ಪಟ್ಟರು ಮತ್ತು ವಿಶ್ವಾಸಿಗರಲ್ಲಿ ಸೇರಿಕೊಂಡರು. ಅರಬ್ಬದ ಅವಿಶ್ವಾಸಿಗಳು ಸಹ ಖುರ್‌ಆನ್‌ನ ಈ ದಾವೆಯ ಬಗ್ಗೆ ಯಾವ ಚಕಾರವು ಎತ್ತಲಿಲ್ಲ. ಬದಲು ಖುರ್‌ಆನ್‌ನ ಮಹಾನತೆ ವಾಕ್‌ಚಾತುರ್ಯವನ್ನು ಒಪ್ಪಿಕೊಂಡರು. ಅದರ ಮಹೋನ್ನತವಾದ ವಾಕ್‌ಚಾತುರ್ಯ ಕಂಡು ಬೆರಗಾದರು. ಮತ್ತು ಹೇಳಿದರು. ಅದಂತೂ ನಿಚ್ಚಳವಾದ ಮಹಿಮೆಯಾಗಿದೆ. (ಅದೇ ಪುಟ 146)

### ಪವಿತ್ರ ಖುರ್‌ಆನ್‌ನ ಪವಾಡ ಮತ್ತು ಅದರ ಮಹೋನ್ನತವಾದ ಸ್ಥಾನಮಾನ.

ಹಲವರು ಖುರ್‌ಆನ್‌ನ ಈ ಪವಾಡದ ಮೇಲೆ ವಿಶ್ವಾಸ ಹೊಂದಿದವರಾಗಿದ್ದಾರೆ ಮತ್ತು ಒಪ್ಪಿ ಹೇಳುತ್ತಿದ್ದಾರೆ. ವಾಸ್ತವವಾಗಿಯೂ ಖುರ್‌ಆನ್‌ನ ಈ ಪವಾಡದ ಮುಂದೆ ನಾವು ವಿವಶರಾಗಿದ್ದೇವೆ. ಈ ಗ್ರಂಥವು ಎಲ್ಲ ಮಾನವೀಯ ಗ್ರಂಥಗಳ ಮೇಲೆ ಮೇಲುಗೈ ಸಾಧಿಸಿದೆ.

ಅದು ಇಡಿಯಾಗಿ ತಿರುಳು ಹೊಂದಿದೆಯೇ ಹೊರತು ಸಪ್ಪೆ ಅಲ್ಲ. ಅದು ಸೂರ್ಯನಂತೆ ಹೊಳಪು ಹೊಂದಿದೆ. ಅದರಲ್ಲಿ ರಸವಿದೆ. ಅದು ಧಾರಾಳವಾದ ಸಿಹಿಯದ ಸ್ವಚ್ಛವಾದ ನೀರಿನಂತಿದೆ. ಎಷ್ಟು ಉಪಯೋಗಿಸಿದರೂ ಕಡಿಮೆ ಆಗದು. ಖುರ್‌ಆನ್‌ನ ಮಹಿಮೆ ಕುರಿತು ತುಟಿಕ್ ಪಿಟಿಕ್ ಅನ್ನಲಿಲ್ಲ. ಅದರ ವಿವರಣೆಯೂ ನೀಡಲಿಲ್ಲ. ಆದರೆ ಈ ಬಗ್ಗೆ ಅವರು ತನ್ನ ಕಾಲ್ಪನಿಕ ಒಂಟೆಗಳನ್ನು ಓಡಿಸಿದರು. ಕೊನೆಯಲ್ಲಿ ಹೆದರಿಕೊಂಡು ಲಜ್ಜಿತರಾಗಿ ಮರಳಿ ಬಂದರು. ಅವರಲ್ಲಿ ಹಲವರು ಖುರ್‌ಆನ್‌ನನ್ನು ಆಲಿಸಿ ಅಳುತ್ತಿದ್ದರು. ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದರು. ಈ ವಿವರ ನಾವು ಪವಿತ್ರ ಖುರ್‌ಆನ್‌ನಲ್ಲಿ ಪಡೆಯುತ್ತೇವೆ. ನಬಿ(ಸ) ರವರ ಹದೀಸುಗಳಲ್ಲಿ ಪಡೆಯುತ್ತೇವೆ. ನಾವು ಇದನ್ನು ತುಂಬು ವಿಶ್ವಾಸದಿಂದ, ಪ್ರಾಮಾಣಿಕವಾಗಿ ಮತ್ತು ನಿಷ್ಠೆಯಿಂದ ಬರೆದಿದ್ದೇವೆ. (ಅದೇ ಪುಟ 148).

### ಇಮಾದುದ್ದೀನ್ ಆರೋಪ ಆಜ್ಞಾನದಿಂದ ಕೂಡಿದೆ. ಅವನಿಗೆ ವಾಕ್‌ಚಾತುರ್ಯದ ಅರ್ಥವೇ ತಿಳಿದಿಲ್ಲ

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಪಾದರಿ ಇಮಾದುದ್ದೀನಿಗೆ ಸಂಬೋಧಿಸಿ ಹೇಳುತ್ತಾರೆ. ನಿನ್ನ ಭಾವನೆ ಪವಿತ್ರ ಖುರ್‌ಆನ್‌ನ ಕೆಲವು ಪದಗಳು ಖುರೇಶರ ಭಾಷೆಗೆ ವಿರುದ್ಧವಾಗಿದೆ. ಇದು ಅಪ್ಪಟ ಅಜ್ಞಾನದಿಂದ ಕೂಡಿದ ಮಾತಾಗಿದೆ. ಸ್ವೇಚ್ಚಾಚಾರದ ಮಾತಾಗಿದೆ. ಆದರೆ ಗಾಂಭೀರ್ಯ ನೈಜತೆಯ ಮಾತಲ್ಲ. ಓ ಮೂಢನೆ ಮತ್ತು ಮೂರ್ಖನೆ ನಿನಗೆ ತಿಳಿದಿರಲಿ.

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರ್‌ರತ್ ಉಸ್ಮಾನ್(ರ) ಸಾಮಾನ್ಯ ವ್ಯಕ್ತಿಯಾಗಿರಲಿಲ್ಲ ಅವರು ಅತ್ಯಂತ ಉನ್ನತ ಮಟ್ಟದ ಸ್ವಭಾವಗುಣಗಳು ಅವರಲ್ಲಿ ಕಾಣಬಹುದಾಗಿತ್ತು. ಹಝ್ರ್‌ರತ್ ಪೈಗಂಬರ್(ಸ) ಅವರೊಡನೆ ಅತ್ಯಂತ ಸಂತುಷ್ಟರಾಗಿದ್ದರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಧುನ್ನೂರೈನ್ ಹಝ್ರ್‌ರತ್ ಉಸ್ಮಾನ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಅಲ್ಲಾಹನಾಣೆ, ನೀವು ನನ್ನನ್ನು ಕೊಂದರೆ, ಮತ್ತೆ ಎಂದಿಗೂ ನಿಮಗೆ ಒಟ್ಟಿಗೆ ನಮಾಝ್ ಮಾಡಲು ಸಾಧ್ಯವಾಗದು. ಎಂದಿಗೂ ಒಗ್ಗಟ್ಟಾಗಿ ಶತ್ರುಗಳ ವಿರುದ್ಧ ಹೋರಾಡಲಾರಿರಿ. ಖಂಡಿತವಾಗಿಯೂ ನೀವು ಪರಸ್ಪರ ಭಿನ್ನತೆ ಹೊಂದುವಿರಿ. (ಹಝ್ರ್‌ರತ್ ಉಸ್ಮಾನ್(ರ))**

**ಹಝ್ರ್‌ರತ್ ಝೈದ್ ಬಿನ್ ಸಾಬಿತ್ ಹಝ್ರ್‌ರತ್ ಉಸ್ಮಾನ್‌ರ(ರ) ಸನ್ನಿಧಿಗೆ ಹೋಗಿ ಹೇಳಿದರು: ಈ ಅನ್ಸಾರರು ಬಾಗಿಲ ಬಳಿ ಇದ್ದಾರೆ. ನೀವು ಇಷ್ಟಪಡುವುದಾದರೆ, ನಾವು ಎರಡನೇ ಬಾರಿ ಅಲ್ಲಾಹನ ಅನ್ಸಾರ್ ಆಗಲು ತಯಾರಿದ್ದೇವೆ. ಆಗ ಹಝ್ರ್‌ರತ್ ಉಸ್ಮಾನ್(ರ) ಹೇಳಿದರು: ಬೇಡ, ಯುದ್ಧ ಖಂಡಿತ ಮಾಡಬೇಡಿರಿ.**

**ನಾಲ್ಕು ದಿವಂಗತರಾದ ಮೌಲವಿ ಮುಹಮ್ಮದ್ ಇದ್ರೀಸ್ ತೇರೂ ಸಾಹಿಬ್, ಯುಗಾಂಡದ ಅಮೀರ್ ಮಿಶನರಿ ಇಂಚಾರ್ಜ್ ಆದ ಮುಹಮ್ಮದ್ ಅಲಿ ಕಾರೇ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಅಮೀನ ನಾಇಗಾ ಕಾರೇ ಸಾಹಿಬ, ಸನ್ಮಾನ್ಯ ಸಿರಿಯದ ನೂಹಿ ಖಝ್ಝುಕ್ ಸಾಹಿಬ್ ಮತ್ತು ರಬ್ವದ ಸನ್ಮಾನ್ಯ ಫರ್ಹತ್ ನಸೀಮ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **12-03-2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

إِيَّاكَ نَعْبُدُ وَإِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರ್‌ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಹಝ್ರ್‌ರತ್ ಉಸ್ಮಾನ್(ರ) ತನ್ನ ನಿಧನಕ್ಕೆ ಒಂದು ವರ್ಷ ಮುಂಚೆ ಕೊನೆಯ ಹಜ್ಜ್ ಕರ್ಮಾನುಷ್ಠಾನ ಮಾಡಿದ್ದರು. ಆ ಸಮಯದಲ್ಲಿ ಗಲಭೆಕೋರರು ತಲೆಯೆತ್ತಲು ಶುರುಮಾಡಿದ್ದರು. ಹಝ್ರ್‌ರತ್ ಮುಆವಿಯ ಇದನ್ನು ಸರಿಯಾಗಿ ಅರಿತ್ತಿದ್ದರು. ಹಝ್ರ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಜ್ಜ್‌ನಿಂದ ಮರಳಿಬರುವಾಗ ಹಝ್ರ್‌ರತ್ ಮುಆವಿಯ(ರ) ಸಹ ಹಝ್ರ್‌ರತ್ ಉಸ್ಮಾನ್‌ರೊಂದಿಗೆ ಮದೀನಕ್ಕೆ ಬಂದರು. ಸ್ವಲ್ಪ ಕಾಲ ಅಲ್ಲಿ ತಂಗಿದ ನಂತರ ಮರಳಿ ಹೋಗುವಾಗ ಅವರು ಹಝ್ರ್‌ರತ್ ಉಸ್ಮಾನ್‌ರನ್ನು(ರ) ಒಬ್ಬಂಟಿಗರಾಗಿ ಭೇಟಿಗರಾಗಿ ಹೀಗೆ ವಿನಂತಿಸಿದರು: ಪಿತೂರಿ ವರ್ಧಿಸುತ್ತಿರುವುದಾಗಿ ತೋರುತ್ತಿದೆ. ನೀವು ಅನುಮತಿ ನೀಡುವುದಾದರೆ, ನಾನು ಅದರ ಬಗ್ಗೆ ಕೆಲವು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಹೇಳುವ ಅನುಮತಿಯನ್ನು ಹಝ್ರ್‌ರತ್ ಉಸ್ಮಾನ್(ರ) ಅವರಿಗೆ ಕೊಟ್ಟರು. ಆಗ ಹಝ್ರ್‌ರತ್ ಮುಆವಿಯ ಹೇಳಿದರು: ನನ್ನ ಮೊದಲ ಸಲಹೆ ಏನೆಂದರೆ, ನೀವು ನನ್ನೊಂದಿಗೆ ಸಿರಿಯಕ್ಕೆ ಬನ್ನಿರಿ. ಏಕೆಂದರೆ, ಸಿರಿಯದಲ್ಲಿ ಎಲ್ಲ ರೀತಿಯ ಸಮಾಧಾನದ ವಾತಾವರಣವಿದೆ ಮತ್ತು ಯಾವುದೇ ವಿಧದ ಕಲಹವಿಲ್ಲ. ಅಚಾನಕ್ಕಾಗಿ ಏನಾದರೂ ಕಲಹ ಉಂಟಾದರೆ, ಏನೂ ಮಾಡಲು ಸಾಧ್ಯವಾಗಲಿಕ್ಕಿಲ್ಲ. ಹಝ್ರ್‌ರತ್ ಉಸ್ಮಾನ್(ರ) ಅವರೊಡನೆ ಹೇಳಿದರು: ನನ್ನ ಶರೀರವನ್ನು ಪುಡಿಪುಡಿಯನ್ನಾಗಿ ಮಾಡಿದರೂ ಹಝ್ರ್‌ರತ್ ಪೈಗಂಬರರ(ಸ) ಸಾಮೀಪ್ಯವನ್ನು ಯಾವುದೇ ರೀತಿಯಲ್ಲಿ ಬಿಡಲು ನನ್ನಿಂದ ಸಾಧ್ಯವಲ್ಲ. ಹಝ್ರ್‌ರತ್ ಮುಆವಿಯ(ರ) ಹೇಳಿದರು: ಹಾಗಾದರೆ, ಎರಡನೇ ಸಲಹೆಯೇನೆಂದರೆ, ಸಿರಿಯದಿಂದ ಒಂದು ಸೈನ್ಯವನ್ನು ನಿಮ್ಮ ಸಂರಕ್ಷಣೆಗಾಗಿ ಕಳುಹಿಸಲು ನನಗೆ ಅನುಮತಿ ಕೊಡಿರಿ. ಸೈನ್ಯವಿದ್ದರೆ ಯಾರೂ ವಿದ್ರೋಹವನ್ನು ಮಾಡಲಾರರು. ಹಝ್ರ್‌ರತ್ ಉಸ್ಮಾನ್(ರ) ಹೀಗೆ ಉತ್ತರಿಸಿದರು: ನನ್ನ ಜೀವದ ಸಂರಕ್ಷಣೆಗಾಗಿ ಇಷ್ಟು ಆರ್ಥಿಕ ಭಾರವನ್ನು ಬೈತುಲ್‌ಮಾಲಿನ ಮೇಲೆ ಹಾಕಲು ನನ್ನಿಂದ ಸಾಧ್ಯವಲ್ಲ. ಮಾತ್ರವಲ್ಲ, ಸೈನ್ಯವನ್ನು ಇರಿಸಿಕೊಂಡು ಮದೀನ ನಿವಾಸಿಗಳಿಗೆ ಕಷ್ಟಕೊಡುವುದನ್ನು ನಾನು ಇಷ್ಟಪಡುವುದಿಲ್ಲ. ಹಝ್ರ್‌ರತ್ ಮುಆವಿಯ(ರ) ಹೇಳಿದರು: ಹಾಗಾದರೆ, ಮೂರನೇ ಸಲಹೆಯೇನೆಂದರೆ, ಹಝ್ರ್‌ರತ್ ಉಸ್ಮಾನ್(ರ) ಇಲ್ಲದಿದ್ದರೆ, ಸಹಾಬರಲ್ಲಿ ಯಾರನ್ನಾದರೂ ಖಲೀಫರನ್ನಾಗಿ ಮಾಡಬಹುದು ಎಂಬ ಧೈರ್ಯ ಜನರಲ್ಲಿ ಇದೆ. ಆದ್ದರಿಂದ ಸಹಾಬರನ್ನು ಬೇರೆ ಬೇರೆ ದೇಶಗಳಿಗೆ ಕಳುಹಿಸೋಣ. ಹಝ್ರ್‌ರತ್ ಉಸ್ಮಾನ್(ರ) ಉತ್ತರಿಸಿದರು: ಹಝ್ರ್‌ರತ್ ಪೈಗಂಬರ್(ಸ) ಒಟ್ಟುಗೂಡಿಸಿದ ಜನರನ್ನು ನಾನು ಹೇಗೆ ಚದುರಿಸುವುದು? ಆಗ ಮುಆವಿಯ ಅತ್ತುಬಿಟ್ಟರು ಮತ್ತು ಹೀಗೆ ಮನವಿ ಮಾಡಿದರು; ನೀವು ಈ ಸಲಹೆಗಳನ್ನು ಅಂಗೀಕರಿಸುವುದಿಲ್ಲವಾದರೆ, ಕನಿಷ್ಠ ಪಕ್ಷ ಹೀಗೆ ಘೋಷಿಸಿರಿ: 'ನನ್ನ ಜೀವಕ್ಕೆ ಏನಾದರೂ ಹಾನಿಯುಂಟಾದರೆ, ನನ್ನ ಪ್ರತಿಕಾರ ತೀರಿಸುವ ಹಕ್ಕು ಮುಆವಿಯಗೆ ಇರುವುದು' ಹಾಗಾದರೆ ಭಯಗೊಂಡು ಬಹುಶಃ ಈ ಜನರು ವಿದ್ರೋಹ ಮಾಡಲಾರರು. ಹಝ್ರ್‌ರತ್ ಉಸ್ಮಾನ್(ರ) ಉತ್ತರಿಸಿದರು: ಹೇ ಮುಆವಿಯ, ಆಗಲಿರುವುದು ಆಗಿಯೇ ಬಿಡುವುದು. ಹಾಗೆ ಘೋಷಿಸಲು ನನ್ನಿಂದ ಸಾಧ್ಯವಲ್ಲ. ಏಕೆಂದರೆ ನೀವು ಕಠಿಣ ಸ್ವಭಾವದವರಾಗಿರುವಿರಿ. ಮುಸ್ಲಿಮರ ಮೇಲೆ ನೀವು ಕಠಿಣವಾಗಿ ವರ್ತಿಸಲು ಸಾಧ್ಯವಿದೆ. ಇದನ್ನು ಕೇಳಿದ ಹಝ್ರ್‌ರತ್ ಮುಆವಿಯ(ರ) ಅಳುತ್ತಾ ಹಝ್ರ್‌ರತ್ ಉಸ್ಮಾನ್‌ರ(ರ) ಸಮೀಪದಿಂದ ಎದ್ದು ಹೀಗೆ ಹೇಳಿದರು: ಇದು ಬಹುಶಃ ನಮ್ಮ ಕೊನೆಯ ಭೇಟಿಯಾಗಿರಬಹುದೆಂದು ನಾನು ಭಾವಿಸುತ್ತೇನೆ. ಅನಂತರ ಅವರು ಹೊರಗೆ ಹೋಗಿ ಸಹಾಬರೊಡನೆ ಹೇಳಿದರು: ಇಸ್ಲಾಮಿನ ಆಧಾರ ನಿಮ್ಮ ಮೇಲಿದೆ. ಹಝ್ರ್‌ರತ್ ಉಸ್ಮಾನ್(ರ) ಈಗ ಪೂರ್ಣವಾಗಿ ಬಲಹೀನರಾಗಿರುವರು ಮತ್ತು ಪಿತೂರಿ ವರ್ಧಿಸುತ್ತಿದೆ. ನೀವು ಅವರ ನಿಗಾವಹಿಸಿ ಕಾಪಾಡಿರಿ. ಹೀಗೆ ಹೇಳಿಕೊಂಡು ಮುಆವಿಯ ಸಿರಿಯದ ಕಡೆಗೆ ರವಾನೆಯಾದರು.

(ಇಸ್ಲಾಮ್ ಮೇ ಇಖ್ತಿಲಾಫಾತ್ ಕಾ ಆಗಾಝ್, ಅನ್ವಾರುಲ್ ಉಲೂಮ್ ಸಂಪುಟ-4, ಪುಟ-285-286)

ಹಝ್ರ್‌ರತ್ ಉಸ್ಮಾನ್‌ರ ದೃಢಸಂಕಲ್ಪ ಮತ್ತು ಧೈರ್ಯದ ಬಗ್ಗೆ ಮುಜಾಹಿದ್ ಹೇಳುತ್ತಾರೆ: ಹಝ್ರ್‌ರತ್ ಉಸ್ಮಾನ್(ರ) ತನ್ನ ಮನೆಯನ್ನು ಸುತ್ತುವರೆದ ಜನರನ್ನು ಇಣುಕಿ ನೋಡಿಕೊಂಡು ಹೇಳಿದರು: ಹೇ ನನ್ನ ಸಮುದಾಯ ನನ್ನನ್ನು ಕೊಲ್ಲಬೇಡಿರಿ. ಏಕೆಂದರೆ ನಾನು ಈ ಕಾಲಘಟ್ಟದ ಖಲೀಫ ಮತ್ತು ನಿಮ್ಮ ಮುಸ್ಲಿಮನಾದ ಸಹೋದರನಾಗಿದ್ದೇನೆ. ನಾನು ಯಾವಾಗಲೂ ನನಗೆ ಸಾಧ್ಯವಾದ ಸುಧಾರಣೆಯನ್ನು ಮಾಡಲು ಪ್ರಯತ್ನಿಸಿದ್ದೆ.. ನನ್ನ ನಿಲುವು ಸರಿಯಾದರೂ ಅಲ್ಲವಾದರೂ. ನನ್ನಿಂದ ತಪ್ಪು ನಡೆದಿದ್ದರೂ. ನೆನಪಿಡಿರಿ, ನನ್ನನ್ನು ನೀವು ಕೊಂದರೆ, ನೀವು ಎಂದಿಗೂ ಒಟ್ಟಿಗೆ ನಮಾಝ್ ಮಾಡಲಾರಿರಿ. ಮಾತ್ರವಲ್ಲ ಒಟ್ಟಿಗೆ ಜಿಹಾದ್ ಮಾಡಲಾರಿರಿ. ಯುದ್ಧ ಸಂಪತ್ತನ್ನು ನ್ಯಾಯಯುತವಾಗಿ ವಿತರಣೆ ಮಾಡಿಸಲು ನಿಮ್ಮಿಂದ ಸಾಧ್ಯವಾಗದು. ವರದಿಗಾರ ಹೇಳುತ್ತಾರೆ: ವಿದ್ರೋಹಿಗಳು ಅದನ್ನೆಲ್ಲ ನಿರಾಕರಿಸಿದಾಗ ಹಝ್ರ್‌ರತ್ ಉಸ್ಮಾನ್(ರ) ಹೇಳಿದರು: ನಾನು ಅಲ್ಲಾಹನ ಹೆಸರಲ್ಲಿ ಕೇಳುತ್ತೇನೆ. ನೀವು ಅಮೀರುಲ್ ಮೂಮಿನೀನ್ ಹಝ್ರ್‌ರತ್ ಉಮರರ ನಿಧನದ ಸಮಯದಲ್ಲಿ, ನೀವೆಲ್ಲರೂ ಒಗ್ಗಟ್ಟಾಗಿ ಇರುವ ವೇಳೆ ಮತ್ತು ಎಲ್ಲರೂ ಧರ್ಮ ಮತ್ತು ಸತ್ಯದಲ್ಲಿ ನೆಲೆನಿಂತಿದ್ದಾಗ, ನೀವು ದುಆ ಮಾಡಿರಲಿಲ್ಲವೇ? ಎಂದರೆ ಖಿಲಾಫತ್‌ನ ಕುರಿತು. ಹಾಗಾದರೆ, ಅಲ್ಲಾಹನು ನಿಮ್ಮ ಪ್ರಾರ್ಥನೆಗಳನ್ನು ಸ್ವೀಕರಿಸಲಿಲ್ಲವೆಂದು ಅಥವಾ ಅಲ್ಲಾಹನಿಗೆ ಈಗ ಧರ್ಮದ ಯಾವುದೇ ಪರಿವೆಯಿಲ್ಲವೆಂದು ಅಥವಾ ನಾನು ಖಡ್ಗದ ಬಲದಿಂದ ಖಿಲಾಫತ್ ಸ್ಥಾನವನ್ನು ವಶಪಡಿಸಿರುವೆನು ಎಂದು ಮುಸ್ಲಿಮರ ಸಮಾಲೋಚನೆ ಪ್ರಕಾರ

ಪಡೆದಿರಲಿಲ್ಲವೆಂದು ಅಥವಾ ನನ್ನ ಖಿಲಾಫತಿನ ಆರಂಭಿಕ ಕಾಲಘಟ್ಟದ ಬಗ್ಗೆ ಅಲ್ಲಾಹನಿಗೆ ಗೊತ್ತಿರಲಿಲ್ಲವೆಂದು ಅದರ ಬಗ್ಗೆ ಅಲ್ಲಾಹನಿಗೆ ನಂತರ ಗೊತ್ತಾಯಿತು ಎಂದು ನೀವು ಹೇಳುತ್ತಿದ್ದೀರಾ? ಅಲ್ಲಾಹನು ಎಲ್ಲವನ್ನು ಬಲ್ಲವನು ಅಲ್ಲವೇ? ಆಗಲೂ ಮುತ್ತಿಗೆ ಹಾಕಿದವರು ಹಝ್ರತ್ ಉಸ್ಮಾನ್‌ರ ಮಾತುಗಳನ್ನು ಸಮ್ಮತಿಸಲಿಲ್ಲ. ಆಗ ಹಝ್ರತ್ ಉಸ್ಮಾನ್(ರ) ಹೀಗೆ ದುಆ ಮಾಡಿದರು: ಹೇ ಅಲ್ಲಾಹ್, ನೀನು ಅವರ ಸರಿಯಾಗಿ ಲೆಕ್ಕ ತೆಗೆ, ಎಲ್ಲರನ್ನು ಹಿಡಿದು ಕೊಲ್ಲು, ಇವರಲ್ಲಿ ಯಾರನ್ನೂ ಬಿಡಬೇಡ. ಮುಜಾಹಿದ್ ಹೇಳುತ್ತಾರೆ: ಈ ಫಿತ್ನದಲ್ಲಿ ಭಾಗಿಯಾಗಿದ್ದ ಎಲ್ಲರನ್ನು ಅಲ್ಲಾಹನು ನಾಶಪಡಿಸಿದನು.

(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-38, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996)

ಅಬೂಲೈಲಿ ಖಿಂದಿ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್‌ರ(ರ) ಮನೆ ವಿದ್ರೋಹಿಗಳಿಂದ ಸುತ್ತುವರೆಯಲ್ಪಟ್ಟಿದ್ದಾಗ, ಅವರು ಒಂದು ಕಿಟಕಿಯಿಂದ ಇಣುಕಿಕೊಂಡು ಹೇಳಿದರು: ಹೇ ಜನರೇ, ನನ್ನನ್ನು ಕೊಲ್ಲಬೇಡಿರಿ. ನನ್ನದೇನಾದರೂ ತಪ್ಪಿದ್ದರೆ, ನನಗೆ ಪಶ್ಚಾತ್ತಾಪ ಮಾಡುವ ಅವಕಾಶವನ್ನು ಕೊಡಿರಿ. ಅಲ್ಲಾಹನಾಣೆ, ನೀವು ನನ್ನನ್ನು ಕೊಂದರೆ, ಮತ್ತೆ ಎಂದಿಗೂ ನಿಮಗೆ ಒಟ್ಟಿಗೆ ನಮಾಝ್ ಮಾಡಲು ಸಾಧ್ಯವಾಗದು. ಎಂದಿಗೂ ಒಗ್ಗಟ್ಟಾಗಿ ಶತ್ರುಗಳ ವಿರುದ್ಧ ಹೋರಾಡಲಾರಿರಿ. ಖಂಡಿತವಾಗಿಯೂ ನೀವು ಪರಸ್ಪರ ಭಿನ್ನತೆ ಹೊಂದುವಿರಿ. ವರದಿಗಾರ ಹೇಳುತ್ತಾರೆ: ಹಝ್ರತ್ ಉಸ್ಮಾನ್(ರ) ಎರಡು ಕೈಗಳ ಬೆರಳುಗಳನ್ನು ಪರಸ್ಪರ ಹೊಂದಿಸಿಕೊಂಡು ಹೇಳಿದರು: ನೀವು ಹೀಗೆ ಗೊಂದಲದಲ್ಲಿ ಸಿಲುಕುವಿರಿ. ಅನಂತರ ಹೇಳಿದರು: **ವ ಯಾಖೌಮಿ ಲಾ ಯಜ್‌ರಿಮನ್ನಕುಂ ಶಿಖಾಖೀ ಅನ್‌ಯುಸೀಬಕುಂ ಮಿಸ್ಲು ಮಾ ಅಸಾಬ ಖೌಮಿ ನೂಹನ್ ಖೌಮ ಹೂದಿನ್ ಅವ್ ಖೌಮ ಸಾಲಿಹಿನ್ ವ ಮಾ ಖೌಮು ಲೂತಿನ್ ಮಿಂಕುಂ ಬಿಬಈದ. (ಹೂದ್:90)** ಎಂದರೆ, ಹೇ ನನ್ನ ಸಮುದಾಯವೇ, ನನ್ನೊಡನೆ ಇರುವ ಶತ್ರುತ್ವದಿಂದ ನಿಮಗೆ ನೂಹ್‌ರ ಹೂದರ ಸಾಲಿಹ್ ಸಮುದಾಯಕ್ಕೆ ತಲುಪಿದಂತಹ ವಿಪತ್ತು ಉಂಟಾಗದಿರಲಿ. ಲೂತ್‌ರ ಸಮುದಾಯ ನಿಮ್ಮಿಂದ ಅಷ್ಟು ದೂರವೂ ಅಲ್ಲ.

ಹಝ್ರತ್ ಉಸ್ಮಾನ್(ರ) ಹಝ್ರತ್ ಅಬ್ದುಲ್ಲಾಹ್ ಬಿನ್ ಸಲಾಂರ ಕಡೆಗೆ ಸಂದೇಶ ಕಳುಹಿಸಿದರು. ಅವರು ಬಂದು ಹಝ್ರತ್ ಉಸ್ಮಾನ್‌ರೊಡನೆ ಹೇಳಿದರು: ನಿಮ್ಮ ಅಭಿಪ್ರಾಯವೇನು? ಹಝ್ರತ್ ಉಸ್ಮಾನ್(ರ) ಹೇಳಿದರು: ಈಗ ಆಗುತ್ತಿರುವ ಎಲ್ಲ ಜಗಳಗಳಿಂದ ದೂರವಿರಿ. ಏಕೆಂದರೆ ಇದು ನಿನ್ನ ಪರವಾಗಿ ನಿನ್ನ ಸತ್ಯತೆಗೆ ಪುರಾವೆಯೆಂಬ ರೀತಿಯಲ್ಲಿ ಉತ್ತಮವಾಗಿರುವುದು.

(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-39, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996)

ಮುಹಮ್ಮದ್ ಬಿನ್ ಸೀರೀನ್ ಹೇಳುತ್ತಾರೆ: ಹಝ್ರತ್ ಝ್ಯೆದ್ ಬಿನ್ ಸಾಬಿತ್ ಹಝ್ರತ್ ಉಸ್ಮಾನ್‌ರ(ರ) ಸನ್ನಿಧಿಗೆ ಹೋಗಿ ಹೇಳಿದರು: ಈ ಅನ್ಸಾರರು ಬಾಗಿಲ ಬಳಿ ಇದ್ದಾರೆ. ನೀವು ಇಷ್ಟಪಡುವುದಾದರೆ, ನಾವು ಎರಡನೇ ಬಾರಿ ಅಲ್ಲಾಹನ ಅನ್ಸಾರ್ ಆಗಲು ತಯಾರಿದ್ದೇವೆ. ಆಗ ಹಝ್ರತ್ ಉಸ್ಮಾನ್(ರ) ಹೇಳಿದರು: ಬೇಡ, ಯುದ್ಧ ಖಂಡಿತ ಮಾಡಬೇಡಿರಿ. ಹಝ್ರತ್ ಅಬೂಹುರೈರ ವರದಿ ಮಾಡುತ್ತಾರೆ: ಯೌಮುದ್ದಾರ್‌ನಂದು ನಾನು ಹಝ್ರತ್ ಉಸ್ಮಾನ್‌ರ(ರ) ಬಳಿಗೆ ಹೋಗಿ ಹೇಳಿದೆ: ಯಾ ಅಮೀರಲ್ ಮೂಮಿನೀನ್, ಈಗ ಖಡ್ಗ ಎತ್ತುವುದೇ ಸರಿ. ಹಝ್ರತ್ ಉಸ್ಮಾನ್(ರ) ಹೇಳಿದರು: ಹೇ ಅಬೂಹುರೈರ, ನೀನು ಎಲ್ಲ ಜನರನ್ನು ಮತ್ತು ನನ್ನನ್ನೂ ಕೊಲ್ಲಲು ಇಷ್ಟಪಡುತ್ತೀಯಾ? ಇಲ್ಲವೆಂದು ನಾನು ಹೇಳಿದೆ. ಆಗ ಹಝ್ರತ್ ಉಸ್ಮಾನ್(ರ) ಹೇಳಿದರು: ಅಲ್ಲಾಹನಾಣೆ, ನೀನು ಒಂದು ವ್ಯಕ್ತಿಯನ್ನು ಕೂಡ ಕೊಂದರೆ, ಎಲ್ಲರೂ ಕೊಲ್ಲಲ್ಪಟ್ಟಂತೆ, ಹಝ್ರತ್ ಅಬೂಹುರೈರ ಹೇಳುತ್ತಾರೆ: ಅನಂತರ ನಾನು ಮರಳಿ ಬಂದೆನು. ಈ ಜಗಳದಲ್ಲಿ ಭಾಗಿಯಾಗಲಿಲ್ಲ. ಇಂದೇ ಯುದ್ಧ ಮಾಡುವ ಸಂದರ್ಭವಾಗಿದೆ ಎಂದು ಅವರು ಮೊದಲು ಹೇಳಿದ್ದರು. ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್ ಹೇಳಿದರು: ಮುತ್ತಿಗೆ ಹಾಕಲಾದ ದಿನದಂದು ನಾನು ಹಝ್ರತ್ ಉಸ್ಮಾನ್‌ರೊಡನೆ(ರ) ಹೇಳಿದೆ: ಯಾ ಅಮೀರಲ್ ಮೂಮಿನೀನ್, ಈ ವಿದ್ರೋಹಿಗಳೊಡನೆ ಯುದ್ಧ ಮಾಡಿರಿ. ಏಕೆಂದರೆ, ಅಲ್ಲಾಹನು ನಿಮಗೆ ಅವರೊಡನೆ ಯುದ್ಧ ಮಾಡುವುದನ್ನು ಅನುಮತನೀಯವನ್ನಾಗಿ ಮಾಡಿದ್ದಾನೆ. ಹಝ್ರತ್ ಉಸ್ಮಾನ್(ರ) ಹೇಳಿದರು: ಅಲ್ಲಾಹನಾಣೆ, ನಾನು ಎಂದಿಗೂ ಅವರೊಡನೆ ಯುದ್ಧ ಮಾಡುವುದಿಲ್ಲ.

ವರದಿಗಾರ ಹೇಳುತ್ತಾರೆ: ಆಗ ಆ ವಿದ್ರೋಹಿಗಳು ಅವರ ಮನೆಯ ಒಳಗೆ ನುಗ್ಗಿದರು. ಆ ವೇಳೆ ಅವರು ಉಪವಾಸದಲ್ಲಿದ್ದರು. ಹಝ್ರತ್ ಉಸ್ಮಾನ್(ರ) ತನ್ನ ಮನೆಯ ಬಾಗಿಲಲ್ಲಿ ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್‌ರನ್ನು ಮೇಲ್ನೋಟಗಾರನಾಗಿ ಮಾಡಿದ್ದರು. ಹಝ್ರತ್ ಉಸ್ಮಾನ್(ರ) ಹೇಳಿದ್ದರು: ಯಾರು ನನ್ನ ಅನುಸರಣೆ ಮಾಡಲು ಇಚ್ಛಿಸುವರೋ ಅವರು ಅಬ್ದುಲ್ಲಾಹ್ ಬಿನ್ ಝುಬೇರ್‌ರನ್ನು ಅನುಸರಿಸಿರಿ. ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್ ಹೇಳುತ್ತಾರೆ; ನಾನು ಹಝ್ರತ್ ಉಸ್ಮಾನ್‌ರೊಡನೆ(ರ) ಹೇಳಿದೆ: ಯಾ ಅಮೀರಲ್ ಮೂಮಿನೀನ್, ಖಂಡಿತವಾಗಿಯೂ ನಿಮ್ಮ ಬಳಿ ಮನೆಯಲ್ಲಿ ನಿಮ್ಮ ಸಂರಕ್ಷಣೆಗಾಗಿ ಒಂದು ಸಂಘವಿದೆ. ಆ ಸಂಘಕ್ಕೆ ಅಲ್ಲಾಹನ ಸಹಾಯ ಮತ್ತು ನೆರವು ಇದೆ. ಅವರು ವಿದ್ರೋಹಿಗಳ ಮುಂದೆ ಸಂಖ್ಯೆಯಲ್ಲಿ ಕಡಿಮೆಯಿದ್ದಾರೆ. ನೀವು ನನಗೆ ವಿದ್ರೋಹಿಗಳ ವಿರುದ್ಧ ಯುದ್ಧ ಮಾಡುವ ಅನುಮತಿ ಕೊಡಿರಿ. ಹಝ್ರತ್ ಉಸ್ಮಾನ್(ರ) ಹೇಳಿದರು: ನಾನು ಅಲ್ಲಾಹನ ಹೆಸರಲ್ಲಿ ನಿಮ್ಮನ್ನು ಉಪದೇಶಿಸುತ್ತೇನೆ. ಯಾವನೇ ವ್ಯಕ್ತಿ ನನಗಾಗಿ ಸ್ವಂತ ರಕ್ತ ಸುರಿಸದಿರಲಿ. ನನಗಾಗಿ ಬೇರೆಯವರ ರಕ್ತ ಕೂಡ ಸುರಿಸದಿರಿ.

(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ-3, ಪುಟ-39, ದಾರ್ ಅಹ್ಯಾಉತ್ತುರಾಸುಲ್ ಅರಬಿ ಬೈರೂತ್ 1996)

ಹಝ್ರತ್ ಉಸ್ಮಾನ್‌ರ(ರ) ಶಹಾದತಿಗೆ ಮುಂಚಿನ ಪಿತೂರಿ ಮತ್ತು ಅವರ ಶಹಾದತಿನ ಘಟನೆಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ವಿದ್ರೋಹಿಗಳಿಗೆ ಬಾಹ್ಯವಾಗಿ ಯಶಸ್ಸು ಲಭಿಸಿದ ಕಾರಣದಿಂದ ಅವರು ಕೊನೆಯ ತಂತ್ರವೆಂಬ ರೀತಿಯಲ್ಲಿ ಒಬ್ಬ ವ್ಯಕ್ತಿಯನ್ನು, ಖಿಲಾಫತ್ ಸ್ಥಾನವನ್ನು ತ್ಯಜಿಸಲು ಹಝ್ರತ್ ಉಸ್ಮಾನ್‌ರೊಡನೆ(ರ) ಹೇಳಲಿಕ್ಕಾಗಿ ಕಳುಹಿಸಿದರು. ಏಕೆಂದರೆ, ಹಝ್ರತ್ ಉಸ್ಮಾನ್(ರ) ಸ್ವತಃ ಖಿಲಾಫತ್ ಸ್ಥಾನವನ್ನು ತ್ಯಜಿಸಿದರೆ, ವಿದ್ರೋಹಿಗಳಿಗೆ ಶಿಕ್ಷೆ ನೀಡುವ ಯಾವುದೇ ಹಕ್ಕು ಮತ್ತು ಸಂದರ್ಭ ಮುಸ್ಲಿಮರಿಗೆ ಸಿಗಲಿಕ್ಕಿಲ್ಲ. ಹಝ್ರತ್ ಉಸ್ಮಾನ್(ರ) ಆ ದೂತರೊಡನೆ ಹೇಳಿದರು: ನಾನಂತು ಇಸ್ಲಾಮಿನ ಆಗಮನಕ್ಕೆ ಮುಂಚೆ ಕೂಡ ಕೆಡುಕುಗಳಿಂದ ದೂರವಿದ್ದೆನು ಮತ್ತು ಇಸ್ಲಾಮಿನಲ್ಲೂ ಈ ಆಜ್ಞೆಗಳನ್ನು ಮುರಿಯಲಿಲ್ಲ. ಹೀಗಿರುವಾಗ ಏಕೆ ಮತ್ತು ಯಾವ ಅಪರಾಧದ ಕಾರಣದಿಂದ ಅಲ್ಲಾಹನು ನನಗೆ ನೀಡಿರುವ ಈ ಸ್ಥಾನವನ್ನು ನಾನು ಉಪೇಕ್ಷಿಸಬೇಕು? ಅಲ್ಲಾಹನು ನನಗೆ ತೊಡಿಸಿದ ಈ ನಿಲುವಂಗಿಯನ್ನು ನಾನು ಯಾವತ್ತೂ ಕಳಚುವುದಿಲ್ಲ. ಆ ವ್ಯಕ್ತಿ ಈ ಉತ್ತರವನ್ನು ಕೇಳಿಕೊಂಡು ಮರಳಿಬಂದು ತನ್ನ ಸಂಗಡಿಗರನ್ನು ಸಂಬೋಧಿಸಿ ಹೀಗೆ ಹೇಳಿದನು: ಅಲ್ಲಾಹನಾಣೆ, ನಾವು ತೀವ್ರವಾದ ಆಪತ್ತಿನಲ್ಲಿ ಸಿಲುಕಿದ್ದೇವೆ. ಅಲ್ಲಾಹನಾಣೆ, ಹಝ್ರತ್ ಉಸ್ಮಾನ್‌ರನ್ನು(ರ) ಕೊಲ್ಲದೇ ನಾವು ಮುಸ್ಲಿಮರ ಹಿಡಿತದಿಂದ ರಕ್ಷಣೆ ಪಡೆಯಲಾರೆವು. ಏಕೆಂದರೆ ಹಾಗಾದರೆ ಆಡಳಿತ ಅವ್ಯವಸ್ಥೆಗೊಳ್ಳುವುದು. ಕೇಳುವವರು ಯಾರೂ ಇರಲಿಕ್ಕಿಲ್ಲ. ಅವರನ್ನು ಕೊಲ್ಲುವುದು ಯಾವುದೇ ರೀತಿಯಲ್ಲೂ ಸರಿಯಲ್ಲವಾದರೂ ಬೇರೆ ಯಾವುದೇ ಪರಿಹಾರವಿಲ್ಲ. ಈ ವ್ಯಕ್ತಿಯ ಮಾತುಗಳಿಂದ ವಿದ್ರೋಹಿಗಳ ಭಯದ ಸ್ಥಿತಿಯ ಬಗ್ಗೆ ಗೊತ್ತಾಗುತ್ತದೆ. ಮಾತ್ರವಲ್ಲ ವಿದ್ರೋಹಿಗಳಿಗೆ ನೆಪವನ್ನು ಉಂಟುಮಾಡಲು ಯಾವುದೇ ಎಡೆಯನ್ನು ಹಝ್ರತ್ ಉಸ್ಮಾನ್(ರ) ತೆರೆದುಕೊಟ್ಟಿರಲಿಲ್ಲವೆಂದು ಇದರಿಂದ ಸಾಬೀತಾಗುತ್ತದೆ. ಹಝ್ರತ್ ಉಸ್ಮಾನ್‌ರನ್ನು ಕೊಲ್ಲುವುದು ಯಾವುದೇ ರೀತಿಯಲ್ಲಿ ಸರಿಯಲ್ಲವೆಂದು ಅವರು ಮನಸ್ಸು ಹೇಳುತ್ತಿತ್ತು.

ಈ ವಿದ್ರೋಹಿಗಳು ಹಝ್ರತ್ ಉಸ್ಮಾನ್‌ರನ್ನು ಕೊಲ್ಲುವ ಯೋಜನೆ ಮಾಡುತ್ತಿದ್ದಾಗ, ಮುಸ್ಲಿಮರಾಗಿರದ ಸಮಯದಲ್ಲೂ ತನ್ನ ಸಮುದಾಯದಲ್ಲಿ ಅತ್ಯಂತ ಆದರಣೀಯ ವ್ಯಕ್ತಿಯಾಗಿ ಗಳಿಸಲ್ಪಟ್ಟಿದ್ದ ಅಬ್ದುಲ್ಲಾಹ್ ಬಿನ್ ಸಲಾಂ ಅಲ್ಲಿಗೆ ಬಂದರು. ಅವರನ್ನು ಯಹೂದಿಯರು ತಮ್ಮ ನೇತಾರರನ್ನಾಗಿ ಅಂಗೀಕರಿಸುತ್ತಿದ್ದರು. ಅವರನ್ನು ದೊಡ್ಡ ಪಂಡಿತರನ್ನಾಗಿ ಗಣಿಸುತ್ತಿದ್ದರು. ಹೀಗೆ ಅಬ್ದುಲ್ಲಾಹ್ ಬಿನ್ ಸಲಾಂ ಬಂದು ಬಾಗಿಲಿನ ಬಳಿ ನಿಂತುಕೊಂಡು ವಿದ್ರೋಹಿಗಳೊಡನೆ ಉಪದೇಶ ಮಾಡಲು ಶುರುಮಾಡಿದರು. ಹಝ್ರತ್ ಉಸ್ಮಾನ್‌ರನ್ನು ವಧಿಸುವುದರಿಂದ ಅವರನ್ನು ತಡೆದರು. ಅವರು ಹೀಗೆ ಹೇಳಿದರು: ಎಲೈ ಸಮುದಾಯವೇ, ಅಲ್ಲಾಹನ ಖಡ್ಗ ನಿಮ್ಮ ಮೇಲೆ ಎರಗುವಂತೆ ಮಾಡಬೇಡಿರಿ. ಅಲ್ಲಾಹನಾಣೆ, ನೀವು ಖಡ್ಗವನ್ನು ಎತ್ತಿದರೆ, ಅನಂತರ ಅದನ್ನು ಕವಚದಲ್ಲಿ ತಿರುಗಿ ಹಾಕಲು ಅವಕಾಶ ಸಿಗಲಿಕ್ಕಿಲ್ಲ. ಅದು ಮುಸ್ಲಿಮರ ನಡುವೆ ಸದಾ ಕವಚದಿಂದ ಹೊರಗೆ ಇರುವುದು. ಯಾವಾಗಲೂ ಮುಸ್ಲಿಮರಲ್ಲಿ ಕಲಹ ಜಗಳಗಳು ಇರುವವು. ಯೋಚಿಸಿರಿ, ಇಂದು ನಿಮ್ಮ ಮೇಲೆ ಕೇವಲ ಬೆತ್ತದ ಮೂಲಕ ಆಡಳಿತ ನಡೆಸಲಾಗುತ್ತಿದೆ. ಸಾಮಾನ್ಯವಾಗಿ ಶರೀಅತಿನ ಶಿಕ್ಷೆಯಲ್ಲಿ ಚಾವಟಿ ಏಟಿನ ಶಿಕ್ಷೆ ನೀಡಲಾಗುತ್ತದೆ. ಆದರೆ ನೀವು ಹಝ್ರತ್ ಉಸ್ಮಾನ್‌ರನ್ನು(ರ) ವಧಿಸಿದರೆ, ಆಡಳಿತದ ಕೆಲಸ ಖಡ್ಗವಿಲ್ಲದೆ ನಡೆಯದು. ಎಂದರೆ, ಸಣ್ಣ ಸಣ್ಣ ಅಪರಾಧಕ್ಕೂ ಜನರನ್ನು ಕೊಲ್ಲಲಾಗುವುದು. ನೆನಪಿಡಿರಿ, ಈಗ ಮದೀನದ ಸಂರಕ್ಷಕರು ದೇವದೂತರಾಗಿರುವರು. ಆದರೆ ನೀವು ಹಝ್ರತ್ ಉಸ್ಮಾನ್‌ರನ್ನು(ರ) ವಧಿಸಿದರೆ, ದೇವದೂತರು ಮದೀನವನ್ನು ಬಿಟ್ಟುಹೋಗುವರು. ಈ ಉಪದೇಶದಿಂದ ಅವರು ಪಡೆದ ಪ್ರಯೋಜನವೇನೆಂದರೆ, ವಿದ್ರೋಹಿಗಳು ಹಝ್ರತ್ ಪೈಗಂಬಬರ ಈ ಸಹಾಬಿಯಾದ ಹಝ್ರತ್ ಅಬ್ದುಲ್ಲಾಹ್ ಬಿನ್ ಸಲಾಮ್‌ರನ್ನು ಹಿಯಾಳಿಸಿದರು. ಅನಂತರ ಧರ್ಮದ ಹೆಸರಲ್ಲಿ ಮೂದಲಿಸುತ್ತಾ ವಿದ್ರೋಹಿಗಳು ಹೇಳಿದರು: ಹೇ ಯಹೂದಿಯ ಮಗನೇ, ನಿಮಗೆ ಈ ಕೆಲಸದೊಂದಿಗೆ ಏನು ಸಂಬಂಧ? ಅಬ್ದುಲ್ಲಾಹ್ ಬಿನ್

ಸಲಾಂ ಯಹೂದಿಯ ಪುತ್ರನಾಗಿದ್ದನು ಎಂದು ಇವರಿಗೆ ನೆನಪಿತ್ತು. ಆದರೆ ಅವರು ಹಝ್‌ರತ್ ಪೈಗಂಬರರ(ಸ) ಕೈಯಲ್ಲಿ ವಿಶ್ವಾಸ ಕೈಗೊಂಡಿದ್ದರು ಹಾಗೂ ಅವರು ವಿಶ್ವಾಸ ಕೈಗೊಂಡಾಗ ಹಝ್‌ರತ್ ಪೈಗಂಬರ್(ಸ) ಬಹಳ ಸಂತೋಷಗೊಂಡಿದ್ದರು ಎಂಬ ಸಂಗತಿ ಇವರು ಮರೆತುಬಿಟ್ಟರು. ಅದೇ ರೀತಿಯಲ್ಲಿ ವಿದ್ರೋಹಿಗಳ ಲೀಡರ್ ಆದ ಅಬ್ದುಲ್ಲಾಹ್ ಬಿನ್ ಸಬಾ ಯಹೂದಿಯ ಮಗನಾಗಿದ್ದನು ಎಂಬುದನ್ನು ಮರೆತುಬಿಟ್ಟರು. ಸ್ವತಃ ಸಹ ಯಹೂದಿಯಾಗಿದ್ದನು. ಕೇವಲ ಬಾಹ್ಯವಾಗಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದವನಂತೆ ನಟಿಸುತ್ತಿದ್ದನು. ಹಝ್‌ರತ್ ಅಬ್ದುಲ್ಲಾಹ್ ಬಿನ್ ಸಲಾಂ ಈ ವಿದ್ರೋಹಿಗಳೊಡನೆ ನಿರಾಶೆಗೊಂಡು ಹೊರಟುಹೋದರು. ಇತ್ತಕಡೆ ಬಾಗಿಲ ಕಡೆಯಿಂದ ಹೋಗಿ ಹಝ್‌ರತ್ ಉಸ್ಮಾನ್‌ರನ್ನು ಕೊಲ್ಲುವುದು ಕಷ್ಟಕರ ಎಂದು ನೋಡಿಕೊಂಡು. ಏಕೆಂದರೆ ಅಲ್ಲಿ ಕೆಲವು ಜನರು ತಡೆಯಲು ನಿಂತಿದ್ದರು. ಅವರು ಹಝ್‌ರತ್ ಪೈಗಂಬರರೊಡನೆ ಪ್ರತಿಯೊಂದು ವಿಪತ್ತು ಮತು ದುಃಖದ ವೇಳೆ ಭಾಗಿಯಾಗಿದ್ದರು. ಹಝ್‌ರತ್ ಉಸ್ಮಾನ್‌ರ(ರ) ನೆರೆಕರೆಯವರಲ್ಲಿ ಯಾರದಾದರೂ ಮನೆಯ ಗೋಡೆಯನ್ನು ಹತ್ತಿ ಹಝ್‌ರತ್ ಉಸ್ಮಾನ್‌ರ(ರ) ಮನೆಗೆ ನುಗ್ಗುವ ಮೂಲಕ ಅವರನ್ನು ಕೊಲ್ಲಲು ಈ ಜನರು ತೀರ್ಮಾನಿಸಿದರು. ಈ ಜನರು ಒಳಗೆ ನುಗ್ಗಿದ ವೇಳೆ ಹಝ್‌ರತ್ ಉಸ್ಮಾನ್(ರ) ಪವಿತ್ರ ಖುರ್‌ಆನ್ ಓದುತ್ತಿದ್ದರು. ಈ ಜನರು ಮನೆಗೆ ನುಗ್ಗುವ ಮುಂಚೆ ಇಬ್ಬರು ವ್ಯಕ್ತಿಗಳನ್ನು ಹಝ್‌ರತ್ ಉಸ್ಮಾನ್(ರ) ಖಜಾನೆಯ ಸಂರಕ್ಷಣೆಗಾಗಿ ನಿಶ್ಚಯಿಸಿದ್ದರು. ಏಕೆಂದರೆ, ಆ ರಾತ್ರಿ ಹಝ್‌ರತ್ ಉಸ್ಮಾನ್(ರ) ಕನಸಿನಲ್ಲಿ ಹಝ್‌ರತ್ ಪೈಗಂಬರ್‌ರನ್ನು(ಸ) ಕಂಡಿದ್ದರು. ಕನಸಿನಲ್ಲಿ ಹಝ್‌ರತ್ ಪೈಗಂಬರ್(ಸ) ಹೇಳಿದರು: ಹೇ ಉಸ್ಮಾನ್, ಇಂದು ಸಂಜೆ ಉಪವಾಸವನ್ನು ನನ್ನೊಂದಿಗೆ ತೊರೆಯಿರಿ. ಈ ಕನಸಿನ ಕಾರಣದಿಂದ **"ನಾನಿಂದು ಶಹೀದ್ ಆಗುವೆನು"** ಎಂದು ಹಝ್‌ರತ್ ಉಸ್ಮಾನ್‌ರಿಗೆ(ರ) ಖಾತರಿಯಾಯಿತು. ಹಲ್ಲೆಗಾರರರಲ್ಲಿ ಒಬ್ಬ ವ್ಯಕ್ತಿ ಮುಂದಕ್ಕೆ ಬಂದು ಒಂದು ಕಬ್ಬಿಣದ ಸಲಾಕೆಯಿಂದ ಹಝ್‌ರತ್ ಉಸ್ಮಾನ್‌ರ(ರ) ತಲೆಗೆ ಹೊಡೆದರು. ಹಝ್‌ರತ್ ಉಸ್ಮಾನ್‌ರ(ರ) ಮುಂದೆ ಇರಿಸಲಾದ ಪವಿತ್ರ ಖುರ್‌ಆನನ್ನು ಕಾಲಿನಿಂದ ಹೊಡೆದು ಬಿಸಾಕಿದರು. ಪವಿತ್ರ ಖುರ್‌ಆನ್ ಉರುಳಿ ಹಝ್‌ರತ್ ಉಸ್ಮಾನ್‌ರ(ರ) ಸಮೀಪವಾಯಿತು. ಅವರ ತಲೆಯಿಂದ ರಕ್ತದ ಹನಿಗಳು ಅದರಲ್ಲಿ ಚೆಲ್ಲಿದ್ದುವು. ಯಾವ ವಚನದ ಮೇಲೆ ರಕ್ತ ಸುರಿಯಿತೋ ಅದೊಂದು ಪ್ರಚಂಡ ಭವಿಷ್ಯವಾಣಿಯಾಗಿತ್ತು. ಆ ಭವಿಷ್ಯವಾಣಿ ಅದರ ಸಮಯದಲ್ಲಿ ಎಷ್ಟು ವೈಭವಶಾಲಿ ರೀತಿಯಲ್ಲಿ ಈಡೇರಿತ್ತು ಎಂದರೆ, ಅತಿ ಕಠಿಣವಾದ ಹೃದಯವನ್ನು ಹೊಂದಿರುವ ವ್ಯಕ್ತಿ ಕೂಡ ಈ ರಕ್ತಸಿಕ್ತ ಪದಗಳ ಪ್ರತಾಪವನ್ನು ನೋಡಿ ಭಯದಿಂದ ತಮ್ಮ ಕಣ್ಣುಗಳನ್ನು ಮುಚ್ಚುವನು. ಆ ವಚನಗಳು ಹೀಗಿವೆ: **ಫಸಯಕ್‌ಫೀಕಹುಮುಲ್ಲಾಹ್ ವಹುವಸ್ಸಮೀಉಲ್ ಅಲೀಂ. (ಅಲ್‌ಬಖರ:138)** ಎಂದರೆ, ಅವರಿಗೆ ಎದುರಾಗಿ ಅಲ್ಲಾಹನು ನಿನಗೆ ಸಾಕು. ಅವನು ಎಲ್ಲವನ್ನು ಆಲಿಸುವವನೂ ಎಲ್ಲವನ್ನು ಬಲ್ಲವನೂ ಆಗಿದ್ದಾನೆ.

ಅನಂತರ ಬೇರೊಬ್ಬ ವ್ಯಕ್ತಿ ಆತನ ಹೆಸರು ಸೂದಾನ್ ಎಂಬವನು ಮುಂದಕ್ಕೆ ಬಂದು ಖಡ್ಗದಿಂದ ಹಝ್‌ರತ್ ಉಸ್ಮಾನ್‌ರ(ರ) ಮೇಲೆ ಹಲ್ಲೆ ನಡೆಸಿದನು. ಮೊದಲ ಬಾರಿ ಹಲ್ಲೆ ನಡೆಸಿದಾಗ ಹಝ್‌ರತ್ ಉಸ್ಮಾನ್(ರ) ತನ್ನ ಕೈಯಿಂದ ಅದನ್ನು ತಡೆದರು. ಇದರಿಂದ ಅವರ ಕೈ ಮುರಿಯಿತು. ಆಗ ಅವರು ಹೇಳಿದರು: ಅಲ್ಲಾಹನಾಣೆ, ಇದು ಮೊತ್ತಮೊದಲು ಪವಿತ್ರ ಖುರ್‌ಆನ್ ಬರೆದ ಕೈಯಾಗಿತ್ತು. ಅನಂತರ ಅವನು ಎರಡನೇ ಬಾರಿ ಹಲ್ಲೆ ನಡೆಸಿ ಅವರನ್ನು ಕೊಲ್ಲಲು ಬಯಸಿದನು. ಅಷ್ಟರಲ್ಲಿ ಅವರ ಪತ್ನಿ ನಾಇಲ ಅಲ್ಲಿಗೆ ಬಂದು ಸ್ವತಃ ಮಧ್ಯದಲ್ಲಿ ನಿಂತರು. ಆದರೆ ಈ ಹತಭಾಗ್ಯನು ಒಬ್ಬ ಸ್ತ್ರೀಯ ಮೇಲೆ ಕೂಡ ಹಲ್ಲೆ ನಡೆಸುವುದರಿಂದ ಹಿಂದೆ ಸರಿಯಲಿಲ್ಲ. ಇದರಿಂದ ಅವರ ಬೆರಳುಗಳು ಮುರಿದು ಬೇರ್ಪಟ್ಟವು. ಅನಂತರ ಅವನು ಇನ್ನೊಮ್ಮೆ ಹಝ್‌ರತ್ ಉಸ್ಮಾನ್‌ರ(ರ) ಮೇಲೆ ಹಲ್ಲೆ ನಡೆಸಿಕೊಂಡು ಅವರನು ತೀವ್ರವಾಗಿ ಗಾಯಗೊಳಿಸಿದರು. ಈಗ ಜೀವ ಹೋಗಿಲ್ಲವೆಂದು ಭಾವಿಸಿಕೊಂಡು ಆ ಹತಭಾಗ್ಯನು ಅವರ ಕುತ್ತಿಗೆಯನ್ನು ಹಿಡಿದು ಹಿಸುಕಲು ತೊಡಗಿದನು. ಅವರ ಆತ್ಮ ಶರೀರದಿಂದ ಹಾರಿಕೊಂಡು ಹಝ್‌ರತ್ ಪೈಗಂಬರರ(ಸ) ಆಮಂತ್ರಣವನ್ನು ಸ್ವೀಕರಿಸುತ್ತಾ ಪರಲೋಕಕ್ಕೆ ಹೋಗುವ ತನಕ ಅವನು ಅವರ ಕುತ್ತಿಗೆಯನ್ನು ಬಿಡಲಿಲ್ಲ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಮೊದಲಿಗೆ, ಈ ದೃಶ್ಯದ ಭಯಾನಕತೆಯಿಂದ ಮುಳುಗಿದ ಹಝ್‌ರತ್ ಉಸ್ಮಾನ್(ರ) ಅವರ ಪತ್ನಿ ಮಾತನಾಡಲು ಸಾಧ್ಯವಾಗಲಿಲ್ಲ. ಕೊನೆಗೆ ಅವರು ಸಹಾಯಕ್ಕಾಗಿ ಕರೆದರು ಬಾಗಿಲಲ್ಲಿ ಕುಳಿತ ಜನರು ಒಳಗೆ ನುಗ್ಗಿದರು. ಆದಾಗ್ಯೂ, ಯಾವುದೇ ಸಹಾಯವು ಈಗ ನಿಷ್ಪ್ರಯೋಜಕವಾಗಿತ್ತು, ಏನು ಆಗಬೇಕಿತ್ತು ಆಗಲೇ ನಡೆದಿತ್ತು. ಹಝ್‌ರತ್ ಉಸ್ಮಾನ್(ರ) ರ ಸ್ವತಂತ್ರ ಗುಲಾಮನು ಹುತಾತ್ಮ ಹಝ್‌ರತ್ ಉಸ್ಮಾನ್(ರ) ಗೆ ಬಳಸಲಾಗಿದ್ದ ರಕ್ತದ ಕತ್ತಿಯನ್ನು ಸೂದಾನನ ಕೈಯಲ್ಲಿ ನೋಡಿದಾಗ, ಅವನು ತನ್ನನ್ನು ತಾನೇ ತಡೆಯಲು ಸಾಧ್ಯವಾಗಲಿಲ್ಲ. ಅವನು ಮುಂದುವರೆದು ಸೂದಾನನ ತಲೆಯನ್ನು ಕತ್ತಿಯಿಂದ ಕತ್ತರಿಸಿದನು. ಪ್ರತಿಯಾಗಿ, ಅವನ (ಸೂದಾನ್) ಸಹಚರನೊಬ್ಬನು ಅವನನ್ನು ಕೊಂದನು.

ಈಗ ಇಸ್ಲಾಮಿನ ಸಾಮ್ರಾಜ್ಯದ ಸಿಂಹಾಸನವು ಖಲೀಫಾದಿಂದ ಖಾಲಿಯಾಗಿತ್ತು. ಮದೀನಾ ಜನರು ಮತ್ತಷ್ಟು ಪ್ರಯತ್ನಗಳನ್ನು ನಿರರ್ಥಕವೆಂದು ಭಾವಿಸಿದರು ಮತ್ತು ಅವರೆಲ್ಲರೂ ತಮ್ಮ ಮನೆಗಳಿಗೆ ಮರಳಿದರು. "ಹಝ್‌ರತ್ ಉಸ್ಮಾನ್(ರ) ರನ್ನು ಹುತಾತ್ಮರಾದ ನಂತರ, ಬಂಡುಕೋರರು ಅವರ ಮನೆಯ ಸದಸ್ಯರನ್ನು ಭಯಭೀತರಾಗಿಸಲು ಪ್ರಾರಂಭಿಸಿದರು. ಹಝ್‌ರತ್ ಉಸ್ಮಾನ್(ರ) ಅವರ ಪತ್ನಿ ದೂರ ಹೋಗಲು ಬಯಸಿದ್ದರು ಅವರು ಹೊರಟುಹೋಗುತ್ತಿರುವಾಗ ಅವರಲ್ಲಿ ಒಬ್ಬ ದರಿದ್ರ ವ್ಯಕ್ತಿಯು ತನ್ನ ಸಹಚರರಿಗೆ ಅವರ ಬಗ್ಗೆ ಅತ್ಯಂತ ಅಸಭ್ಯವಾಗಿ ಹೇಳಿದನು. ನಿಸ್ಸಂದೇಹವಾಗಿ, ಗೌರವಾನ್ವಿತ ಮನುಷ್ಯನಿಗೆ, ಅವನು ಯಾವ ಧರ್ಮಕ್ಕೆ ಸೇರಿದವನಾಗಿದ್ದರೂ, ಬಂಡುಕೋರರು ಇಂತಹ ಕೆಟ್ಟ ಅಭಿಪ್ರಾಯಗಳನ್ನು ಅವರು ಅಗ್ರಗಣ್ಯವಾಗಿ ಹುತಾತ್ಮರಾದ ಸಮಯದಲ್ಲಿ ವ್ಯಕ್ತಪಡಿಸುತ್ತಾರೆ ಎಂದು ತಿಳಿಯುವುದು ಕಷ್ಟ, ಪ್ರವರ್ತಕ ಸಹಾಬಿ, ಪ್ರವಾದಿ ಮುಹಮ್ಮದ್(ಸ) ರವರ ಅಳಿಯ, ಮುಸ್ಲಿಂ ಸಾಮ್ರಾಜ್ಯದ ರಾಜ ಮತ್ತು ಆ ಕಾಲದ ಖಲೀಫರನ್ನು ಅವರು ಕೊಂದುಹಾಕಿ ಇಂತಹ ಕೆಟ್ಟ ಆಲೋಚನೆಗಳನ್ನು ವ್ಯಕ್ತಪಡಿಸಿದ್ದರು. ಆದಾಗ್ಯೂ, ಅವರ ಅಸಭ್ಯತೆಯು ಎಷ್ಟು ಅಗಾಧವಾಗಿತ್ತು ಎಂದರೆ ಯಾವುದೇ ದುಷ್ಕೃತ್ಯಗಳು ಅವುಗಳನ್ನು ಮೀರಿರಲಿಲ್ಲ. ಈ ಬಂಡುಕೋರರು ಯಾವುದೇ ಉತ್ತಮ ಉದ್ದೇಶದ ಅನ್ವೇಷಣೆಯಲ್ಲಿ ಇರಲಿಲ್ಲ, ಅಥವಾ ಅವರ ಪಕ್ಷವು ನೀತಿವಂತರನ್ನು ಒಳಗೊಂಡಿರಲಿಲ್ಲ. ಅವರಲ್ಲಿ ಕೆಲವರು ಯಹೂದಿ ಅಬ್ದುಲ್ಲಾ ಬಿನ್ ಸಬಾ ಅವನ ಮೋಸಗೊಳಿಸುವ, ಇಸ್ಲಾಂ ವಿರೋಧಿ, ವಿಚಿತ್ರ ಮತ್ತು ವಿಲಕ್ಷಣ ಬೋಧನೆಗಳ ಅಭಿಮಾನಗಳಾಗಿದ್ದರು. ಇತರರು ಅತಿಯಾದ ಸಮಾಜವಾದದ (ಪರಿಕಲ್ಪನೆಯಿಂದ) ಆಕರ್ಷಿತರಾದರು; ಬದಲಿಗೆ, ಬೊಲ್ಶೆವಿಸಂನಿಂದನೂ ಆಕರ್ಷಿತರಾಗಿದ್ದರು. ಕೆಲವರು ಶಿಕ್ಷೆ ಅನುಭವಿಸಿದ ಅಪರಾಧಿಗಳು ಮತ್ತು ಅವರ ದ್ವೇಷವನ್ನು ಹೊರಹಾಕಲು ನೋಡುತ್ತಿದ್ದರು, ಇತರರು ದರೋಡೆಕೋರರು ಮತ್ತು ಡಕಾಯಿತರು, ಈ ಸಂಘರ್ಷವನ್ನು ತಮ್ಮ ಉದ್ದೇಶಗಳನ್ನು ಪೂರೈಸುವ ಸಾಧನವಾಗಿ ನೋಡಿದರು. ಸಂಕ್ಷಿಪ್ತವಾಗಿ, ಅವರ ಅಸಭ್ಯತೆ ಆಶ್ಚರ್ಯವೇನಿಲ್ಲ. ವಾಸ್ತವವಾಗಿ, ಈ ಜನರು ಈ ರೀತಿ ವರ್ತಿಸದಿದ್ದರೆ ಆಶ್ಚರ್ಯವಾಗುತ್ತಿತ್ತು. ದಂಗೆಕೋರರು ಕಳ್ಳತನ ಮತ್ತು ಲೂಟಿ ಮಾಡುವಾಗ, ಹಝ್‌ರತ್ ಉಸ್ಮಾನ್(ರ) ಮನೆಯವರ ಕಿರುಚಾಟ ಮತ್ತು ಕೂಗು ಕೇಳಿದಾಗ ವಿಮೋಚನೆಗೊಂಡ ಮತ್ತೊಬ್ಬ ಗುಲಾಮನಿಗೆ ತನ್ನನ್ನು ತಾನೇ ತಡೆಯಲು ಸಾಧ್ಯವಾಗಲಿಲ್ಲ. ಮೊದಲ ಗುಲಾಮನನ್ನು ಕೊಂದ ವ್ಯಕ್ತಿಯ ಮೇಲೆ ಗುಲಾಮನು ಹಲ್ಲೆ ಮಾಡಿ ಕೊಂದನು. ಈ ಸಮಯದಲ್ಲಿ, ಅವರು ಅವನನ್ನು ಸಹ ಕೊಂದರು. ಬಂಡುಕೋರರು ಮಹಿಳೆಯರು ಧರಿಸಿದ್ದ ಆಭರಣಗಳನ್ನು ಸಹ ತೆಗೆದುಕೊಂಡು ನಗುತ್ತಾ ಮತ್ತು ಅಪಹಾಸ್ಯದಿಂದ ಮನೆಯಿಂದ ಹೊರಟುಹೋದರು. (ಇಸ್ಲಾಂ ಮೇ ಇಖ್ತಿಲಾಫತ್ ಕಾ ಆಗಾಝ್, ಅನ್ವರ್–ಉಲ್–ಉಲುಮ್, ಸಂಪುಟ–4, ಪುಟ–327–331)

ಮತ್ತೊಂದು ಸಂದರ್ಭದಲ್ಲಿ, ಹಝ್‌ರತ್ ಉಸ್ಮಾನ್(ರ) ರನ್ನು ಹತ್ಯೆ ಮಾಡಿದವರ ಅಶ್ಲೀಲತೆ ಮತ್ತು ಅನುಚಿತತೆಯ ಬಗ್ಗೆ, ಹಝ್‌ರತ್ ಮುಸ್ಲೆಹ್ ಮೌಊದ್(ರ) ಹೀಗೆ ಹೇಳುತ್ತಾರೆ: ಅವರು ಏನು ಮಾಡಿದರು!! ಅವರು ಹಝ್‌ರತ್ ಉಸ್ಮಾನ್(ರ) ರನ್ನು ಹುತಾತ್ಮರನ್ನಾಗಿಸಿದರು ಮತ್ತು ಅವರು ರಕ್ತದ ಕೊಳದಲ್ಲಿ ಮಲಗಿದ್ದಾಗ, ಸಂಕಟದಿಂದ ಬಳಲುತ್ತಿದ್ದಾಗ, ಕೊಲೆಗಾರರು ಹಝ್‌ರತ್ ಉಸ್ಮಾನ್(ರ) ಅವರ ಪತ್ನಿ ಬಗ್ಗೆ ಅಸಭ್ಯ ಹೇಳಿಕೆಗಳನ್ನು ನೀಡುತ್ತಿದ್ದರು. ಆಗ ಅವರ ಕಾರ್ಯಗಳು ಇನ್ನಷ್ಟು ಹದಗೆಟ್ಟವು ಅಂದರೆ ಹಝ್‌ರತ್ ಉಸ್ಮಾನ್(ರ) ಪತ್ನಿಯ ಕಡೆಗೆ ಮಾತ್ರವಲ್ಲ, ಹಝ್‌ರತ್ ಆಯಿಶಾ (ರ) ಬಗ್ಗೆ ಅವರು ಅಶ್ಲೀಲ ಹೇಳಿಕೆಗಳನ್ನು ನೀಡಲು ಪ್ರಾರಂಭಿಸಿದರು ಎಂದು ಹಝ್‌ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ. ಹಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಅಲ್ಲಾಹನು ನನಗೆ ಬಹಳ ಉನ್ನತ ಪದವಿಯನ್ನು ನೀಡಿದ್ದಾನೆ ಮತ್ತು ನಾನು ಅದರಿಂದ ಅಭಿಮಾನಪಡುತ್ತೇನೆ. ಆದರೆ ನಾನು ಈಗ ಇರದೇ ಆ ಕಾಲದಲ್ಲಿ ಇರುತ್ತಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ನನ್ನ ಮನಸ್ಸು ಬಯಸುತ್ತದೆ. ಹಾಗಾಗಿದ್ದರೆ ನಾನು ಈ ಜನರನ್ನು ತುಂಡರಿಸುತ್ತಿದ್ದೆ. ಈ ಜನರು ಹಝ್‌ರತ್ ಆಯಿಶರ(ರ) ಪರದೆಯನ್ನು ಕಳಚಿದ್ದರು. (ವರದಿ ಮುಶಾವರತ್ 11–12 ಏಪ್ರಿಲ್ 1925, ಪುಟ–32–33)

ಅವರು ಹಝ್‌ರತ್ ಆಯಿಶಾ (ರ) ಬಗ್ಗೆ ಹೇಳಿಕೆ ನೀಡುವುದಕ್ಕು ಸಹ ಹಿಂಜರಿಯಲಿಲ್ಲ. ಹಝ್‌ರತ್ ಮುಸ್ಲೆಹ್ ಮೌಊದ್(ರ) ಹೀಗೆ ಹೇಳುತ್ತಾರೆ: ಹಝ್‌ರತ್ ಉಸ್ಮಾನ್‌ರೊಂದಿಗೆ(ರ) ನಡೆದ ಘಟನೆಗಳಿಂದ ಗೊತ್ತಾಗುವುದೇನೆಂದರೆ, ಅವರೊಂದಿಗೆ ಯಾವ ರೀತಿಯಲ್ಲಿ ವರ್ತಿಸಲಾಗುವುದು ಎಂಬುದರ ಬಗ್ಗೆ ಹಝ್‌ರತ್ ಉಸ್ಮಾನ್(ರ) ಯಾವತ್ತೂ ಭಯಗೊಂಡಿರಲಿಲ್ಲ. ಬಂಡುಕೋರರು ಮದೀನವನ್ನು ಹಿಂದಿಕ್ಕಿದಾಗ, ಪ್ರಾರ್ಥನೆಯ ಮೊದಲು ಅವರು ಮಸೀದಿಯೊಳಗೆ ಹರಡುತ್ತಾರೆ ಮತ್ತು ಮದೀನದ ಜನರನ್ನು ಪರಸ್ಪರ

ಬೇರ್ಪಡಿಸುತ್ತಿದ್ದರು ಎಂದು ಇತಿಹಾಸದಿಂದ ಸಾಬೀತಾಗಿದೆ. ಆದರೆ ಎಲ್ಲಾ ಭಿನ್ನಾಭಿಪ್ರಾಯಗಳು ಮತ್ತು ಕಲಹಗಳು ಮತ್ತು ಹಗೆತನದ ಸಾಮಾನ್ಯ ವಾತಾವರಣದ ಹೊರತಾಗಿಯೂ, ಹಝ್ರತ್ ಉಸ್ಮಾನ್(ರ) ಪ್ರಾರ್ಥನೆಗಾಗಿ ಆಕಾಂಗಿಯಾಗಿ ಯಾವುದೇ ಭಯಭೀತಿ ಇಲ್ಲದೆ ಮಸೀದಿಗೆ ಬರುತ್ತಿದ್ದರು, ಜನರು ನಿಮ್ಮನ್ನು ಹಾಗೆ ಬರುವುದಕ್ಕೆ ತಡೆಯುವುದಕ್ಕು ಮುಂಚೆಯ ತನಕವೂ ಅವರು ಹಾಗೆ ಮಸೀದಿಗೆ ಬರುತ್ತಿದ್ದರು. ಭಿನ್ನಾಭಿಪ್ರಾಯವು ಹದಗೆಟ್ಟಾಗ ಮತ್ತು ಬಂಡುಕೋರರು ಹಝ್ರತ್ ಉಸ್ಮಾನ್(ರ) ಅವರ ಮನೆಯ ಮೇಲೆ ದಾಳಿ ಮಾಡಿದಾಗ, ಹಝ್ರತ್ ಉಸ್ಮಾನ್(ರ) ಅವರ ಸಹಾಬರನ್ನು ತನ್ನ ಮನೆಯ ಸುತ್ತಲೂ ಕಾವಲು ಕಾಯುವಂತೆ ಕೇಳಿದಾಗ, ಹಝ್ರತ್ ಉಸ್ಮಾನ್(ರ) ಅಲ್ಲಾಹನ ಆಣೆ ಹಾಕಿ ಅವರ ರಕ್ಷಣೆಗಾಗಿ ತಮ್ಮ ಜೀವನವನ್ನು ಅಪಾಯದಲ್ಲಿ ಇರಿಸದಿರಲು ಮತ್ತು ಅವರೆಲ್ಲರನ್ನು ತಮ್ಮ ತಮ್ಮ ಮನೆಗಳಿಗೆ ಮರಳಲು ಹೋಗಲು ಆದೇಶಿಸಿದರು. ಹುತಾತ್ಮತೆಗೆ ಹೆದರುವ ವ್ಯಕ್ತಿಯು ಈ ರೀತಿ ವರ್ತಿಸಲು ಸಾಧ್ಯವೇ? ಮತ್ತು ಆತನು ಜನರನ್ನು ನನ್ನ ಬಗ್ಗೆ ಚಿಂತಿಸಬೇಡಿ ಮತ್ತು ಬದಲಾಗಿ ಅವರು ಮನೆಗೆ ಮರಳಬೇಕೆಂದು ಹೇಳುತ್ತಾರೆಯೇ? ಹಝ್ರತ್ ಉಸ್ಮಾನ್(ರ) ಹುತಾತ್ಮರಾಗುವ ಭಯವಿರಲಿಲ್ಲ ಎಂದು ಇದು ಸಾಬೀತುಪಡಿಸುತ್ತದೆ. ಹಝ್ರತ್ ಉಸ್ಮಾನ್(ರ) ಹುತಾತ್ಮತೆಗೆ ಹೆದರುತ್ತಿರಲಿಲ್ಲ ಎಂಬುದಕ್ಕೆ ಮತ್ತೊಂದು ನಿರಾಕರಿಸಲಾಗದ ಪುರಾವೆ ಎಂದರೆ, ಖುತ್‌ಬದ ಆರಂಭದಲ್ಲಿ ಹೇಳಿದಂತೆ, ಪಿತೂರಿತನವು ಪ್ರಾರಂಭವಾದಾಗ, ಹಝ್ರತ್ ಮುಆವಿಯ(ರ) ರವರು ಹಜ್ಜ್‌ಗಾಗಿ ಬಂದರು. ಅವರು ಸಿರಿಯಾಕ್ಕೆ ಹಿಂತಿರುಗಲು ಹೊರಟಾಗ, ಅವರು ಮದೀನಾದಲ್ಲಿ ಹಝ್ರತ್ ಉಸ್ಮಾನ್(ರ)ರನ್ನು ಭೇಟಿಯಾಗಿ, 'ನನ್ನೊಂದಿಗೆ ಸಿರಿಯಾಕ್ಕೆ ಬನ್ನಿ, ಅಲ್ಲಿ ನೀವು ಯಾವುದೇ ಭಿನ್ನಾಭಿಪ್ರಾಯದಿಂದ ರಕ್ಷಿಸಲ್ಪಡುತ್ತೀರಿ' ಎಂದು ಹೇಳಿದರು. ಹಝ್ರತ್ ಉಸ್ಮಾನ್(ರ), 'ಮುಆವಿಯ! ಪ್ರವಾದಿ ಮುಹಮ್ಮದ್(ಸ) ರವರ ನೆರೆಹೊರೆಯನ್ನು ಯಾವುದೇ ಸಂದರ್ಭದಲ್ಲಿ ಬಿಡಲು ನಾನು ಇಚ್ಛಪಡುವುದಿಲ್ಲ. ಅದಕ್ಕೆ ಹಝ್ರತ್ ಮುಆವಿಯ(ರ) ಅವರು ಇದು ಸ್ವೀಕಾರಾರ್ಹವಲ್ಲದಿದ್ದರೆ, ನಿಮ್ಮ ರಕ್ಷಣೆಗಾಗಿ ಸಿರಿಯನ್ ಸೈನ್ಯದ ತುಕಡಿಯನ್ನು ಕಳುಹಿಸಲು ನನಗೆ ಅನುಮತಿ ನೀಡಿ. ಎಂದರು. ಅದಕ್ಕೆ ಹಝ್ರತ್ ಉಸ್ಮಾನ್(ರ) ಉತ್ತರಿಸಿದರು, ನನ್ನ ರಕ್ಷಣೆಗಾಗಿ ಒಂದು ಸೈನ್ಯವನ್ನು ಇರಿಸಿ ಮುಸ್ಲಿಮರ ಆದಾಯವನ್ನು ಕಡಿಮೆಗೊಳಿಸಲು ನಾನು ಬಿಡುವುದಿಲ್ಲ. ಆಗ ಹಝ್ರತ್ ಮುಆವಿಯ(ರ), ಯಾ ಅಮಿರಲ್ ಮೊಮಿನೀನ್! ಈ ಜನರು ನಿಮ್ಮನ್ನು ಮೋಸಗೊಳಿಸುತ್ತಾರೆ ಮತ್ತು ಕೊಲ್ಲುತ್ತಾರೆ ಅಥವಾ ನಿಮ್ಮ ವಿರುದ್ಧ ಸಂಪೂರ್ಣ ಯುದ್ಧವನ್ನು ಘೋಷಿಸುತ್ತಾರೆ. ಹಝ್ರತ್ ಉಸ್ಮಾನ್(ರ) ಉತ್ತರಿಸುತ್ತಾ ಹೇಳುತ್ತಾರೆ: ನನಗೆ ಈ ಬಗ್ಗೆ ಯಾವುದೇ ಕಾಳಜಿ ಇಲ್ಲ; ನನ್ನ ಅಲ್ಲಾಹನು ನನಗೆ ಸಾಕು. ಕೊನೆಯಲ್ಲಿ, ಹಝ್ರತ್ ಮುಆವಿಯ(ರ), ನೀವು ಏನನ್ನೂ ಸ್ವೀಕರಿಸದಿದ್ದರೆ, ಕನಿಷ್ಠ ಇದನ್ನು ಮಾಡಿ, ದುಷ್ಟ ಮತ್ತು ದೇಶದ್ರೋಹಿ ಜನರು ತಮ್ಮ (ಸುಳ್ಳು) ಭರವಸೆಯನ್ನು ಕೆಲವು ಪ್ರಮುಖ ಸಹಾಬರಲ್ಲಿ ಇಡುತ್ತಾರೆ. ನಿಮ್ಮ ನಂತರ, ಈ ಸಹಾಬರು ವ್ಯವಹಾರಗಳನ್ನು ನೋಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಅವರು ನಂಬುತ್ತಾರೆ. ತರುವಾಯ ಅವರು ತಮ್ಮ ಹೆಸರನ್ನು ಬಳಸಿಕೊಂಡು ಜನರನ್ನು ಮೋಸಗೊಳಿಸಲು ಪ್ರಯತ್ನಿಸುತ್ತಾರೆ. ನೀವು ಅವರೆಲ್ಲರನ್ನೂ ಮದೀನಾದಿಂದ ತೆಗೆದುಹಾಕಿ ಬೇರೆ ಬೇರೆ ದೇಶಗಳಿಗೆ ಕಳುಹಿಸಬೇಕು. ಈ ರೀತಿಯಾಗಿ, ಈ ದುಷ್ಟ ಜನರ ತಂತ್ರಗಳನ್ನು ನಿಲ್ಲಿಸಲಾಗುವುದು ಏಕೆಂದರೆ ನಿಮ್ಮ ನಂತರದ ವಿಷಯಗಳ ಆಜ್ಞೆಯನ್ನು ತೆಗೆದುಕೊಳ್ಳಲು ಯಾರೂ ಇಲ್ಲ ಎಂದು ತಿಳಿದು ನಿಮ್ಮೊಂದಿಗೆ ಹೋರಾಡಲು ಏನು ಬೇಕು ಎಂದು ಅವರು ಯೋಚಿಸುತ್ತಾರೆ. ಆದಾಗ್ಯೂ, ಹಝ್ರತ್ ಉಸ್ಮಾನ್(ರ) ಇದನ್ನು ಮೊದಲೇ ಸ್ವೀಕರಿಸಿದಂತೆ "ಮತ್ತು ಪ್ರವಾದಿ ಮುಹಮ್ಮದ್(ಸ) ಒಟ್ಟುಗೂಡಿದವರನ್ನು ನಾನು ಹೇಗೆ ಚದುರಿಸಬಲ್ಲೆ?" ಎಂದು ಕೇಳಿದರು. ಆಗ ಹಝ್ರತ್ ಮುಆವಿಯ(ರ)ರವರು ಈ ಉತ್ತರವನ್ನು ಕೇಳಿ ಅಳಲು ಪ್ರಾರಂಭಿಸಿ ಹೇಳಿದರು ನೀವು ಇವುಗಳಲ್ಲಿ ಯಾವುದನ್ನಾದರೂ ಮಾಡಲು ಬಯಸದಿದ್ದರೆ, ಕನಿಷ್ಠ ನೀವು: ನನ್ನ ಕೊಲೆಯ ಸೇಡು ತೀರಿಸಿಕೊಳ್ಳಲು ಮುಆವಿಯ ಜವಾಬ್ದಾರನಾಗಿರುತ್ತಾನೆ ಎಂದು ಘೋಷಿಸಿರಿ. ಹಝ್ರತ್ ಉಸ್ಮಾನ್(ರ) ಹೇಳುತ್ತಾರೆ: ಮುಆವಿಯಾ! ನೀವು ಕಠಿಣ ಸ್ವಭಾವವನ್ನು ಹೊಂದಿದ್ದೀರಿ; ನೀವು ಮುಸ್ಲಿಮರನ್ನು ಕಠಿಣವಾಗಿ ಪರಿಗಣಿಸಬಹುದು ಎಂದು ನಾನು ಹೆದರುತ್ತೇನೆ. ಆದ್ದರಿಂದ ನಾನು ಅಂತಹ ಘೋಷಣೆ ಮಾಡುವುದಿಲ್ಲ. "ಹಝ್ರತ್ ಉಸ್ಮಾನ್(ರ) ದುರ್ಬಲ ಹೃದಯದವರು ಎಂದು ಆರೋಪಿಸಲಾಗಿದೆ, ಆದರೆ ಹೇಳಿ, ಎಷ್ಟು ಜನರು ಅಂತಹ ಧೈರ್ಯವನ್ನು ಪ್ರದರ್ಶಿಸಬಹುದು ಮತ್ತು ಈ ಘಟನೆಗಳನ್ನು ಓದಿದ ನಂತರ, ಹಝ್ರತ್ ಉಸ್ಮಾನ್(ರ) ಭಯಭೀತರಾಗಿದ್ದರು ಎಂದು ಯಾರಾದರೂ ಹೇಳಬಹುದೇ? ಅವರು ಭಯಭೀತರಾಗಿದ್ದರೆ, ಅವರ ರಕ್ಷಣೆಗಾಗಿ ಸೈನ್ಯದ ತುಕಡಿಯನ್ನು ಕಳುಹಿಸಲು ಅವರು ಹೇಳುತ್ತಿದ್ದರು ಮತ್ತು ಅವರು (ಅಂದರೆ. ಹಝ್ರತ್ ಮುಆವಿಯ(ರ) ಅವರು ತಮ್ಮ ಸಂಬಳದ ಬಗ್ಗೆ ಚಿಂತಿಸಬೇಕಾಗಿಲ್ಲ ಏಕೆಂದರೆ ಅವರು ಅದನ್ನು ನೋಡಿಕೊಳ್ಳುತ್ತಾರೆ. ಹಝ್ರತ್ ಉಸ್ಮಾನ್(ರ) ಅವರು ಭಯಭೀತರಾಗಿದ್ದರೆ, ತನಗೆ ಏನಾದರೂ ಆಗಬೇಕಾದರೆ, ಮುಆವಿಯ(ರ) ಅದಕ್ಕೆ ಪ್ರತೀಕಾರ ತೀರಿಸಿಕೊಳ್ಳುತ್ತಾರೆ ಎಂದು ಅವರು ಘೋಷಿಸಬೇಕಾಗಿತ್ತು. ಆದರೆ ಮುಆವಿಯ(ರ) ಕಠಿಣ ನಿಲುವಿನಿಂದಾಗಿ ಹಝ್ರತ್ ಉಸ್ಮಾನ್(ರ) ಏನನ್ನೂ ಹೇಳಲಿಲ್ಲ, ಈ ಅಧಿಕಾರವನ್ನು ನೀಡಿದರೆ ಮುಸ್ಲಿಮರನ್ನು ಕಠಿಣವಾಗಿ ಪರಿಗಣಿಸಬಹುದೆಂದು ಆತಂಕಪಟ್ಟರು. ನಂತರ ಶತ್ರುಗಳು ಗೋಡೆಯ ಮೇಲೆ ಹಾರಿ ದಾಳಿ ಮಾಡಿದಾಗ, ಹಝ್ರತ್ ಉಸ್ಮಾನ್(ರ) ಯಾವುದೇ ಭಯ ಅಥವಾ ಭೀತಿಯಿಲ್ಲದೆ ಪವಿತ್ರ ಖುರ್‌ಆನ್ ಪಠಿಸುವುದನ್ನು ಮುಂದುವರೆಸಿದರು; ಹಝ್ರತ್ ಅಬೂಬಕರ್(ರ) ಅವರ ಪುತ್ರರಲ್ಲಿ ಒಬ್ಬರು ಮುಂದೆ ಹೆಜ್ಜೆ ಹಾಕಿದರು ಮತ್ತು ಹಝ್ರತ್ ಉಸ್ಮಾನ್(ರ) ಗಡ್ಡವನ್ನು ಹಿಡಿದು ಬಲವಂತದ ಹೊಡೆತವನ್ನು ನೀಡಿದನು. ಹಝ್ರತ್ ಉಸ್ಮಾನ್(ರ) ಅವನತ್ತ ನೋಡುತ್ತಾ, 'ಓ ನನ್ನ ಸಹೋದರನ ಮಗ! ನಿಮ್ಮ ತಂದೆ ಇಂದು ಜೀವಂತವಾಗಿದ್ದರೆ, ನೀವು ಎಂದಿಗೂ ಇಂತಹ ಕೆಲಸ ಮಾಡುತ್ತಿರಲಿಲ್ಲ. ಎಂದರು ಇದನ್ನು ಕೇಳಿದ ನಂತರ, ಅವನ ಇಡೀ ದೇಹವು ನಡುಗಲು ಪ್ರಾರಂಭಿಸಿತು ಮತ್ತು ಅವನು ಮುಜುಗರದಿಂದ ಹೊರಟುಹೋದನು. ನಂತರ ಅವರ ಸಹಚರನೊಬ್ಬನು ಮುಂದೆ ಹೆಜ್ಜೆ ಹಾಕಿ ಹಝ್ರತ್ ಉಸ್ಮಾನ್(ರ)ರ ತಲೆಯನ್ನು ಕಬ್ಬಿಣದ ರಾಡ್‌ನಿಂದ ಹೊಡೆದನು ಅಲ್ಲಿದ್ದ ಖುರ್‌ಆನ್‌ಅನ್ನು ಕಾಲಿನಿಂದ ಹೊಡೆದನು. ಈ ದಾಳಿಕೋರನು ಪಕ್ಕಕ್ಕೆ ಸರಿದಾಗ, ಇನ್ನೊಬ್ಬ ವ್ಯಕ್ತಿ ಮುಂದೆ ಹೆಜ್ಜೆ ಹಾಕಿ ಹಝ್ರತ್ ಉಸ್ಮಾನ್(ರ)ರನ್ನು ಕತ್ತಿಯಿಂದ ಹುತಾತ್ಮಗೊಳಿಸಿದನು. ಈ ಘಟನೆಗಳನ್ನು ಓದುವಾಗ, ಹಝ್ರತ್ ಉಸ್ಮಾನ್(ರ) ಅವರಿಗೆ ಭಯದ ಅಯೋಟಾ ಕೂಡ ಇದೆ ಎಂದು ಯಾರು ಹೇಳಬಹುದು?

(ಖಿಲಾಫತ್-ಎ-ರಶೀದಾ, ಅನ್ವರ್-ಉಲ್-ಉಲುಮ್, ಸಂಪುಟ-15, ಪುಟ-536-537)

ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಆಗಮನವು ಪ್ರವಾದಿ ನೋವಾ(ರಂತೆ), ಪ್ರವಾದಿ ಇಬ್ರಾಹೀಮ್(ನಂತೆ), ಪ್ರವಾದಿ ದಾವೂದ್(ನಂತೆ), ಪ್ರವಾದಿ ಸುಲೈಮಾನ್(ನಂತೆ) ಮತ್ತು ಇತರ ಪ್ರವಾದಿಗಳ ಆಗಮನದಂತೆಯೇ ನಡೆಯಿತು. ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಂತರ ಖಿಲಾಫತ್ ಪರಂಪರೆಯು ಹಿಂದೆ ಕಾಣಿಸಿಕೊಂಡ ಪ್ರವಾದಿಗಳ ನಂತರ ಸ್ಥಾಪನೆಯಾದಂತೆಯೇ ಸ್ಥಾಪನೆಯಾಯಿತು. ನಾವು ಇದರ ಬಗ್ಗೆ ಎಚ್ಚರಿಕೆಯಿಂದ ಆಲೋಚಿಸಿದರೆ ಮತ್ತು ಅದರ ನೈಜ ವಾಸ್ತವತೆಯನ್ನು ಪರಿಶೀಲಿಸಲು ಪ್ರಯತ್ನಿಸಿದರೆ, ಇದು ಅಸಾಧಾರಣ ಪರಂಪರೆ ಎಂದು ನಮಗೆ ಅರಿವಾಗುತ್ತದೆ ಅಂದರೆ ಖಿಲಾಫತ್ ಪರಮಪರೆ. ಖಿಲಾಫತ್ ಎಂಬುದು ಮಹೋನ್ನತವಾದ ಒಂದು ಪರಂಪರೆಯಾಗಿದೆ ಎಂದು ನಾವು ಬುದ್ಧಿಪೂರ್ವಕವಾಗಿ ನೋಡಿದರೆಗೊತ್ತಾಗುವುದು. ನನಗೆ ಇತರರ ಕುರಿತು ಗೊತ್ತಿಲ್ಲ, ಆದರೆ ಕನಿಷ್ಠ ಪಕ್ಷ ನನ್ನ ಬಗ್ಗೆ ಗೊತ್ತಿದೆ. ಅದೇನೆಂದರೆ, ಹಝ್ರತ್ ಪೈಗಂಬರರ(ಸ) ಕಾಲಘಟ್ಟದ ಚರಿತ್ರೆಯನ್ನು ಓದಿದ ನಂತರ ಹಝ್ರತ್ ಉಸ್ಮಾನ್‌ರಿಗೆ(ರ) ಉಂಟಾದ ಕಷ್ಟತೆಗಳನ್ನು ನೋಡುವಾಗ, ಇನ್ನೊಂದು ಕಡೆ ಹಝ್ರತ್ ಪೈಗಂಬರ್(ಸ) ಬಂದು ಅವರಲ್ಲಿ ಉಂಟುಮಾಡಿದ ಪ್ರಕಾಶ ಮತ್ತು ಆಧ್ಯಾತ್ಮಿಕತೆಯನ್ನು ನೋಡುವಾಗ ನಾನು ಹೇಳುತ್ತೇನೆ, ಲೋಕದಲ್ಲಿ ನನಗೆ ಹತ್ತು ಸಾವಿರ ಮಕ್ಕಳು ಜನಿಸಲು ಇದ್ದಿದ್ದರೆ, ಫಿತ್ನವನ್ನು ಕೊನೆಗೊಳಿಸಲು ಅವರೆಲ್ಲರನ್ನು ಒಟ್ಟಾಗಿ ಸೇರಿಸಿಕೊಂಡು ಅವರ ಜೀವತ್ಯಾಗ ಮಾಡಿಸಬೇಕಾಗಿ ಬಂದರೂ ಇದು ಪರೋಪಜೀವಿಗಳ ವಿನಿಮಯವಾಗಿ ಆನೆಯನ್ನು ಖರೀದಿಸುವ (ಗಾದೆ ಅಭಿವ್ಯಕ್ತಿಗೆ) ಹೋಲುತ್ತದೆ ಎಂದು ಭಾವಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಈ (ತ್ಯಾಗದ ಕ್ರಿಯೆ) ಕೀಟದಂತಹ ಸಣ್ಣದನ್ನು ಕೊಡುವುದಕ್ಕಿಂತಲೂ ಮತ್ತು ಆನೆಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕಿಂತಲೂ ಕಡಿಮೆ ಇರುತ್ತದೆ. ಸತ್ಯವೆಂದರೆ ನಾವು ಬಹಳ ಸಮಯದ ನಂತರ ಮಾತ್ರ ನಿಜವಾದ ಮೌಲ್ಯವನ್ನು ಅರಿತುಕೊಳ್ಳುತ್ತೇವೆ. ಹಝ್ರತ್ ಉಸ್ಮಾನ್(ರ) ಅವರ ಹುತಾತ್ಮತೆಯ ನಂತರವೇ ಜನರು ಖಿಲಾಫತ್‌ನ ನಿಜವಾದ ಮಹತ್ವವನ್ನು ಅರಿತುಕೊಂಡರು. (ನಬುವ್ವತ್ ಔರ್ ಖಿಲಾಫತ್ ಅಪ್ನೆ ವಕ್ತ್ ಪರ್ ಜುಹೂರ್ ಪಜೀರ್ ಹೋ ಜಾತಿ ಹೈ, ಅನ್ವರ್-ಉಲ್-ಉಲುಮ್, ಸಂಪುಟ-18, ಪುಟ-246)

ಹಝ್ರತ್ ಮುಸ್ಲೆಹ್ ಮೌಊದ್(ರ) ಮತ್ತಷ್ಟು ಹೀಗೆ ಹೇಳುತ್ತಾರೆ: ಎಲ್ಲ ಸಹಾಬರ ದೃಷ್ಟಿಯಲ್ಲಿ, ಹಝ್ರತ್ ಉಮರ್‌ರ(ರ) ನಂತರ ಖಿಲಾಫತ್ ಸ್ಥಾನದಲ್ಲಿ ಇರಲು ಅರ್ಹರು ಹಝ್ರತ್ ಉಸ್ಮಾನ್(ರ) ಆಗಿದ್ದರು. ಶ್ರೇಷ್ಠ ಸಹಾಬರ ಸಮಾಲೋಚನೆಯಿಂದ ಈ ಕೆಲಸಕ್ಕಾಗಿ ಹಝ್ರತ್ ಉಸ್ಮಾನ್(ರ) ಆಯ್ಕೆಗೊಂಡರು. ಅವರು ಹಝ್ರತ್ ಪೈಗಂಬರರ(ಸ) ಅಳಿಯರಾಗಿದ್ದರು. ಒಬ್ಬರ ನಂತರ ಇನ್ನೊಬ್ಬರಂತೆ ಹಝ್ರತ್ ಪೈಗಂಬರರ(ಸ) ಇಬ್ಬರು ಪುತ್ರಿಯರನ್ನು ಅವರಿಗೆ ವಿವಾಹ ಮಾಡಿಸಿ ಕೊಡಲಾಗಿತ್ತು. ಹಝ್ರತ್

ಪೈಗಂಬರರ(ಸ) ದೃಷ್ಟಿಯಲ್ಲಿ ಅವರಿಗೆ ವಿಶೇಷವಾದ ಸ್ಥಾನಮಾನಗಳು ಇದ್ದುವು ಎಂದು ಇದರಿಂದ ಗೊತ್ತಾಗುತ್ತದೆ. ಅವರು ಮಕ್ಕಾದ ಜನರ ದೃಷ್ಟಿಯಲ್ಲಿ ಬಹಳ ವಿಶಿಷ್ಟವಾದ ಸ್ಥಾನವನ್ನು ಹೊಂದಿದ್ದರು ಮತ್ತು ಆ ಸಮಯದಲ್ಲಿ ಅರೇಬಿಯಾದ ಸಂದರ್ಭಗಳಿಗೆ ಅನುಗುಣವಾಗಿ ಶ್ರೀಮಂತರಾಗಿದ್ದರು. ಹಝ್ರತ್ ಅಬೂಬಕರ್(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ನಂತರ, ಇಸ್ಲಾಂ ಧರ್ಮದ ಸಂದೇಶವನ್ನು ಬೋಧಿಸಲು ಅವರು ವಿಶೇಳವಾಗಿ ಆಯ್ಕೆ ಮಾಡಿದ ಜನರಲ್ಲಿ ಒಬ್ಬರು ಹಝ್ರತ್ ಉಸ್ಮಾನ್(ರ). ಹಝ್ರತ್ ಉಸ್ಮಾನ್(ರ)ರ ಬಗ್ಗೆ ಹಝ್ರತ್ ಅಬೂಬಕರ್(ರ) ಅವರ ದೃಷ್ಟಿಕೋನವು ಸುಳ್ಳು ಎಂದು ಸಾಬೀತಾಗಿಲ್ಲ ಮತ್ತು ಕೆಲವು ದಿನಗಳ ಉಪದೇಶದ ನಂತರವೇ ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಈ ರೀತಿಯಾಗಿ, ಅವರು ಪವಿತ್ರ ಖುರ್‌ಆನ್ ಶ್ಲಾಘನೀಯ ಪದಗಳಲ್ಲಿ ಹೊಗಳಿದ **ಅಸ್ಸಾಬಿಖೂನಲ್ ಅವ್ವಲೂನ್** ಅಂದರೆ ಇಸ್ಲಾಂ ಧರ್ಮದ ಪ್ರವರ್ತಕ ಗುಂಪಿನಲ್ಲಿ ಸೇರಿಕೊಂಡರು. ಅರಬರಲ್ಲಿ ಅವರು ಎಷ್ಟರ ಮಟ್ಟಿಗೆ ಗೌರವ ಹೊಂದಿದ್ದರು ಎಂಬುದರ ಬಗ್ಗೆ ಒಂದು ಘಟನೆಯಿಂದ ಸ್ಪಷ್ಟವಾಗುತ್ತದೆ. ಒಮ್ಮೆ ಪ್ರವಾದಿ ಮುಹಮ್ಮದ್(ಸ) ಒಂದು ಕನಸ್ಸಿನ ಆಧಾರದ ಮೇಲೆ ಮೆಕ್ಕಾಗೆ ಪ್ರಯಾಣಿಸಿದಾಗ ಮಕ್ಕದ ದುರುದ್ದೇಶ ಮತ್ತು ದ್ವೇಳದಿಂದ ಕುರುಡಾಗಿರುವ ಜನರು ಅವರಿಗೆ ಉಮ್ರಾ ನಿರ್ವಹಿಸಲು ಅನುಮತಿ ನೀಡಲಿಲ್ಲ ಆಗ ಪವಿತ್ರ ಪ್ರವಾದಿ(ಸ) ಈ ವಿಳಯದ ಬಗ್ಗೆ ಮಾತುಕತೆ ನಡೆಸಲು ಗೌರವಾನ್ವಿತ ವ್ಯಕ್ತಿಯನ್ನು ಮಕ್ಕದ ಜನರಿಗೆ ಕಳುಹಿಸಬೇಕು ಎಂದು ಪ್ರಸ್ತಾಪಿಸಿದರು. ಇದಕ್ಕಾಗಿ ಹಝ್ರತ್ ಉಮರ್(ರ) ಅವರನ್ನು ಆಯ್ಕೆ ಮಾಡಿದಾಗ, ಅವರು ಉತ್ತರಿಸಿದರು, ಪ್ರವದಿ ವರ್ಯರೇ! ನಾನು ಹೋಗಲು ಸಿದ್ಧನಿದ್ದೇನೆ, ಆದರೆ ಮೆಕ್ಕಾದೊಂದಿಗೆ ಮಾತುಕತೆ ನಡೆಸಬಲ್ಲ ಯಾರಾದರೂ ಇದ್ದರೆ, ಅದು ಹಝ್ರತ್ ಉಸ್ಮಾನ್(ರ) ಆಗಿದ್ದಾರೆ ಏಕೆಂದರೆ ಅವರು ಅವರ ದೃಷ್ಟಿಯಲ್ಲಿ ವಿಶೇಳ ಗೌರವವನ್ನು ಹೊಂದಿದ್ದಾರೆ. ಆದ್ದರಿಂದ, ಬೇರೊಬ್ಬರು ಹೋಗಬೇಕಾದರೆ, ಹಝ್ರತ್ ಉಸ್ಮಾನ್(ರ) ಹೋದರೆ ಅವರ ವಿರುದ್ಧ ಯಶಸ್ಸಿನ ನಿರೀಕ್ಷೆ ಇರುವುದಿಲ್ಲ. ಪ್ರವಾದಿ ಮುಹಮ್ಮದ್(ಸ)ರವರು ಕೂಡ ಈ ಅಭಿಪ್ರಾಯವನ್ನು ಸರಿಯೆಂದು ಪರಿಗಣಿಸಿದರು ಮತ್ತು ಇದರ ಪರಿಣಾಮವಾಗಿ ಹಝ್ರತ್ ಉಸ್ಮಾನ್(ರ) ರನ್ನು ಕಾರ್ಯಕ್ಕಾಗಿ ಕಳುಹಿಸಿದರು. ಈ ಘಟನೆಯಿಂದ ಹಝ್ರತ್ ಉಸ್ಮಾನ್(ರ) ರನ್ನು ಅವಿಶ್ವಾಸಿಗಳು ವಿಶೇಳ ಗೌರವದಿಂದ ನೋಡಿದ್ದಾರೆಂದು ತಿಳಿಯಬಹುದು.

ಹಝ್ರತ್ ಪೈಗಂಬರ್(ಸ) ಅವರನ್ನು ತುಂಬಾ ಗೌರವಿಸುತ್ತಿದ್ದರು. ಒಂದು ಸಲ ಹಝ್ರ್‌ರತ್ ಪೈಗಂಬರ್(ಸ) ಮಲಗಿದ್ದರು. ಅಲ್ಲಿಗೆ ಹಝ್ರ್‌ರತ್ ಅಬೂಬಕರ್(ರ) ಬಂದರು. ಹಝ್ರ್‌ರತ್ ಪೈಗಂಬರ್(ಸ) ಹಾಗೆಯೇ ಮಲಗಿದ್ದರು. ಅನಂತರ ಹಝ್ರ್‌ರತ್ ಉಮರ್(ರ) ಬಂದರು. ಆಗಲೂ ಹಝ್ರ್‌ರತ್ ಪೈಗಂಬರ್(ಸ) ಹಾಗೆಯೇ ಮಲಗಿದ್ದರು. ಅನಂತರ ಹಝ್ರ್‌ರತ್ ಉಸ್ಮಾನ್(ರ) ಬಂದರು. ಹಝ್ರ್‌ರತ್ ಪೈಗಂಬರ್(ಸ) ಬೇಗನೇ ತನ್ನ ಬಟ್ಟೆಯನ್ನು ಸರಿಪಡಿಸಿದರು ಮತ್ತು ಹೀಗೆ ಹೇಳಿದರು: ಹಝ್ರ್‌ರತ್ ಉಸ್ಮಾನ್‌ರ ಸ್ವಭಾವದಲ್ಲಿ ಲಜ್ಜೆ ತುಂಬ ಇದೆ. ಆದ್ದರಿಂದ ನಾನು ಅವರ ಭಾವನೆಗಳನ್ನು ಗಮನದಲ್ಲಿಟ್ಟುಕೊಂಡು ಹೀಗೆ ಮಾಡಿದ್ದೆ. ಇಸ್ಲಾಂ ಧರ್ಮವನ್ನು ಅಂಗೀಕರಿಸುವುದಕ್ಕೆ ಮುಂಚಿತವಾಗಿಯೇ ಯಾವತ್ತೂ ಶರಾಬು ಕುಡಿದಿರದ ಮತ್ತು ವ್ಯಭಿಚಾರದ ಸಮೀಪ ಕೂಡ ಹೋಗದ ವಿರಳವಾದ ವ್ಯಕ್ತಿಗಳಲ್ಲಿ ಹಝ್ರ್‌ರತ್ ಉಸ್ಮಾನ್(ರ) ಒಬ್ಬರಾಗಿದ್ದರು. ಅವರೊಬ್ಬ ಸಾಮಾನ್ಯ ವ್ಯಕ್ತಿಯಾಗಿರಲಿಲ್ಲ. ಅತ್ಯಂತ ಉನ್ನತ ಮಟ್ಟದ ಸ್ವಭಾವಗುಣಗಳು ಅವರಲ್ಲಿ ಕಾಣಬಹುದಾಗಿತ್ತು. ಹಝ್ರ್‌ರತ್ ಪೈಗಂಬರ್(ಸ) ಅವರೊಡನೆ ಅತ್ಯಂತ ಸಂತುಷ್ಟರಾಗಿದ್ದರು. ಹಝ್ರ್‌ರತ್ ಪೈಗಂಬರರ(ಸ)ರ ನಿಧನದ ಸಮಯದಲ್ಲಿ, ಅವರು(ಸ) ಅತ್ಯಂತ ಸಂತುಷ್ಟರಾಗಿದ್ದ ಆರು ಜನರಲ್ಲಿ ಹಝ್ರ್‌ರತ್ ಉಸ್ಮಾನ್(ರ) ಒಬ್ಬರಾಗಿದ್ದರು ಎಂದು ಹಝ್ರ್‌ರತ್ ಉಮರ್(ರ) ಹೇಳುತ್ತಾರೆ. ಅಶ್ರ ಮುಬಶ್ಶಿರ, ಎಂದರೆ ಸ್ವರ್ಗಕ್ಕೆ ಅರ್ಹರು ಎಂದು ಹಝ್ರ್‌ರತ್ ಪೈಗಂಬರ್(ಸ) ಹೇಳಿದ್ದ ಹತ್ತು ವ್ಯಕ್ತಿಗಳಲ್ಲಿ ಹಝ್ರ್‌ರತ್ ಉಸ್ಮಾನ್(ರ) ಒಬ್ಬರಾಗಿದ್ದರು. (ಇಸ್ಲಾಂ ಮೇ ಮೇ ಇಖ್ತಿಲಾಫತ್ ಕಾ ಆಗಾಝ್, ಅನ್ವರ್-ಉಲ್-ಉಲುಮ್, ಸಂಪುಟ-4, ಪುಟ-251-253)

ಹಝ್ರತ್ ಉಸ್ಮಾನ್(ರ) ಹುತಾತ್ಮತೆ ನಡೆದ ದಿನಕ್ಕೆ ಸಂಬಂಧಿಸಿದಂತೆ, ಅವರು ಶುಕ್ರವಾರ ಧುಲ್ ಹಿಜ್ಜಾ 35 ಹಿಜರಿ 17 ಅಥವಾ 18 ರಂದು ಹುತಾತ್ಮರಾಗಿದ್ದರು ಎಂದು ಹೇಳಲಾಗಿದೆ. ಅಬು ಉಸ್ಮಾನ್ ನಹ್ದಿ ಅವರ ಪ್ರಕಾರ, ಹಝ್ರತ್ ಉಸ್ಮಾನ್(ರ) ಅಯಮ್-ಎ-ತಶ್ರೀಕ್ ಮಧ್ಯ ದಿನಗಳಲ್ಲಿ ಹುತಾತ್ಮರಾದರು, ಅಂದರೆ 12 ಧುಲ್ ಹಿಜ್ಜಾ. ಆದಾಗ್ಯೂ, ಇಬ್ನ್ ಇಸ್ಹಾಕ್ ಅವರ ಪ್ರಕಾರ, ಹಝ್ರತ್ ಉಮಾನ್(ರ) ರವರ ಹುತಾತ್ಮತೆಯ ನಂತರ 11 ವರ್ಷ, 11 ತಿಂಗಳು ಮತ್ತು 22 ದಿನಗಳ ನಂತರ ಮತ್ತು ಪ್ರವಾದಿ(ಸ) ರ ನಿಧನದ 25 ವರ್ಷಗಳ ನಂತರ ಹಝ್ರತ್ ಉಸ್ಮಾನ್(ರ) ಹುತಾತ್ಮರಾದರು. (ಅಲ್‌ಇಸ್ತಿಆಬ್ ಫೀ ಮಾರಿಫತಿಸ್ಸಹಾಬ ಭಾಗ-3, ಪುಟ-159 ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಮತ್ತೊಂದು ವರದಿಯ ಪ್ರಕಾರ, ಅಬ್ದುಲ್ಲಾ ಬಿನ್ ಅಮರ್ ಬಿನ್ ಉಸ್ಮಾನ್ ಅವರು ಹಝ್ರತ್ ಉಸ್ಮಾನ್(ರ) ಅವರು ತಮ್ಮ 82 ನೇ ವಯಸ್ಸಿನಲ್ಲಿ ಶುಕ್ರವಾರ 18ರ ಧುಲ್ ಹಜ್ಜ್ 36 ಹಿಜರಿ ಪ್ರಾರ್ಥನೆಯ ನಂತರ ಹುತಾತ್ಮರಾದರು ಎಂದು ವಿವರಿಸಿದ್ದಾರೆ. ಮತ್ತು ಅವರು ಹುತಾತ್ಮರಾದ ದಿನ ಉಪವಾಸ ಮಾಡುತ್ತಿದ್ದರು. ಅಬು ಮಾಶರ್ ಅವರ ಪ್ರಕಾರ, ಹಝ್ರತ್ ಉಸ್ಮಾನ್(ರ) ಅವರ ಹುತಾತ್ಮರ ಸಮಯದಲ್ಲಿ 75 ವರ್ಷ ವಯಸ್ಸಾಗಿತ್ತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-3, ಪುಟ-43, ದಾರ್ ಅಹ್ಯಾಉತ್ತರಾಸು ಅರಬಿ ಬೈರೂತ್ 1996)

ಹಝ್ರತ್ ಉಸ್ಮಾನ್(ರ) ಅಂತ್ಯಕ್ರಿಯೆಯ ವ್ಯವಸ್ಥೆಗೆ ಸಂಬಂಧಿಸಿದಂತೆ, ನಿಯಾರ್ ಬಿನ್ ಮುಕ್ರಮ್ ಅವರು ಮಗ್ರಿಬ್ ಮತ್ತು ಇಶಾ ಸಮಯದ ನಡುವಿನ ಶನಿವಾರ ಎಂದು ವಿವರಿಸಿದ್ದಾರೆ, ಹಝ್ರತ್ ಉಸ್ಮಾನ್(ರ) ದೇಹವನ್ನು ಅವರು ಸೇರಿದಂತೆ ನಾಲ್ಕು ವ್ಯಕ್ತಿಗಳು ಹೊತ್ತೊಯ್ದರು- ಜುಬೈರ್ ಬಿನ್ ಮುತೀಮ್, ಹಕೀಮ್ ಬಿನ್ ಹಿಜಾಮ್ ಮತ್ತು ಅಬು ಜುಹಾಮ್ ಬಿನ್ ಹುಜೈಫಾ. ಹಝ್ರತ್ ಜುಬೈರ್ ಬಿನ್ ಮುತೈಮ್ ಅಂತ್ಯಕ್ರಿಯೆಯ ಪ್ರಾರ್ಥನೆಯನ್ನು ಮುನ್ನಡೆಸಿದರು ಮತ್ತು ಮುಆವಿಯ ಈ ನಿರೂಪಣೆಯನ್ನು ದೃಢ ಪಡಿಸಿದ್ದಾರೆ. ಇದೇ ನಾಲ್ಕು ವ್ಯಕ್ತಿಗಳು ಅವನನ್ನು (ಸಮಾಧಿಗಾಗಿ) ಸಮಾಧಿಗೆ ಇಳಿಸಿದರು. ಒಂದು ನಿರೂಪಣೆಯ ಪ್ರಕಾರ, ಹಝ್ರತ್ ಜುಬೈರ್ ಬಿನ್ ಮುತೈಮ್ 16 ಜನರಿರುವ ಸಭೆಯೊಂದಿಗೆ ಹಝ್ರತ್ ಉಸ್ಮಾನ್(ರ) ಅವರ ಅಂತ್ಯಕ್ರಿಯೆಯ ಪ್ರಾರ್ಥನೆಯನ್ನು ಮುನ್ನಡೆಸಿದರು. ಮೊದಲ ನಿರೂಪಣೆ ಹೆಚ್ಚು ಸರಿಯಾಗಿದೆ ಎಂದು ಅಲ್ಲಾಮಾ ಇಬ್ನ್ ಸಾದ್ ಹೇಳುತ್ತಾರೆ, ಅಂದರೆ ಅಂತ್ಯಕ್ರಿಯೆಯ ಪ್ರಾರ್ಥನೆಯನ್ನು ನಾಲ್ಕು ಜನರು ಅರ್ಪಿಸಿದರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-3, ಪುಟ-43, ದಾರ್ ಅಹ್ಯಾಉತ್ತರಾಸು ಅರಬಿ ಬೈರೂತ್ 1996)

ಮಾಗ್ರಿಬ್ ಮತ್ತು ಇಶಾ ಪ್ರಾರ್ಥನೆಗಳ ನಡುವೆ ಶನಿವಾರ ಸಂಜೆ ಹಝ್ರತ್ ಉಸ್ಮಾನ್(ರ) ರನ್ನು ಹಶ್-ಎ-ಕೊಕಾಬ್‌ನಲ್ಲಿ ಸಮಾಧಿ ಮಾಡಲಾಯಿತು ಎಂದು ಅಬ್ದುಲ್ಲಾ ಬಿನ್ ಅಮರ್ ಬಿನ್ ಉಸ್ಮಾನ್ ವಿವರಿಸಿದ್ದಾರೆ. ಜನರು ತಮ್ಮ ಅಗಲಿದವರನ್ನು ಹ್ಯಾಶ್-ಎ-ಕೊಕಾಬ್‌ನಲ್ಲಿ ಹೂಳಲು ಬಯಸುತ್ತಾರೆ ಎಂದು ರಬಿ ಬಿನ್ ಮಲಿಕ್ ತನ್ನ ತಂದೆಯಿಂದ ಹೇಳುತ್ತರೆ. **"ಹ್ಯಾಶ್"** ಎಂದರೆ ಒಂದು ಸಣ್ಣ ಉದ್ಯಾನ ಮತ್ತು **"ಕೊಕಾಬ್"** ಎಂಬುದು ಈ ಉದ್ಯಾನವನ್ನು ಹೊಂದಿದ್ದ ಅನ್ಸಾರಿಯ ಹೆಸರು. ಇದು ಜನ್ನತ್-ಉಲ್-ಬಕಿಗೆ ಬಹಳ ಹತ್ತಿರದಲ್ಲಿದೆ. ಹಝ್ರತ್ ಉಸ್ಮಾನ್(ರ) ಬಿನ್ ಅಫಾನ್ ಆಗಾಗ್ಗೆ ಹೇಳುವ ಪ್ರಕಾರ, ಶೀಘ್ರದಲ್ಲೇ ನೀತಿವಂತನೊಬ್ಬನು ತೀರಿಕೊಳ್ಳುತ್ತಾನೆ ಮತ್ತು ಅವನನ್ನು ಅಲ್ಲಿಯೇ ಸಮಾಧಿ ಮಾಡಲಾಗುತ್ತದೆ, ಅಂದರೆ ಹಶ್-ಎ-ಕೊಕಾಬ್‌ನಲ್ಲಿ ಮತ್ತು ಜನರು ಕೂಡ ಅದೇ ರೀತಿ ಮಾಡುತ್ತಾರೆ. ಮಲಿಕ್ ಬಿನ್ ಅಬು ಅಮೀರ್ ಅವರು ಹಝ್ರತ್ ಉಸ್ಮಾನ್(ರ) ಅವರನ್ನು ಅಲ್ಲಿ ಸಮಾಧಿ ಮಾಡಿದ ಮೊದಲ ವ್ಯಕ್ತಿ ಎಂದು ಹೇಳುತ್ತಾರೆ. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-3, ಪುಟ-42-43, ದಾರ್ ಅಹ್ಯಾಉತ್ತರಾಸು ಅರಬಿ ಬೈರೂತ್ 1996) (ಅಲ್‌ಅಸಾಬ ಫೀ ತಮೀಝಿಸ್ಸಹಾಬ ಸಂಪುಟ-5, ಪುಟ-468, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2005)

ಹಝ್ರತ್ ಉಸ್ಮಾನ್(ರ) ಸಮಾಧಿಗೆ ಸಂಬಂಧಿಸಿದಂತೆ ಮತ್ತೊಂದು ವರದಿ ಇದೆ, ಮೂರು ದಿನಗಳವರೆಗೆ, ಕಿಡಿಗೇಡಿತನ ಮಾಡುವವರು ಮತ್ತು ಬಂಡುಕೋರರು ಹಝ್ರತ್ ಉಸ್ಮಾನ್(ರ)ರನ್ನು ದಫನ್ ಮಾಡಲು ಅನುಮತಿಸಲಿಲ್ಲ. ಮೂರು ದಿನಗಳ ಕಾಲ ಹಝ್ರತ್ ಉತ್ಮಾನ್(ರ) ದೇಹವನ್ನು ಸಮಾಧಿಯಿಲ್ಲದೆ ಬಿಡಲಾಯಿತು ಅಥವಾ ಬಟ್ಟೆಯಲ್ಲಿ ಮುಚ್ಚಲಾಗಿಲ್ಲ, ಅಥವಾ ಅವರನ್ನು ಸಮಾಧಿ ಮಾಡಲು ಅನುಮತಿಸಲಾಗಿಲ್ಲ ಎಂದು ಅಬೂ ಬಶೀರ್ ಅಬ್ದಿ ಹೇಳಿದ್ದಾರೆ ಎಂದು ತಾರಿಖ್ ಅಲ್-ತಬರಿಯಲ್ಲಿ ಬರೆಯಲಾಗಿದೆ. ನಂತರ, ಹಝ್ರತ್ ಉಕಮಾನ್(ರ) ಸಮಾಧಿಗೆ ಸಂಬಂಧಿಸಿದಂತೆ ಹಝ್ರತ್ ಹಕೀಮ್ (ರ) ಬಿನ್ ಹಿಜಮ್ ಮತ್ತು ಹಝ್ರತ್ ಜುಬೈರ್(ರ) ಬಿನ್ ಮುತೀಮ್ ಅವರು ಹಝ್ರತ್ ಅಲಿ(ರ) ರೊಂದಿಗೆ ಮಾತನಾಡಿದರು, ಅವರು ಹಝ್ರತ್ ಉಸ್ಮಾನ್(ರ) ಅವರ ಕುಟುಂಬವನ್ನು ಅನುಮತಿ ನೀಡುವಂತೆ ಕೇಳಿಕೊಳ್ಳುತ್ತಾರೆ ಅವನನ್ನು ಹೂಳಲು. ಮತ್ತು ಆದ್ದರಿಂದ ಹಝ್ರತ್ ಅಲಿ(ರ) ಕೇಳಿದರು ಮತ್ತು ಅವರು ಅನುಮತಿ ನೀಡಿದರು. ಇದನ್ನು ತಿಳಿದ ಬಂಡುಕೋರರು ಕಲ್ಲುಗಳನ್ನು ಸಂಗ್ರಹಿಸಿ ದಾರಿಯುದ್ದಕ್ಕೂ ನಿಂತರು. ಹಝ್ರತ್ ಉಸ್ಮಾನ್(ರ) ಅವರ ಕುಟುಂಬದ ಕೆಲವು ಸದಸ್ಯರು ಅವರ ಅಂತ್ಯಕ್ರಿಯೆಯೊಂದಿಗೆ ಬಂದರು ಮತ್ತು ಮದೀನಾದಲ್ಲಿ ಹ್ಯಾಶ್-ಎ-ಕೊಕಾಬ್ ಎಂದು ಕರೆಯಲ್ಪಡುವ ಪ್ರದೇಶವನ್ನು ಪ್ರವೇಶಿಸಲು ಬಯಸಿದ್ದರು, ಅಲ್ಲಿ ಯಹೂದಿಗಳು ತಮ್ಮ ಸತ್ತವರನ್ನು ಸಮಾಧಿ ಮಾಡುತ್ತಾರೆ. ಹಝ್ರತ್ ಉಸ್ಮಾನ್(ರ) ಅವರ ದೇಹವನ್ನು ಹೊರಗೆ ತಂದಾಗ, ಅವರು (ಅಂದರೆ

ಬಂಡುಕೋರರು) ಅವರ ಹಾಸಿಕೆಯ ಮೇಲೆ ಕಲ್ಲುಗಳನ್ನು ಎಸೆದರು ಮತ್ತು ಅದನ್ನು ಕೆಳಗೆ ಬೀಳಿಸುವಂತೆ ಪ್ರಯತ್ನಿಸುತ್ತಿದ್ದರು. ಈ ಘಟನೆಯ ಸುದ್ದಿ ಹಝ್ರತ್ ಅಲಿ(ರ) ಗೆ ತಲುಪಿದಾಗ, ಅವರು ಅವರಿಗೆ ಸಂದೇಶವನ್ನು ಕಳುಹಿಸಿದರು ಮತ್ತು ಅಂತಹ ಕೆಲಸ ಮಾಡದಂತೆ ಎಚ್ಚರಿಕೆ ನೀಡಿದರು. ಇದರ ನಂತರ, ಅವರು ನಿಲ್ಲಿಸಿದರು. ಹಝ್ರತ್ ಉಸ್ಮಾನ್(ರ) ರನ್ನು ಹಶ್–ಎ–ಕೊಕಾಬ್‌ನಲ್ಲಿ ಸಮಾಧಿ ಮಾಡುವವರೆಗೂ ಅಂತ್ಯಕ್ರಿಯೆ ನಡೆಯಿತು. ಅಮೀರ್ ಮುಆವಿಯ ಅಧಿಕಾರ ವಹಿಸಿಕೊಂಡಾಗ, ಅವರು ಸ್ಮಶಾನದ ಗೋಡೆಗಳನ್ನು ಕಿತ್ತುಹಾಕುವಂತೆ ಆದೇಶಿಸಿದರು, ಇದರಿಂದ ಅದು ಜನ್ನತುಲ್ ಬಾಕಿಯ ಸ್ಮಶಾನದೊಂದಿಗೆ ವಿಲೀನಗೊಂಡಿತು. ಅವರು ಹೊರಟುಹೋದವರನ್ನು ಹಝ್ರತ್ ಉಸ್ಮಾನ್(ರ) ಸಮಾಧಿಯ ಹತ್ತಿರ ಹೂಳಬೇಕೆಂದು ಜನರಿಗೆ ಸೂಚಿಸಿದರು ಈ ರೀತಿಯಾಗಿ ಈ ಪ್ರದೇಶದ ಸಮಾಧಿಗಳು ಇತರ ಮುಸ್ಲಿಮರ ಸಮಾಧಿಗೆ ಸೇರಿಕೊಂಡವು. (ತಾರೀಖ್ ಅತ್ತಿಬರಿ, ಸಪುಟ–2, ಪುಟ–687, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1987)

ಇತರ ಐತಿಹಾಸಿಕ ಮೂಲಗಳ ಪ್ರಕಾರ, ಹಝ್ರತ್ ಉಸ್ಮಾನ್(ರ) ಅವರು ಈ ಭೂಮಿಯನ್ನು ಖರೀದಿಸಿ ಅದನ್ನು ಜನ್ನತುಲ್ ಬಾಕಿಯ ಭಾಗವಾಗಿ ಸೇರಿಸಿದ್ದಾರೆ ಎಂದು ಉಲ್ಲೇಖಿಸಲಾಗಿದೆ. (ಉಸ್ದ್ ಅಲ್–ಘಾಬಾ ಫಿ ಮಾರಿಫತ್ ಅಲ್–ಸಹಾಬಾ, ಸಂಪುಟ–3, ಉಸ್ಮಾನ್(ರಾ) ಬಿನ್ ಅಫಾನ್, ಬೈರುತ್, ಲೆಬನಾನ್: ದಾರ್ ಅಲ್–ಕುತುಬ್ ಅಲ್–ಇಲ್ಮಿಯಾಹ್, 2003, ಪುಟ–586)

ಈಗ ನಾನು ಕೆಲವು ಜನಾಝ಼ ಸಹ ನಿರ್ವಹಿಸುವೆನು. ಅವರ ಬಗ್ಗೆಗಿನ ಪ್ರಸ್ತಾಪ ಮಾಡುತ್ತೇನೆ. ಮೊದಲ ಪ್ರಸ್ತಾಪ ಐವರಿಕೋಸ್ಟಿನ ಮುಬಲ್ಲಿಗ್ ಮೌಲವಿ ಮುಹಮ್ಮದ್ ಇದ್ರೀಸ್ ತೇರೂ ಸಾಹಿಬ್‌ರದ್ದಾಗಿದೆ. ಫೆಬ್ರವರಿ 27–28ರ ಮಧ್ಯರಾತ್ರಿ ಸ್ವಲ್ಪ ಕಾಲದ ರೋಗಾವಸ್ಥೆಯ ನಂತರ ನಿಧನರಾದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಇವರು ಐವರಿಕೋಸ್ಟಿನವರಾಗಿದ್ದರು. ಪ್ರಾಥಮಿಕ ಶಿಕ್ಷಣದ ನಂತರ ಬುರ್ಕಿನಾಫಾಸೋಗೆ ಹೋದರು. ಭೌತಿಕ ವಿದ್ಯಾಭ್ಯಾಸದೊಂದಿಗೆ ಅರಬಿ ಭಾಷೆಯಲ್ಲಿ ಪ್ರಾವೀಣ್ಯ ಪಡೆದರು. 1960ರ ಕಾಲದಲ್ಲಿ ಅಹ್ಮದಿಯ್ಯತ್ ಸ್ವೀಕರಿಸಿದರು. 1983ರಲ್ಲಿ ತನ್ನ ಸ್ವಂತ ಇಷ್ಟ ಪ್ರಕಾರ ಪಾಕಿಸ್ತಾನಕ್ಕೆ ಹೋದರು. ಅಲ್ಲಿಂದ ತೇರ್ಗಡೆಯಾದ ನಂತರ ಐವರಿಕೋಸ್ಟಿನಲ್ಲಿ ಮುಬಲ್ಲಿಗ್ ಎಂಬ ನೆಲೆಯಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯ ಪಡೆದರು. ಗಾನ ಮತ್ತು ಬುರ್ಕಿನಾಫಾಸೋದಲ್ಲಿ ಸೇವೆ ಸಲ್ಲಿಸಿದ ನಂತರ 2007ರಲ್ಲಿ ಪುನಃ ಐವರಿಕೋಸ್ಟಿನಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದರು. ದಿವಂಗತರು ಮೂಸಿಯಾಗಿದ್ದರು. ಅವರು ವಿವರಿಸಿದ ಪಾಕಿಸ್ತಾನದ ಒಂದು ಘಟನೆ ಸಹ ಬಹಳ ಸ್ವಾರಸ್ಯಕರವಾದುದಾಗಿದೆ. ಅವರು ಒಟ್ಟುಗೂಡಿಸಿದ ಹಣದಿಂದ ಅವರು ವಿಮಾನ ಟಿಕೆಟ್ ಖರೀದಿ ಮಾಡಿದ್ದರು. ಪಾಕಿಸ್ತಾನಕ್ಕೆ ಹೋಗಿ ಐವರಿಕೋಸ್ಟ್ ಜಮಾಅತಿನ ಅಥವಾ ಪಾಕಿಸ್ತಾನದ ಜಮಾಅತಿನ ಯಾರಿಗೂ ತಿಳಿಸಿರಲಿಲ್ಲ. ಅಲ್ಲಿಗೆ ತಲುಪಿ ವಿಮಾನ ನಿಲ್ದಾನದ ಹೊರಗೆ ನಿಂತು ಚಿಂತಿತರಾಗಿದ್ದರು. ಒಬ್ಬ ವ್ಯಕ್ತಿ ಅಷ್ಟರಲ್ಲಿ ಅವರ ಬಳಿಗೆ ಹೋದರು. 'ನೀವು ಎಲ್ಲಿಂದ ಬಂದಿರುವಿರಿ, ಎಲ್ಲಿಗೆ ಹೋಗುವಿರಿ' ಎಂದು ಆ ವ್ಯಕ್ತಿ ಕೇಳಿದರು. ಇಂಗ್ಲಿಷ್ ಮತ್ತು ಉರ್ದು ಅವರಿಗೆ ಗೊತ್ತಿರಲಿಲ್ಲ. ಅರಬಿಯ ಒಂದೆರಡು ವಾಕ್ಯಗಳೊಂದಿಗೆ ಮಾತುಕತೆ ನಡೆಯಿತು. ಹೇಗಿದ್ದರೂ ಅವರನ್ನು ಅಹ್ಮದಿಯಾ ಹಾಲಿಗೆ ಕರೆದುಕೊಂಡು ಬರಲಾಯಿತು. ಅನಂತರ ಆ ವ್ಯಕ್ತಿ ಅವರೊಡನೆ ಹೇಳಿದರು: ಒಬ್ಬ ವಿದೇಶಿಯಾದ ಅತಿಥಿ ಬಂದುದಾಗಿಯೂ ನಾನು ಅವರನ್ನು ಕರೆದುಕೊಂಡು ಬರುವುದಾಗಿಯೂ ನನ್ನ ಪತ್ನಿ ರಾತ್ರಿ ಕನಸಿನಲ್ಲಿ ಕಂಡಿದ್ದಳು. ಆದ್ದರಿಂದ ನಾನಿಂದು ಏರ್‌ಪೋರ್ಟಿಗೆ ಬಂದಿದ್ದೆ. ವಿಮಾನದಲ್ಲಿ ವಿದೇಶಿಯವರಾಗಿ ನೀವು ಇಳಿದುದಾಗಿಯೂ ಚಿಂತಿತರಾಗಿ ನಿಂತಿರುವುದಾಗಿಯೂ ನಾನು ಕಂಡಾಗ, ನನ್ನ ಪತ್ನಿ ಕನಸಿನಲ್ಲಿ ಕಂಡ ಅತಿಥಿ ನೀವೇ ಅಗಿದ್ದೀರಿ ಎಂದು ನನಗೆ ಮನವರಿಕೆಯಾಯಿತು. ಹೀಗೆ ಅಲ್ಲಾಹನು ಅವರ ಏರ್ಪಾಡು ಮಾಡಿದ್ದನು. ಈ ಘಟನೆಯನ್ನು ಅವರು ಹೇಳುತ್ತಿದ್ದರು. ಅವರು ಹೇಳುತ್ತಾರೆ: ಯಾತ್ರೆಯ ಮಾರ್ಗದಲ್ಲೂ ತಲುಪಿದ ನಂತರವೂ ದುಆ ಮಾಡುತ್ತಿದ್ದೆ. ದುಆದ ದೃಷ್ಟಾಂತವಾಗಿ ಅಲ್ಲಾಹನು ನನ್ನ ಕಾರ್ಯದ ಏರ್ಪಾಡು ಮಾಡಿದನು. ರಾತ್ರಿ ಸಮಯದಲ್ಲಿ ಆ ಅಹ್ಮದಿ ವ್ಯಕ್ತಿಯ ಪತ್ನಿಗೆ ನಾನು ಬರುವುದಾಗಿ ಅಲ್ಲಾಹನು ಕನಸಿನಲ್ಲಿ ತೋರಿಸಿಕೊಟ್ಟನು. ಹೀಗೆ ಅವರು ಅಹ್ಮದಿಯಾ ಹಾಲಿಗೆ ತಲುಪಿದ ನಂತರ ರಬ್ವ ತಲುಪಿದರು. ಹೇಗಿದ್ದರೂ ಬಹಳ ಸಾತ್ವಿಕ ಮತ್ತು ದುಆ ಮಾಡುವ ವ್ಯಕ್ತಿಯಾಗಿದ್ದರು.

ಐವರಿಕೋಸ್ಟಿನ ಮಿಶನರಿ ಇಂಚಾರ್ಜ್ ಖಯ್ಯೂಮ್ ಪಾಶಾ ಸಾಹಿಬ್‌ರು ಹೇಳುತ್ತಾರೆ: ಬುರ್ಕಿನಾಫಾಸೋದಲ್ಲೂ ಐವರಿಕೋಸ್ಟಿನಲ್ಲೂ ನಮಗೆ ಒಟ್ಟಿಗೆ ಕೆಲಸ ಮಾಡುವ ಸೌಭಾಗ್ಯ ಸಿಕ್ಕಿತ್ತು. ಜಮಾಅತಿನೊಂದಿಗೆ ಮತ್ತು ಹಝ್ರತ್ ಮಸೀಹ್ ಮೌಊದ್‌ರೊಂದಿಗೆ ಅಪರಿಮಿತವಾದ ಪ್ರೀತಿಯನ್ನು ಹೊಂದಿದ್ದರು. ಬಹಳ ಅರ್ಪಣಾಭಾವ ಹೊಂದಿದವರೂ ಆರಾಧಕರೂ ಆಗಿದ್ದರು. ಬಹಳ ಉದಾರಿ ವ್ಯಕ್ತಿಯಾಗಿದ್ದರು. ಜನರನ್ನು ಬಹಳವಾಗಿ ಸಹಾಯಮಾಡುತ್ತಿದ್ದರು. ಮಕ್ಕಳನ್ನು ಸ್ವಂತ ಮನೆಯಲ್ಲಿ ಇರಿಸಿ ಅವರ ಶಿಕ್ಷಣ ಮತ್ತು ಇತರ ಖರ್ಚುವೆಚ್ಚಗಳನ್ನು ನೋಡುತ್ತಿದ್ದರು. ಧರ್ಮಪ್ರಚಾರದಲ್ಲಿ ಸದಾ ಮುಂದಿದ್ದರು. ಅತಿಥಸತ್ಕಾರ ಸಹ ಅವರ ವಿಶೇಷ ಗುಣ ಮತ್ತು ಗುರುತಾಗಿತ್ತು. ತಬ್ಲೀಗ್ ಮಾಡುವ ರೀತಿ ಸಹ ಬಹಳ ಉತ್ತಮವಾಗಿತ್ತು. ತುಂಬ ಅರಿವು ಸಹ ಇತ್ತು. ಜನರು ಅವರ ಶೈಲಿಯನ್ನು ಸಹ ಇಷ್ಟಪಡುತ್ತಿದ್ದರು. ಅವರು ತಬ್ಲೀಗಿಗೆ ಕುಳಿತುಕೊಳ್ಳುವಾಗ ಜನರು ಅವರ ಸುತ್ತ ಒಟ್ಟುಗೂಡುತ್ತಿದ್ದರು. ತಹಜ್ಜುದ್ ನಿರ್ವಹಿಸುವವ ಮತ್ತು ಸತ್ಯವಾದ ಕನಸುಗಳನ್ನು ಕಾಣುತ್ತಿದ್ದ ವ್ಯಕ್ತಿಯಾಗಿದ್ದರು. ನಿಸ್ವಾರ್ಥರಾಗಿದ್ದರು.

ಐವರಿಕೋಸ್ಟಿನ ಮುಅಲ್ಲಿಮ್ ಸಾಹಿಬ್‌ರಾದ ಸಿದ್ದೀಖ್ ಜಯಾಲೂ ಸಾಹಿಬ್ ಹೇಳುತ್ತಾರೆ: ಮೌಲಿವಿ ಇದ್ರೀಸ್ ತೇರೂ ಸಾಹಿಬ್ ಜಮಾಅತಿನ ಮತ್ತು ಖಿಲಾಫತ್ತಿನ ದೀವಾನ ಆಗಿದ್ದರು. ಅವರು ಜಮಾಅತಿಗಾಗಿ ಸದಾ ಎಲ್ಲ ರೀತಿಯ ತ್ಯಾಗಗಳಿಗೆ ತಯಾರಿರುತ್ತಿದ್ದರು. ಅವರಿಗಿಂತ ಹೆಚ್ಚಾಗಿ ಜಮಾಅತಿನೊಂದಿಗೆ ಪ್ರೀತಿಯಿರುವ ವ್ಯಕ್ತಿ ನಾನು ಐವರಿಕೋಸ್ಟಿನಲ್ಲಿ ನೋಡಿಲ್ಲ. ಅವರ ನ್ಯಾಶನಾಲಿಟಿ ಬಗ್ಗೆ ಅವರೊಡನೆ ಕೇಳಿದರೆ, ಅವರು ಹೀಗೆ ಹೇಳುತ್ತಿದ್ದರು: ನಾನು ಆಫ್ರಿಕನೂ ಅಲ್ಲ, ನಾನು ಯುರೋಪಿಯನ್ ಕೂಡ ಅಲ್ಲ, ನನ್ನ ನ್ಯಾಶನಾಲಿಟಿ ನನ್ನ ಪರಿಚಯ ಅಹ್ಮದಿಯಾ ಸಮುದಾಯದವನು ಎಂದಾಗಿದೆ. ಐವರಿಕೋಸ್ಟಿನ ಆರಂಭದ ಅಹ್ಮದಿಯರಲ್ಲಿ ಒಬ್ಬರಾಗಿದ್ದರು.

ಐವರಿಕೋಸ್ಟಿನ ಮುಬಲ್ಲಿಗ್ ಬಾಸಿತ್ ಸಾಹಿಬ್ ಬರೆಯುತ್ತಾರೆ: ಸದಾ ಖಿಲಾಫತಿನೊಂದಿಗೆ ಸೇರಿಕೊಂಡಿರಲು ಉಪದೇಶಿಸುತ್ತಿದ್ದರು. ನಾನು ಖಿಲಾಫತಿನ ಮೂಲಕವೇ ಅನುಗ್ರಹವನ್ನು ಪಡೆಯುವನು. ಜ್ಞಾನಪರವಾಗಿಯೂ ಬಹಳ ಉನ್ನತ ದರ್ಜೆಯ ವ್ಯಕ್ತಿಯಾಗಿದ್ದರು. ಅವರ ಮಾತೃಭಾಷೆಯಾದ ಜೂಲ ಅಲ್ಲದೆ, ಅವರಿಗೆ ಫ್ರಂಚ್, ಅರಬಿ, ಉರ್ದು ಚೆನ್ನಾಗಿ ಗೊತ್ತಿತ್ತು. ಸಾಹಿತ್ಯದ ಪರಿಣತರಾಗಿದ್ದರು ಮತ್ತು ಉತ್ತಮ ಡಿಬೇಟರ್ ಆಗಿದ್ದರು. ವಹಾಬಿ ಪಂಡಿತರೊಡನೆ ಸಂವಾದ ನಡೆಸುತ್ತಿದ್ದರು. ಒಬ್ಬ ಅಹ್ಮದಿ ಸಹೋದರನಾಧ ಅಬ್ದುಲ್ಲಾಹ್ ಸಾಹಿಬ್‌ರು ಸಾನ್‌ಪೈದರೂನಲ್ಲಿ ನಡೆದ ಒಂದು ಸಂವಾದದ ಘಟನೆಯನ್ನು ವಿವರಿಸುತ್ತಾರೆ: ಅಹ್ಮದಿಯರು ವಹಾಬಿಯರ ಮಸೀದಿಗೆ ಹೋದೆವು. ಪವಿತ್ರ ಖುರ್‌ಆನಿನಿಂದ ಮಾತ್ರ ಪುರಾವೆಗಳನ್ನು ನೀಡಲಾಗುವುದು ಎಂದು ನಿಶ್ಚಯಿಸಲಾಯಿತು. ಬೆಳಿಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆ ವರೆಗೆ ನಿರಂತರವಾಗಿ ಸಂವಾದ ನಡೆಯಿತು. ಕೇವಲ ನಮಾಝ಼್‌ಗೆ ಬಿಡುವು ನೀಡಲಾಗಿತ್ತು. ಈ ವಾದ–ವಿವಾದದಲ್ಲಿ ಮೌಲವಿ ಸಾಹಿಬ್‌ರು ನೀಡಿದ ಪುರಾವೆಗಳನ್ನು ಖಂಡಿಸಲು ಎದುರಾಳಿ ಮೌಲವಿಗೆ ಸಾಧ್ಯವಾಗಲಿಲ್ಲ. ತಮ್ಮ ಸೋಲನ್ನು ಎದುರಾಳಿ ಮೌಲವಿ ಒಪ್ಪಿದರು. ಅಹ್ಮದಿಯ್ಯತ್‌ಗೆ ಈ ಸಂವಾದದಲ್ಲಿ ವಿಜಯ ಪ್ರಾಪ್ತವಾಯಿತು. ಅಬ್ದುಲ್ಲಾಹ್ ಸಾಹಿಬ್ ಬರೆಯುತ್ತಾರೆ: ಇವರು ಒಂದು ಲೈಬ್ರರಿಯ ಹಾಗೆ ಆಗಿದ್ದರು. ತಬ್ಲೀಗ್‌ನ ಮೈದಾನದಲ್ಲಿ ಅವರಿಗೆ ರೆಫರನ್ಸ್‌ಗಳು ಕಂಠಪಾಠವಾಗಿತ್ತು. ಉರ್ದು, ಅರಬಿ ಮತ್ತು ಫ್ರಂಚ್ ಭಾಷೆಗಳಲ್ಲಿ ಉಲ್ಲೇಖಗಳನ್ನು ಬೇಗನೇ ಹೇಳುತ್ತಿದ್ದರು. ದುಆವನ್ನು ಸದಾ ತನ್ನ ಆಯುಧವನ್ನಾಗಿ ಮಾಡಿದ್ದರು. ಎಲ್ಲರೊಡನೆ ದುಆಗಾಗಿ ಉಪದೇಶಿಸುತ್ತಿದ್ದರು.

ಅವರಿಗೆ ನಾಲ್ವರು ಪುತ್ರಿಯರು ಮತ್ತು ಒಬ್ಬ ಪುತ್ರನು ಇದ್ದಾರೆ. ಅಲ್ಲಾಹನು ಅವರ ಮಕ್ಕಳನ್ನು ಜಮಾಅತಿನ ವ್ಯವಸ್ಥೆಯೊಂದಿಗಿನ ಸಂಬಂಧದಲ್ಲಿ ಕ್ರಿಯಾಶೀಲರನ್ನಾಗಿ ಮಾಡಲಿ. ಮೌಲವಿ ಸಾಹಿಬ್‌ರ ಅಭಿಲಾಷೆ ಪ್ರಕಾರ ಅವರನ್ನು ಜಮಾಅತಿನ ವ್ಯವಸ್ಥೆಯ ಭಾಗವನ್ನಾಗಿ ಮಾಡಲಿ. ಅವರಿಗೆ ಜಮಾಅತಿನೊಂದಿಗೆ ಅಷ್ಟು ಸಂಬಂಧವಿಲ್ಲ. ಆದರೆ ಅಲ್ಲಾಹನು ಅನುಗ್ರಹಿಸಲಿ. ಅಲ್ಲಾಹನು ಅವರೊಂದಿಗೆ ಕ್ಷಮೆ ಮತ್ತು ಕರುಣೆಯೊಂದಿಗೆ ವರ್ತಿಸಲಿ.

ಎರಡನೇ ಜನಾಝ಼ ಯುಗಾಂಡದ ಅಮೀರ್ ಮಿಶನರಿ ಇಂಚಾರ್ಜ್ ಆದ ಮುಹಮ್ಮದ್ ಅಲಿ ಕಾರೇ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಅಮೀನ ನಾಇಗಾ ಕಾರೇ ಸಾಹಿಬರದ್ದಾಗಿದೆ. ಫೆಬ್ರವರಿ 20ರಂದು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ವಿನಯವಂತೆ, ವಿದ್ಯಾಭ್ಯಾಸ ಹೊಂದಿದ್ದ ಮತ್ತು ಧೈರ್ಯಶಾಲಿ ಮಹಿಳೆಯಾಗಿದ್ದರು. ಅವರ ಪತಿಯಾದ ಸಾಹಿಬ್‌ರು ಹೇಳುತ್ತಾರೆ: ನಾನೊಬ್ಬ ವಿಜಯಿ ಮುರಬ್ಬಿಯಾಗಲು ಒಂದು ವಿಶೇಷ ಕಾರಣ ನನ್ನ ಪತ್ನಿಯಾಗಿದ್ದಳು. ಯುಗಂಡಾದವರಾಗಿದ್ದರು. ಬಹಳ ನಿಷ್ಠೆ ಮತ್ತು ಪ್ರಾಮಾಣಿಕತೆ ಹೊಂದಿದ್ದರು. ನಮ್ಮ ವಿವಾಹವಾದಾಗ, ಅವರಿಗೆ 19 ವಯಸ್ಸಿತ್ತು. ಅವರಿಗೆ ಪವಿತ್ರ ಖುರ್‌ಆನ್ ಓದಲು ಗೊತ್ತಿರಲಿಲ್ಲ. ಆದರೆ ಅದಕ್ಕಾಗಿ ಒಂದು ಆವೇಶ ಮತ್ತು ಹುಮ್ಮಸ್ಸು ಇದ್ದ ಕಾರಣ ಪವಿತ್ರ ಖುರ್‌ಆನ್ ಓದಲು ಕಲಿತರು. ಪವಿತ್ರ ಖುರ್‌ಆನ್ ಓದುವಾಗ ಚಿಂತನ ಮಂಥನ ಮಾಡಲು ಪ್ರಯತ್ನಿಸುತ್ತಿದ್ದರು. ಹಲವು ನೆಲೆಗಳಲ್ಲಿ ಜಮಾಅತಿನ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆದಿದ್ದರು. 2005ರಲ್ಲಿ ಅವರನ್ನು ಲಜ್ನ ಸದರ್ ಆಗಿ ನಿಶ್ಚಯಿಸಲಾಗಿತ್ತು. ತಬ್ಲೀಗ್ ಮಾಡುವ ಆವೇಶ ಹೊಂದಿದ್ದರು. ಒಂದೆರಡು ಬಾರಿ ಅವರನ್ನು ಅವರು ಮಾಡದ ಅಪರಾಧಕ್ಕಾಗಿ ಅಕ್ರಮವಾಗಿ ಜೈಲಿಗೆ

ಹಾಕಲಾಗಿತ್ತು. ತರಬೇತಿಯ ವಿಷಯದಲ್ಲಿ ಅವರು ಮಾದರಿಯಾಗಿದ್ದರು. ಬಹಳ ಧೈರ್ಯದಿಂದ ಅಹ್ಮದಿಯೇತರರ ಆರೋಪಗಳಿಗೆ ಉತ್ತರ ನೀಡುತ್ತಿದ್ದರು. ಅವರ ಮಗಳು ಹೇಳುತ್ತಾಳೆ: ಅವರು ಎಲ್ಲ ಸ್ಥಿತಿಯಲ್ಲೂ ಆರೋಗ್ಯದ ಅಥವಾ ಅನಾರೋಗ್ಯದ ಸ್ಥಿತಿಯಲ್ಲೂ ಸದಾ ನಮಾಝ್ ಅನುಷ್ಠಾನವನ್ನು ಸರಿಯಾಗಿ ಪಾಲಿಸುತ್ತಿದ್ದರು. ಪ್ರತಿ ವರ್ಷ ರಮಝಾನ್‌ನಲ್ಲಿ ಇತಿಕಾಫ್‌ಗಾಗಿ ಕುಳಿತುಕೊಳ್ಳುತ್ತಿದ್ದರು. ವೈಯಕ್ತಿಕ ಆಕ್ಷೇಪವನ್ನು ಸಹಿಸುತ್ತಿದ್ದರು ಆದರೆ ಧರ್ಮದ ವಿಷಯದಲ್ಲಿನ ಆರೋಪಗಳನ್ನು ಸಹಿಸುತ್ತಿರಲಿಲ್ಲ. ಅವರಿಗೆ ರಾಜಕೀಯ ಮಟ್ಟದಲ್ಲೂ ಹಲವು ಲೆವಲ್‌ನಲ್ಲಿ ಕೆಲಸ ಮಾಡಲು ಸೌಭಾಗ್ಯ ಸಿಕ್ಕಿತ್ತು. ಅವರು ವಸಿಯ್ಯತ್ ಮಾಡಿದ್ದರು. ದಿವಂಗತರು ತನ್ನ ಪತಿಯನ್ನಲ್ಲದೆ 6 ಮಕ್ಕಳನ್ನು ಅಗಲಿರುವರು. ಅವರಲ್ಲಿ ಇಬ್ಬರು ಪುತ್ರು ಮುಬಲ್ಲಿಗ್ ಆಗಿರುವರು.

ಮುಂದಿನ ಜನಾಝ಼ ಸನ್ಮಾನ್ಯ ಸಿರಿಯದ ನೂಹಿ ಖಝ್ಝಕ್ ಸಾಹಿಬ್‌ರದ್ದಾಗಿದೆ. ಡಿಸೆಂಬರ್ 10ರಂದು ನಿಧನರಾದರು. 48 ವರ್ಷ ಪ್ರಾಯವಿತ್ತು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರ ಕುಟುಂಬದಲ್ಲಿ ಅಹ್ಮದಿಯ್ಯತ್ 1928ರಲ್ಲಿ ಬಂದಿತ್ತು. ಅದು ಹಝ್ರತ್ ಮೌಲಾನ ಜಲಾಲುದ್ದೀನ್ ಶಮ್ಸ್ ಸಾಹಿಬ್ ಡಮಸ್ಕಸ್‌ನಿಂದ ಹೀಫಗೆ ಹೋಗಿದ್ದ ಸಮಯವಾಗಿತ್ತು. ಹೀಫದ ಮೊದಲ ಅಹ್ಮದಿಯಾದ ಮುಕರ್ರಮ್ ರಾಶಿದ್ ಬಖೈಸ್ ಬುಸ್ತಿ ಸಾಹಿಬ್‌ರ ತಬ್ಲೀಗ್‌ನಿಂದ ದಿವಂಗತರ ಮುತ್ತಜ್ಜರಾದ ಅಲಿ ಸಾಲಿಹ್ ಖಝ್ಝ಼ಕ ಮತ್ತು ಅವರ ಸಹೋದರರಾದ ಮುಹಮ್ಮದ್ ಖಝ್ಝಕ್ ಸಾಹಿಬ್ ಫ್ಯಾಮಿಲಿ ಬೈಅತ್ ಮಾಡಿದರು. ಅನಂತರ ಇಸ್ರಾಈಲಿನ ಸ್ಥಾಪನೆಯಾದಾಗ ಅವರ ಕುಟುಂಬ ಡಮಸ್ಕಸ್‌ಗೆ ಹೋಯಿತು. ದಿವಂಗತರು ಬಹಳ ನಿಷ್ಠಾವಂತ ಅಹ್ಮದಿಯಾಗಿದ್ದರು. ಉಪವಾಸ ಮತ್ತು ನಮಾಝ್ ಸರಿಯಾಗಿ ಪಾಲನೆ ಮಾಡುವವರೂ, ಚಂದಾ ಕರಾರುವಕ್ಕಾಗಿ ಪಾವತಿ ಮಾಡುವವರೂ ಖ಼ಿಲಾಫತ್‌ನೊಂದಿಗೆ ಪ್ರೀತಿಯಿರುವವರೂ ಜಮಾಅತಿನ ಸೇವೆಯಲ್ಲಿ ಮುಂದಿರುವವರೂ ಆಗಿದ್ದರು. ಬಡತನದಲ್ಲೂ ಇತರರ ಆರ್ಥಿಕ ಸಹಾಯಮಾಡುವವರೂ ಸಹಾನುಭೂತಿ ಹೊಂದಿರುವವರೂ ಆಗಿದ್ದರು. ದಿವಂಗತರು ಇಬ್ಬರು ಪತ್ನಿಯರನ್ನು ಮತ್ತು ಕಿರಿಯ ವಯಸ್ಸಿನ ಇಬ್ಬರು ಪುತ್ರಿಯರನ್ನು ಅಗಲಿರುವರು. ಅವರಿಬ್ಬರೂ ವಖ್‌ಫೇ ನೌನಲ್ಲಿ ಶಾಮಿಳಾಗಿರುವರು.

ಜಮಾಅತಿನ ಸದರ್ ಆದ ವಸೀಂ ಮುಹಮ್ಮದ್ ಸಾಹಿಬ್ ಹೇಳುತ್ತಾರೆ: ಅವರೊಡನೆ ಏನಾದರೂ ಮಾಡಲು ಹೇಳಿದರೆ, ವಿಶೇಷವಾಗಿ ರೋಗಿಗಳನ್ನು ಮತ್ತು ಗಾಯಾಳುಗಳನ್ನು ಆಸ್ಪತ್ರೆಗೆ ಕೊಂಡುಹೋಗಲಿಕ್ಕೆ ಅವರೊಡನೆ ಹೇಳಲಾಗುವಾಗ, ಸಿರಿಯದ ಕಷ್ಟದಾಯಕವಾದ ಪರಿಸ್ಥಿತಿಯಲ್ಲೂ ತಕ್ಷಣವೇ ಹೇಳಿದ ಕೆಲಸವನ್ನು ಮಾಡುತ್ತಿದ್ದರು. ಅದೇ ರೀತಿಯಲ್ಲಿ ಮಜ್ಲಿಸೇ ಆಮಿಲದ ಮೆಂಬರ್‌ಗಳನ್ನು ಪರ್ಯಟನೆಗೆ ಕೊಂಡುಹೋಗುತ್ತಿದ್ದರು. ಅವರಿಗೆ ಒಂದು ಕಾರು ಕೊಡಲಾಗಿತ್ತು. ಅದರ ಮೂಲಕ ತಮ್ಮ ಕೆಲಸವನ್ನು ಮಾಡುತ್ತಿದ್ದರು. ಯಾವಾಗ ಕರೆದರೂ ಬೇಗನೇ ಬಹಳ ಉತ್ಸಾಹದಿಂದ ಸೇವೆಗೆ ಹಾಜರಾಗುತ್ತಿದ್ದರು. ಮನಸ್ಸಾರೆ ಹುಮ್ಮಸ್ಸಿನೊಂದಿಗೆ ಈ ಎಲ್ಲ ಕೆಲಸಗಳನ್ನು ಮಾಡುತ್ತಿದ್ದರು. ಚಂದಗಳನ್ನು ಸರಿಯಾಗಿ ಪಾವತಿ ಮಾಡುತ್ತಿದ್ದರು. ಕೊನೆಯ ವರ್ಷಗಳಲ್ಲಿ ಚಂದಾ ತುಂಬ ವರ್ಧಿಸಿ ಕೊಡುತ್ತಿದ್ದರು. ಅಹ್ಮದಿಯರನ್ನು ಆರ್ಥಿಕವಾಗಿ ಸಹಾಯ ಮಾಡುತ್ತಿದ್ದರು. ದಿವಂಗತರು ತಮ್ಮ ಸರಳತೆ, ಮಿತಭಾಷಿಯ ಗುಣ, ನಿಷ್ಠೆ, ಸೇವೆ, ಮತ್ತು ಸದುದ್ದೇಶದ ಕಾರಣ ಎಲ್ಲರ ಮೇಲೆ ಉತ್ತಮ ಪ್ರಭಾವವನ್ನು ಬಿಟ್ಟುಹೋಗಿದ್ದರು.

ದಿವಂಗತರ ಪತ್ನಿಯಾದ ಖ಼ದೀಜ ಅಲಿ ಸಾಹಿಬ ಹೇಳುತ್ತಾರೆ: ನನ್ನ ಪತಿ ಅಲ್ಲಾಹನ ಅನುಗ್ರಹದಿಂದ ಬಹಳ ನಿಷ್ಠಾವಂತ ಅಹ್ಮದಿಯಾಗಿದ್ದರು. ಜಮಾಅತಿನೊಂದಿಗೆ ಬಹಳ ಪ್ರೀತಿಯಿತ್ತು. ಜನರರಿಗೆ ಸಹಾಯ ಮಾಡುವುದು ಅವರಿಗೆ ತುಂಬ ಇಷ್ಟವಾಗಿತ್ತು. ಮನೆಗೆಲಸಗಳಲ್ಲಿ ನನಗೆ ನೆರವಾಗುತ್ತಿದ್ದರು. ಮಕ್ಕಳೊಂದಿಗೆ ತುಂಬ ಪ್ರೀತಿ ಹೊಂದಿದ್ದರು. ಅವರ ಉತ್ತಮ ತರಬೇತಿಯ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಅವರೊಂದಿಗೆ ಕುಳಿತು ದೀರ್ಘ ಸಮಯ ಜಮಾಅತಿನ ಬಗ್ಗೆ ಮಾತುಕತೆ ನಡೆಸುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ತಮ್ಮ ಜೀವಿತದ ಕೊನೆಯ ವರ್ಷ ಸಹ ಜಮಾಅತಿನ ಸೇವೆಯಲ್ಲಿ ಕಳೆದರು. ಅದರ ಕಾರಣದಿಂದ ಬಹಳ ಸಂತೋಷಗೊಂಡಿದ್ದರು.

ಅವರ ತಾಯಿಯ ಸಹೋದರಿ ಪುತ್ರನಾದ ಅಕ್ರಂ ಸಲ್ಮಾನ್ ಹೇಳುತ್ತಾರೆ: ಅವರ ಬೈಅತಿಗೆ ಮುಂಚೆಯೂ ಅವರ ಉತ್ತಮ ಸ್ವಭಾವಗುಣಗಳಿಗೆ ನಾವು ಸಾಕ್ಷಿಯಾಗಿದ್ದೇವೆ. ಸ್ವತಃ ಅವರ ಆರ್ಥಿಕ ಸ್ಥಿತಿ ತುಂಬ ಉತ್ತಮವಾಗಿರಲಿಲ್ಲ. ಆದರೂ ಬಡವರಾದ ಸಂಬಂಧಿಕರ ಸಹಾಯ ಮಾಡುತ್ತಿದ್ದರು. ನನ್ನನ್ನು ಪ್ರಭಾವಿತಗೊಳಿಸಿದ ಒಂದು ಸಂಗತಿಯೇನೆಂದರೆ, ಒಂದು ಬಾರಿ ಅವರಿಗೆ ಬಹಳ ಉತ್ತಮ ನೌಕರಿ ಸಿಕ್ಕಿತು. ಅದರಿಂದ ಅವರ ಎಲ್ಲ ಸಾಲಗಳು ತೀರಿದುವು. ಅನಂತರ ಅವರು ಹಣವನ್ನು ಒಟ್ಟುಗೂಡಿಸುವ ಬದಲಿಗೆ ಅವರು ನನ್ನ ತಾಯಿಯ ಸಹೋದರರಿಗೆ ತುಂಬ ಹಣವನ್ನು ಕೊಟ್ಟರು. ಅವರು ಹೇಳುತ್ತಿದ್ದರು: ನನಗೆ ಉತ್ತಮ ಆರೋಗ್ಯವಿರುವಾಗ, ನನಗೆ ಸಾಲಗಳೇನೂ ಇಲ್ಲದಿರುವಾಗ, ನಾನು ಅಮೀರ್ ಆಗಿರುವೆನು. ಹೆಚ್ಚಿರುವ ಸಂಪತ್ತನ್ನು ನಿರ್ಗತಿಕರಿಗೆ ನೀಡಲು ಬಯಸುತ್ತೇನೆ. ಅವರ ಕಝಿನ್ ಹೇಳುತ್ತಾರೆ: ಈ ಸಂಗತಿ ನನಗೆ ಅಚ್ಚರಿ ಉಂಟುಮಾಡಿತ್ತು. ಏಕೆಂದರೆ ಇಷ್ಟು ತ್ಯಾಗ ಮಾಡುವ ಮತ್ತು ಇದ್ದುದ್ದರಲ್ಲಿ ತೃಪ್ತಿ ಹೊಂದುವ ಗುಣವನ್ನು ನಾನು ಯಾರಲ್ಲೂ ಕಂಡಿರಲಿಲ್ಲ. ಅವರು ಹೇಳುತ್ತಾರೆ: ನಾವಿಬ್ಬರು ಸಹೋದರರು ಬೈಅತ್ ಮಾಡಿದ ನಂತರ ನಮ್ಮ ಶಿಕ್ಷಣ, ತರಬೇತಿ ಮತ್ತು ನಮ್ಮನ್ನು ಖ಼ಿಲಾಫತ್‌ನೊಂದಿಗೆ ಜೋಡಿಸಲು ಅವರು ಬಹಳ ಪ್ರಯತ್ನ ಮಾಡುತ್ತಿದ್ದರು. ಖ಼ಿಲಾಫತಿನ ಅನುಗ್ರಹದಿಂದ ಪ್ರಯೋಜನ ಪಡೆದ ಅನೇಕ ಪ್ರಭಾವಶಾಲಿ ಘಟನೆಗಳನ್ನು ಹೇಳುತ್ತಿದ್ದರು. ಇದರಿಂದ ನಮ್ಮ ಹೃದಯದಲ್ಲಿ ಖ಼ಿಲಾಫತ್‌ನೊಂದಿಗೆ ಪ್ರೀತಿ ಉಂಟಾಯಿತು.

ಜಾಮಿಅ ಕೆನಡದ ಉಸ್ತಾದಾದ ಅವರ ಸಹೋದರ ಮುತಝ್ ಖಝ್ಝ಼ಖ್ ಸಾಹಿಬ್ ಬರೆಯುತ್ತಾರೆ: ನನ್ನ ದಿವಂಗತ ಸಹೋದರ ಬಹಳ ನಿಷ್ಠಾವಂತ ಮತ್ತು ಖ಼ಿಲಾಫತ್‌ನೊಂದಿಗೆ ಪ್ರೀತಿ ಇರುವವರಾಗಿದ್ದರು. ನಮ್ಮ ತಾತಂದಿರು ಅಹ್ಮದಿಯಾಗಿದ್ದರೂ ನಮಗೆ ಅಹ್ಮದಿಯ್ಯತ್ ಬಗ್ಗೆ ಏನೂ ಗೊತ್ತಿರಲಿಲ್ಲ. ನನ್ನ ಸಹೋದರ ತಾತರಾದ ಖಿಝರ್ ಖಝ್ಝ಼ಖ್‌ರ ಜನಾಝ಼ ನಮಾಝ್‌ನಲ್ಲಿ ಭಾಗವಹಿಸಲು ಹಲಬ್ ಪಟ್ಟಣಕ್ಕೆ ಹೋಗಿದ್ದರು. ಅಲ್ಲಿ ಅವರು ಅಹ್ಮದಿಯರನ್ನು ಭೇಟಿಯಾದರು. ಜಮಾಅತಿನ ಬಗ್ಗೆ ಮಾತುಕತೆ ನಡೆಯಿತು. ಮರಳಿ ಬಂದ ನಂತರ ಅವರು ಸಜ್‌ದದಲ್ಲಿ ಬಹಳವಾಗಿ ಅಳುತ್ತಿರುವುದನ್ನು ನಾನು ಕಂಡೆನು. ಅಚಾನಕ್ಕಾದ ಈ ಬದಲಾವಣೆಯಿಂದ ನಾನು ಅಚ್ಚರಿಗೊಂಡೆನು. ಇದರ ಕಾರಣವನ್ನು ಕೇಳಿದಾಗ ಅವರು ನನಗೆ ಸಹ ಅವರು ಅಹ್ಮದಿಯ ಜಮಾಅತಿನ ಬಗ್ಗೆ ಪರಿಚಯ ಮಾಡಿಕೊಟ್ಟರು. ಇದಕ್ಕೆ ಮುಂಚೆ ನಾವು ಹೆಸರಿಗೆ ಅಹ್ಮದಿಯಾಗಿದ್ದೆವು. ಅನಂತರ ಜಮಾಅತಿನ ಅಧ್ಯಾಪನೆಗಳು ಏನೆಂಬುದರ ಬಗ್ಗೆ ಅನ್ವೇಷಣೆ ನಡೆಸಿದೆವು. ಒಂದು ಕನಸು ನೋಡಿದ ನಂತರ ನಾನು ಪುನಃ ಬೈಅತ್ ಮಾಡಿದೆ. ನನ್ನ ಬೈಅತಿಗೆ ಕಾರಣವಾದದ್ದು ನನ್ನ ಸಹೋದರರ ಉತ್ತಮ ಬದಲಾವಣೆಯಾಗಿತ್ತು. ಪುನಃ ಬೈಅತ್ ಮಾಡಿದುದರ ತಾತ್ಪರ್ಯವೇನೆಂದರೆ, ಕುಟುಂಬ ಪರವಾಗಿ ಅಹ್ಮದಿಯಾಗಿದ್ದರು. ಸರಿಯಾಗಿ ಅಹ್ಮದಿಯಾಗಿರಲಿಲ್ಲ. ಅನಂತರ ಅಹ್ಮದಿಯ್ಯತ್ ಬಗ್ಗೆ ಸರಿಯಾಗಿ ತಿಳಿದುಕೊಂಡು ಪುನಃ ಬೈಅತ್ ಮಾಡಿದ್ದರು. ದಿವಂಗತರಿಗೆ ತಬ್ಲೀಗ್ ಮಾಡುವ ಬಹಳ ಉತ್ಸಾಹ ಹೊಂದಿದ್ದರು. ಖ಼ಲೀಫತುಲ್ ಮಸೀಹ್‌ರಿಗೆ ತುಂಬ ದುಆ ಮಾಡುತ್ತಿದ್ದರು. ವಸಿಯ್ಯತ್ ವ್ಯವಸ್ಥೆಯಲ್ಲಿ ಭಾಗಿಯಾಗಿದ್ದರು. ನಿಧನದ ಮುಂಚೆ ಅವರಿಗೆ ಅವರ ಮರಣದ ಅರಿವಾಗಿತ್ತು. ಅದರ ಬಗ್ಗೆ ಅವರು ಮರಣಕ್ಕೆ ಸ್ವಲ್ಪ ದಿನಗಳಿಗೆ ಮುಂಚಿತವಾಗಿ ತಾಯಿ ಮತ್ತು ಪತ್ನಿಯೊಂದಿಗೆ ಹೇಳಿದ್ದರು.

ಮುಂದಿನ ಜನಾಝ಼ ರಬ್ವದ ಸನ್ಮಾನ್ಯ ಫರ್ಹತ್ ನಸೀಮ ಸಾಹಿಬ್‌ರದ್ದಾಗಿದೆ. ಅವರು ಸನ್ಮಾನ್ಯ ಮುಹಮ್ಮದ್ ಇಬ್ರಾಹೀಂ ಹನೀಫ್ ಸಾಹಿಬ್‌ರ ಪತ್ನಿಯಾಗಿದ್ದರು. ಡಿಸೆಂಬರ್ 26ರಂದು 86ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರ ತಂದೆಯಾದ ಹಝ್ರತ್ ಮಿಯಾ ಇಲ್ಮ್ ದೀನ್ ಸಾಹಿಬ್ ಮತ್ತು ತಾತರಾದ ಹಝ್ರತ್ ಮಿಯಾ ಖುತ್‌ಬುದ್ದೀನ್ ಸಾಹಿಬ್ ಲೋದಿಯವರು ಗುರುದಾಸಪುರ ಜಿಲ್ಲೆಯವರಾಗಿದ್ದರು. ಅವರು ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬರಲ್ಲಿ ಸೇರಿದ್ದರು. ದಿವಂಗತರು ಅನೇಕ ಉತ್ತಮ ಸ್ವಭಾವಗುಣಗಳನ್ನು ಹೊಂದಿದ್ದರು. ನಮಾಝ್ ಮತ್ತು ಉಪವಾಸ ಸರಿಯಾಗಿ ನಿರ್ವಹಿಸುವವರೂ, ತಹಜ್ಜುದ್ ನಮಾಝ್ ಅನುಷ್ಠಿಸುವವರೂ, ತಾಳ್ಮೆ ಮತ್ತು ಕೃತಜ್ಞತೆ ಹೊಂದಿರುವವರೂ ದುಆ ಮಾಡುವವರೂ ಸರಳ ಸ್ವಭಾವದವರೂ, ನಿರ್ಗತಿಕರ ಸಹಾಯ ಮಾಡುವವರೂ ಖ಼ಿಲಾಫತ್‌ನೊಂದಿಗೆ ಅಪರಿಮಿತವಾದ ಪ್ರೀತಿ ಮತ್ತು ವಿಶ್ವಾಸ ಹೊಂದಿರುವವರೂ ಆಗಿದ್ದ ನಿಷ್ಠಾವಂತ ಮಹಿಳೆಯಾಗಿದ್ದರು. ಆರ್ಥಿಕ ಯೋಜನೆಗಳಲ್ಲಿ ಹಲವಾರು ಬಾರಿ ಹಲವು ಯೋಜನೆಗಳಲ್ಲಿ ತಮ್ಮ ಆಭರಣಗಳನ್ನು ತ್ಯಾಗ ಮಾಡುವ ಸೌಭಾಗ್ಯವನ್ನು ಪಡೆದಿದ್ದರು. ದಿವಂಗತರು ಮೂಸಿಯಾಗಿದ್ದರು. ದಿವಂಗತರು ಮೂವರು ಪುತ್ರರನ್ನು ಮತ್ತು ಮೂವರು ಪುತ್ರಿಯರನ್ನು ಹಾಗೂ ಹಲವಾರೂ ಮೊಮ್ಮಕ್ಕಳನ್ನು ಅಗಲಿರುವರು. ಅವರ ಇಬ್ಬರು ಮೊಮ್ಮಕ್ಕಳು ಮುರಬ್ಬಿಯಾಗಿರುವರು. ಒಬ್ಬ ಮಗನು ಸಹ ಮುಬಲ್ಲಿಗ್ ಆಗಿರುವರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದೊಂದಿಗೆ ವರ್ತಿಸಲಿ. ಎಲ್ಲ ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಮತ್ತು ಅವರ ಪದವಿಗಳನ್ನು ಉನ್ನತಗೊಳಿಸಲಿ.

*******************

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ವಾಕ್‌ಚಾತುರ್ಯವು ಜನಮನ್ನಣೆ ಪಡೆದಿರುತ್ತದೆ. ಅದು ಸಮುದಯದ ಅಸಲು ಭಾಷೆಯಾಗಿರಲಿ, ಅಥವಾ ವಿದ್ವಾಂಸರಿಂದ ಪಡೆದ ಭಾಷೆಯಾಗಿರಲಿ. ಆದರೆ ನೀನಂತೂ ಏನೂ ತಿಳಿದಿಲ್ಲ. ಅಜ್ಞಾನಿಯಾಗಿದ್ದಿ. ನೀನು ಅವಸರವಾಗಿಯು ಹಾಗೂ ಸತ್ಯದ ಶತ್ರುವಾಗಿರುವೆ. ಆದುದರಿಂದಲೇ ನಿನ್ನಲ್ಲಿ ಕಪಟ ಮತ್ತು ಅಜ್ಞಾನ ಬಿಟ್ಟರೆ ಏನೂ ಇಲ್ಲ. ಹೊಂಡ, ತಗ್ಗುಗಳ ಹೊರತು ಬೇರೆ ಕಡೆ ಹೆಜ್ಜೆ ಇಡುವುದಿಲ್ಲ. ಅರಬಿ ಭಾಷೆ ಏನೆಂಬುದು ನಿನಗೆ ಗೊತ್ತಿಲ್ಲ. ಸಾಹಿತ್ಯವೆಂಬುದು ದೂರದ ಮಾತಾಯಿತು. ಕೇವಲ ನಿರ್ಲಜ್ಜತೆ ನಿನ್ನಲ್ಲಿದೆ. ಯಾವ ಸಾಮರ್ಥ್ಯವು ನಿನ್ನಲ್ಲಿಲ್ಲ. ಸಜ್ಜನರನ್ನು ಬೈಯಲು ಯಾರೋ ನಿನಗೆ ಕಲಿಸಿಕೊಟ್ಟಂತಿದೆ. (ಅದೇ ಪುಟ 149).

**ಇಮಾದುದ್ದೀನ್ ಒಬ್ಬ ದಡ್ಡ ಮತ್ತು ಅಲ್ಪಜ್ಞಾನಿ ಮನುಷ್ಯನಾಗಿದ್ದು, ಅವನಿಗೆ ಅರಬಿ ಭಾಷೆಯಿಂದ ಏನೂ ಸಂಬಂಧವಿಲ್ಲ.**

ಓ ಮೂಢನೇ ಉಪದ್ರಕಾರಿ ಸ್ವಭಾವವು ಬಿಟ್ಟುಬಿಡು. ನಾಚಿಕೆಪಡು ಮತ್ತು ಕನ್ನಡಿಯಲ್ಲಿ ನಿನ್ನ ಮುಖ ನೋಡಿ ಹೇಳು. ಎಂದಾದರೂ ನಿನ್ನ ವಯಸ್ಸಿನಲ್ಲಿ ಸಾಹಿತ್ಯ ಓದಿದೆಯೇ ಅಥವಾ ಸಾಹಿತ್ಯದ ಸುಂದರತೆ ಕಂಡಿದೆಯೇ ಎಂದಾದರೂ ಅರಬಿಯ ಎರಡು ಪದಗಳನ್ನು ಜೋಡಿಸಿದೆಯೇ ಅಥವಾ ಒಂದೆರೆಡು ಸಾಲು ಬರೆದಿದೆಯೇ, ಹೀಗೆ ಮಾಡಿದ್ದಲ್ಲಿ ಪುರಾವೆ ಒದಗಿಸು. ನಿನಗೆ ಗೊತ್ತಿದೆ. ನಾನು ಬರಾಹೀನ್ ಅಹ್ಮದಿಯಾ ಗ್ರಂಥದಲ್ಲೂ ನಿನ್ನನ್ನು ಸಂಬೋದಿಸಿದ್ದೆ. ಆಗ ನೀನು ಪವಿತ್ರ ಖುರ್‌ಆನ್‌ನ ಮೇಲೆ ಮತ್ತು ಇಸ್ಲಾಂ ಧರ್ಮದ ಬಗ್ಗೆ ಆರೋಪಗಳನ್ನು ಹೊರಿಸಿದ್ದೆ. ನಾನು ನಿನ್ನನ್ನು ಉದ್ದೇಶಿಸಿದ್ದು ಜನರಿಗೆ ನಿನ್ನ ದ್ವೇಷ ಮತ್ತು ಅಜ್ಞಾನತೆ ತೋರಿಸುವುದಕ್ಕಾಗಿತ್ತು. ನೀನೇನಾದರೂ ಅರಬಿ ಬಲ್ಲವನಾದರೆ ನಮಗೆ ನಿನ್ನ ಪಾಂಡಿತ್ಯ ತೋರಿಸು. ನಾವು ನಿನಗೆ ಅರಬಿಯ ಭಾಷೆಯಲ್ಲಿ ಒಂದು ಕಥೆಯನ್ನು ಹೇಳುವೆ. ನೀನು ಅದನ್ನು ಅರಬಿ ಭಾಷೆಯಲ್ಲಿ ಬರೆದು ತೋರಿಸು. ಆಗ ನಿನ್ನ ಪಾಂಡಿತ್ಯವನ್ನು ಒಪ್ಪಿಕೊಳ್ಳುವೆ. ನಿನ್ನನ್ನು ಆದರಿಸುವೆ. ನಿನಗೆ ವಿದ್ವಾಂಸರಲಿ ಪರಿಗಣಿಸುವೆ. ಆದರೆ ನೀನು ಪ್ರಾಣಿಯಂತೆ ಮೌನನಾದೆ. ಬಹುಮಾನ ಪಡೆಯಲು ಸಹ ಸುಳಿಯಲಿಲ್ಲ. ಉತ್ತರ ಕೊಡುವುದರಿಂದ ಮೌನವಹಿಸಿದೆ. ಒಳ್ಳೆಯದಾಗಲಿ, ಕೆಟ್ಟದಾಗಲೀ ಏನೂ ಹೇಳಲಿಲ್ಲ. ಏಕೆಂದರೆ ಅದರಲ್ಲಿ ನಿನ್ನ ಅಪಮಾನವಿತ್ತು. ಆದುದರಿಂದ ಸ್ಪಷ್ಟವಾಗಿದೆ. ನೀನೊಬ್ಬ ದಡ್ಡ, ಅಲ್ಪಜ್ಞನಿ ಮನುಷ್ಯನಾಗಿದ್ದಿ. ನಿನಗೆ ಅರಬಿ ಭಾಷೆಯೊದಿಗೆ ಏನೂ ಸಂಬಂಧವಿಲ್ಲ. ನೀನು ಬಹುಮಾನ ಪಡೆಯಲು ಸಹ ಆಸಕ್ತಿ ವಹಿಸಲಿಲ್ಲ. ಏಕೆಂದರೆ ನೀನೊಬ್ಬ ಅಜ್ಞಾನಿಯಾಗಿದ್ದಿಯೇ ಹೊರತು ಜ್ಞಾನಿಯಾಗಿರಲಿಲ್ಲ. ಅಂದಹಾಗೆ ನಿಶ್ಚಯವಾಗಿಯೂ ನಾನು ಅರಿತಿದ್ದೇನೆ. ನಿನಗೆ ಅರಬಿ ಭಾಷೆ ತಿಳಿದೇ ಇಲ್ಲ. ಈ ಮಾರ್ಗದಲ್ಲಿ ನಡೆಯುವುದು ನಿನ್ನ ಸಾಮರ್ಥ್ಯವಲ್ಲ.

**ಯಾರಾದರೂ ಪವಿತ್ರ ಖುರ್‌ಆನ್‌ನ ಶಿಕ್ಷಣದಿಂದ ಒಂದು ಅಣುವಿನ ಸಾವಿರ ಭಾಗದಷ್ಟಾದರೂ ನ್ಯೂನತೆ ಎತ್ತಿ ತೋರಿಸಿದರೆ ನಾವು ಮರಣ ದಂಡನೆ ಸ್ವೀಕರಿಸಲು ಸಿದ್ದರಿದ್ದೇವೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಎಲ್ಲ ಧರ್ಮಗಳ ಮೇಲೆ ಇಸ್ಲಾಮ್ ಮತ್ತು ಪವಿತ್ರ ಖುರ್‌ಆನ್ ಸಾಕ್ಷತೆಯುನ್ನು ಸಾದರಪಡಿಸಲಿಕ್ಕೋಸ್ಕರ ಬರಾಹಿನೇ ಅಹ್ಮದಿಯಾದಂತಹ ಮೇರು ಕೃತಿಯನ್ನು ರಚಿಸಿದರು. ಅದರ ಸಾಕ್ಷ್ಯಾಧಾರಗಳನ್ನು ಯಾರಾದರೂ ರದ್ದುಪಡಿಸಿದರೆ ಅವರಿಗೆ ಹತ್ತು ಸಾವಿರ ರೂಪಾಯಿಗಳ ಬಹುಮಾನವನ್ನು ಘೋಷಿಸಿದರು. ಅದರ ಬಗ್ಗೆ ಒಂದು ಸಂದರ್ಭದಲ್ಲಿ ಅವರು ಹೇಳುತ್ತಾರೆ.

ಸಾಕ್ಷ್ಯವಿಲ್ಲದೆ ಯಾವುದೇ ಗ್ರಂಥವನ್ನು ಹೊಗಳುವುದಾಗಲೀ, ತೆಗಳುವುದಾಗಲೀ ಸರಿಯಲ್ಲವೆಂಬುದನ್ನು ಕ್ರೈಸ್ತರು ನಂಬುವುದಿಲ್ಲ. ಇದು ಖಂಡನೀಯವಾಗಿದೆ. ಅನರ್ಥ ಮಾತುಗಳನ್ನು ಹೇಳುವುದು ಯಾರಿಗೆ ಬರುವುದಿಲ್ಲ? ಆದರೆ ಯಾವ ಸ್ಥಿತಿಯಲ್ಲಿ ನಾವು ಈ ಗ್ರಂಥ, ಇಂಜೀಲಿನ ಶಿಕ್ಷಣ ಸತ್ಯ ಬಾಹಿರವಾದುದಾಗಿದೆ ಮತ್ತು ಖುರ್‌ಆನ್‌ನ ಶಿಕ್ಷಣವು ಪ್ರಕಾಶಮಾನವಾಗಿವೆ ಎಂಬುದನ್ನು ನೂರಾರು ಸಾಕ್ಷ್ಯಾಧಾರಗಳಿಂದ ಸಾಬೀತುಪಡಿಸಿದ್ದೇವೆ. ಅದರ ಮೇಲೆ ಕೇವಲ ಹತ್ತು ಸಾವಿರ ರೂಪಾಯಿಗಳ ಜಾಹೀರಾತು ಮಾತ್ರ ಹೊರಡಿಸಲಿಲ್ಲ. ಬದಲು ನಮ್ಮ ಪ್ರಭು ಯಾರು ನಮ್ಮ ಹೃದಯಗಳಲ್ಲಿರುವ ಗುಪ್ತ ರಹಸ್ಯಗಳನ್ನು ಬಲ್ಲವನಾಗಿದ್ದಾನೋ ಅವನನ್ನು ಸಾಕ್ಷ್ಯವಹಿಸಿ ಹೇಳುತ್ತೇವೆ. ಯಾರಾದರೂ ಒಂದು ಅಣುವಿನ ಸಾವಿರ ಭಾಗದಷ್ಟಾದರೂ ಪವಿತ್ರ ಖುರ್‌ಆನ್‌ನ ಶಿಕ್ಷಣದಿಂದ ನ್ಯೂನತೆಯನ್ನು ಎತ್ತಿ ತೋರಿಸಿದರೆ ಅಥವಾ ತನ್ನ ಗ್ರಂಥದಿಂದ ಖುರ್‌ಆನ್‌ನ ಶಿಕ್ಷಣಕ್ಕಿಂತ ಯಾವುದಾದರೂ ಉತ್ತಮ ಗುಣ ತೆಗೆದು ತೋರಿಸಿದರೆ ನಾವು ಮರಣದಂಡನೆ ಸ್ವೀಕರಿಸಲು ಸಿದ್ಧರಿದ್ದೇವೆ. ಈಗ ನ್ಯಾಯಪ್ರಿಯರೇ!! ಇತ್ತ ಗಮನಹರಿಸಿ ಮತ್ತು ದೇವನಿಗಾಗಿ ನಿಮ್ಮ ಪರಿಶುದ್ಧ ಹೃದಯದಿಂದ ಯೋಚಿಸಿ, ನಮ್ಮ ವಿರೋಧಿಗಳಲ್ಲಿ ಯಾವ ಬಗೆಯ ಪ್ರಮಾಣಿಕತೆ ಮತ್ತು ದೇವಭಕ್ತಿ ಇದೆ ಎಂದು. ನಿರುತ್ತರಾದರೂ ಅಸಂಬದ್ಧ ಮಾತುಗಳನ್ನು ಬಿಡರು. (ಬರಾಹೀನೆ ಅಹ್ಮದಿಯಾ, ರೂಹಾನಿ ಖಝಾಈನ್, ಸಂಪುಟ–1, ಪುಟ–298, ಅಡಿಟಿಪ್ಪಣಿ2)

ಮುಂದಿನ ಸಂಚಿಕೆಯಲ್ಲಿ ಇನ್‌ಶಾಅಲ್ಲಾಹ್ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ವೈಭವಪೂರ್ಣ ಬಹುಮಾನದ ಪಂಥಾಹ್ವಾನವನ್ನು ಪ್ರಸ್ತುತಪಡಿಸುವೆವು. ಅದು ಇಮಾದುದ್ದೀನ್ ನೂರುಲ್ ಹಖ್ ಗ್ರಂಥದ ಪ್ರತಿರೂಪ ತರುವುದಾಗಿ ಘೋಷಿಸಿದರು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ರೀತಿಯಲ್ಲಿ ಇರುವುದಿಲ್ಲ. ಬದಲು ಅದರ ಪರಿಣಾಮ ಸ್ಪಷ್ಟವಾಗಿರುತ್ತದೆ. ಪ್ರತಿಯೊಬ್ಬರು ಅವನು ಯಾರೇ ಇರಲಿ, ನಮ್ಮ ಶಿಕ್ಷೆಯಿಂದ ವಿವಶನಾಗುತ್ತಾನೆ. ಯಾರಲ್ಲಿಯೂ ಅಹಂಕಾರ ಉಳಿಯುವುದಿಲ್ಲ. ಅದಕ್ಕೆ ಕಾರಣವೇನೆಂದರೆ ಮಾನವ ಕೊಡುವಂತಹ ಶಿಕ್ಷೆಯ ಪರಿಣಾಮ ಕೇವಲ ಅವನ ಶರೀರಕ್ಕೆ ಮಾತ್ರ ಸೀಮಿತವಾಗಿರುತ್ತದೆಯೇ ಹೊರತು ಹೃದಯಗಳ ಮೇಲೆ ಪರಿಣಾಮ ಬೀರಲು ಶಕ್ತವಾಗಿರುವುದಿಲ್ಲ. ಕೇವಲ ಅಂಜುಬುರುಕರು, ತನ್ನ ದೌರ್ಬಲ್ಯತೆಯಿಂದಾಗಿ ಶರಣಾಗುತ್ತಾರೆ. ಆದರೆ ಅಲ್ಲಾಹನು ಹೃದಯಗಳ ಮೇಲೂ ತನ್ನ ಪ್ರಭುತ್ವ ಸಾಧಿಸಿರುತ್ತಾನೆ. ಆದುದರಿಂದ ಅವನ ಶಿಕ್ಷೆ ಕೇವಲ ಶರೀರದ ಮೇಲೆ ಪರಿಣಾಮ ಬೀರುವುದಿಲ್ಲ. ಬದಲು ಹೃದಯಗಳ ಮೇಲೂ ಪರಿಣಾಮ ಬೀರುತ್ತವೆ. ಆ ಮೂಲಕ ಹೃದಯಗಳನ್ನು ಶುದ್ಧಗೊಳಿಸಲಾಗುತ್ತದೆ. ಆದುದರಿಂದ ಹೇಳಿದನು. ನಮ್ಮ ಶಿಕ್ಷೆ ಅವತರಣಗೊಂಡರೆ ಹೃದಯಗಳು ಸಹ ಪ್ರಭಾವಿತವಾಗುತ್ತವೆ. ಮತ್ತು ಯಾರ ಮೇಲೆ ಶಿಕ್ಷೆ ಅವತರಿಸುತ್ತದೆಯೋ ಅವನು ಎಲ್ಲ ತರಹದ ತ್ಯಾಗ ಮಾಡಲು ತನ್ನನ್ನು ಸಿದ್ಧಪಡಿಸಿಕೊಳ್ಳುತ್ತಾನೆ. ಶಿಕ್ಷೆಯ ಬಾಹ್ಯರೂಪವು ಅವನಿಗೆ ಶರಣಾಗುವಂತೆ ಮಾಡುತ್ತದೆ. ಏಕೆಂದರೆ ಯಾವಾಗಲೂ ಅಲ್ಲಾಹನ ಶಿಕ್ಷೆಯೂ ಸರಿಯಾದ ಸಮಯಕ್ಕೆ ಅವತರಿಸುತ್ತದೆ. ಆ ಕಾರಣದಿಂದ ಅವರ ಮನಸ್ಸುಗಳು ಒಪ್ಪುತ್ತವೆ. ಮನುಷ್ಯನು ವಿಧಿಸಿದ ಶಿಕ್ಷೆ ತಪ್ಪಾಗಬಹುದು. ಇಂತಹ ಸಂದರ್ಭಗಳಲ್ಲಿ ಅವರು ದೌರ್ಜನ್ಯ ಎಂದು ಭಾವಿಸಿ ಎದುರಿಸಲು ಸಿದ್ಧರಾಗುತ್ತಾರೆ. ಆದರೆ ಅಲ್ಲಾಹನು ನ್ಯಾಯವಂತನಾದ ಕಾರಣ ಅವನ ನ್ಯಾಯವನ್ನು ಹೃದಯಗಳು ಒಪ್ಪುತ್ತವೆ. ಮತ್ತು ಆದ ತಪ್ಪಿಗೆ ಪಶ್ಚಾತ್ತಾಪಪಟ್ಟು ಕ್ಷಮೆ ಬೇಡುವವರಾಗುತ್ತಾರೆ. ಮತ್ತು ತಮ್ಮ ದುಷ್ಕರ್ಮಗಳನ್ನು ಹೋಗಲಾಡಿಸುವ ಪ್ರಯತ್ನ ಮಾಡುತ್ತಾರೆ.

ಇದರ ಇನ್ನೊಂದು ಅರ್ಥ ಹೀಗೂ ಆಗಬಹುದು. ಅಲ್ಲಾಹನ ಶಿಕ್ಷೆಯು ಅವನನ್ನು ವಿರೋಧಿಸುವವರಿಗೆ ಮಾತ್ರ ಲಭಿಸುತ್ತದೆ. "ಯಾರು ಸತ್ಯವನ್ನು ಅಲ್ಲಗಳೆಯುವರೋ ಅವರಿಗೆ ಯಾವ ಗುರಿಯೂ ಇರುವುದಿಲ್ಲ. ಮತ್ತು ಇದು ಒಂದು ತತ್ವದ ಮಾತಾಗಿದೆ. ಯಾರು ಗುರಿ ಹೊಂದುವುದಿಲ್ಲವೋ ಅವರು ತ್ಯಾಗ ಮಾಡಲು ಅಸಮರ್ಥರಾಗಿರುತ್ತಾರೆ. ಅವರ ಹೃದಯಗಳಲ್ಲಿ ಜಿಪುಣತೆ ಮತ್ತು ಅಶ್ಲೀಲತೆ ಉಂಟಾಗುತ್ತದೆ. ಆದುದರಿಂದ ಅಲ್ಲಾಹನು ಹೇಳುವನು. ಯಾರು ಸ್ವೇಚ್ಛಾಚಾರಗಳಿಗೆ ಬಲಿಯಾಗುವರೋ ಅವರ ಮೇಲೆ ನಮ್ಮ ಶಿಕ್ಷೆ ಎರಗಿ ಬರುತ್ತದೆ. ಅವರಿಗೆ ಸಾಹಸ ತೋರಿಸಲು ಸಾಧ್ಯವಾಗುವುದಿಲ್ಲ. ಕಷ್ಟಕಾಲದಲ್ಲಿ ಎಲ್ಲವನ್ನು ತ್ಯಾಗ ಮಾಡಿ ತನ್ನ ಜಿವ ಉಳಿಸಬಯಸುತ್ತಾರೆ. ಅಂದರೆ ಸಾಮುದಾಯಿಕ ಮರ್ಯಾದೆ ಇತ್ಯಾದಿಗಳನ್ನು ಸಹ ಬಲಿಕೊಡಲು ಸಿದ್ಧರಾಗುತ್ತಾರೆ. ಇದು ಅವರ ತಪ್ಪು ಹಾದಿಯಲ್ಲಾಗುವ ಸಾಕ್ಷ್ಯವಾಗಿದೆ. ಅವರು ಸತ್ಪಥದಲ್ಲಿರುತ್ತಿದ್ದರೆ ಎಂದೂ ಈ ರೀತಿಯ "ಕ್ಷುಲ್ಲಕ ಕೆಲಸಗಳು" ಮಾಡುತ್ತಿರಲಿಲ್ಲ. (ತಫ್ಸೀರ್ ಕಬೀರ್, ಸಂಪುಟ 3, ಪುಟ 91).**ವಲೌಅನ್ನ ಲಿಕುಲ್ಲಿ ಝುಲಮತ್ ಮಾ ಫಿಲ್ ಅರ್‌ಝಿ ಲಫ್‌ತದತ್‌ಬಿಹೀ, ವಸರ್‍ರುನ್ನದಾಮತ ಲಮ್ಮಾ ರಅಉಲ್ ಅಝಾಬ, ವಖುಝಿಅ ಬೈನಹುಮ್ ಬಿಲ್‌ಖಿಸ್ತಿ ವಹುಮ್ ಲಾ ಯುಝ್‌ಲಮೂನ್** (ಸೂರಃ ಯೂನುಸ್ ವಚನ 55ರ ವ್ಯಾಖ್ಯಾನ (ತಫ್ಸೀರ್) ಮಾಡುತ್ತ ಸಯ್ಯದ್‌ನಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ (ದ್ವಿತೀಯ ಹೇಳುತ್ತಾರೆ. "ಮಾನವ ಪ್ರಕೃತಿ ಹೇಗಿದೆ ಎಂದರೆ ಅವನ ಮೇಲೆ ಶಿಕ್ಷೆಯ ಪರಿಣಾಮ ಎರಡು ರೀತಿಯಲ್ಲಿ ಹೊರಬರುತ್ತದೆ. ಕೆಲವರು ಶಿಕ್ಷೆಯಿಂದ ಇನ್ನಷ್ಟು ಉಗ್ರರಾಗುತ್ತಾರೆ ಮತ್ತು ಎದುರಿಸ ಬಯಸುತ್ತಾರೆ. ಕೆಲವರು ಸೋತುಬಿಡುತ್ತಾರೆ. ಅಲ್ಲಾಹನು ಹೇಳುವನು. ನಮ್ಮ ಶಿಕ್ಷೆ ಸಂಶಯಾಸ್ಪದ

ರೀತಿಯಲ್ಲಿ ಇರುವುದಿಲ್ಲ. ಬದಲು ಅದರ ಪರಿಣಾಮ ಸ್ಪಷ್ಟವಾಗಿರುತ್ತದೆ. ಪ್ರತಿಯೊಬ್ಬರು ಅವನು ಯಾರೇ ಇರಲಿ, ನಮ್ಮ ಶಿಕ್ಷೆಯಿಂದ ವಿವಶನಾಗುತ್ತಾನೆ. ಯಾರಲ್ಲಿಯೂ ಅಹಂಕಾರ ಉಳಿಯುವುದಿಲ್ಲ. ಅದಕ್ಕೆ ಕಾರಣವೇನೆಂದರೆ ಮಾನವ ಕೊಡುವಂತಹ ಶಿಕ್ಷೆಯ ಪರಿಣಾಮ ಕೇವಲ ಅವನ ಶರೀರಕ್ಕೆ ಮಾತ್ರ ಸೀಮಿತವಾಗಿರುತ್ತದೆಯೇ ಹೊರತು ಹೃದಯಗಳ ಮೇಲೆ ಪರಿಣಾಮ ಬೀರಲು ಶಕ್ತವಾಗಿರುವುದಿಲ್ಲ. ಕೇವಲ ಅಂಜುಬುರುಕರು, ತನ್ನ ದೌರ್ಬಲ್ಯತೆಯಿಂದಾಗಿ ಶರಣಾಗುತ್ತಾರೆ. ಆದರೆ ಅಲ್ಲಾಹನು ಹೃದಯಗಳ ಮೇಲೂ ತನ್ನ ಪ್ರಭುತ್ವ ಸಾಧಿಸಿರುತ್ತಾನೆ. ಆದುದರಿಂದ ಅವನ ಶಿಕ್ಷೆ ಕೇವಲ ಶರೀರದ ಮೇಲೆ ಪರಿಣಾಮ ಬೀರುವುದಿಲ್ಲ. ಬದಲು ಹೃದಯಗಳ ಮೇಲೂ ಪರಿಣಾಮ ಬೀರುತ್ತವೆ. ಆ ಮೂಲಕ ಹೃದಯಗಳನ್ನು ಶುದ್ಧಗೊಳಿಸಲಾಗುತ್ತದೆ.

ಆದುದರಿಂದ ಹೇಳಿದನು. ನಮ್ಮ ಶಿಕ್ಷೆ ಅವತರಣಗೊಂಡರೆ ಹೃದಯಗಳು ಸಹ ಪ್ರಭಾವಿತವಾಗುತ್ತವೆ. ಮತ್ತು ಯಾರ ಮೇಲೆ ಶಿಕ್ಷೆ ಅವತರಿಸುತ್ತದೆಯೋ ಅವನು ಎಲ್ಲ ತರಹದ ತ್ಯಾಗ ಮಾಡಲು ತನ್ನನ್ನು ಸಿದ್ಧಪಡಿಸಿಕೊಳ್ಳುತ್ತಾನೆ. ಶಿಕ್ಷೆಯ ಬಾಹ್ಯರೂಪವು ಅವನಿಗೆ ಶರಣಾಗುವಂತೆ ಮಾಡುತ್ತದೆ. ಏಕೆಂದರೆ ಯಾವಾಗಲೂ ಅಲ್ಲಾಹನ ಶಿಕ್ಷೆಯೂ ಸರಿಯಾದ ಸಮಯಕ್ಕೆ ಅವತರಿಸುತ್ತದೆ. ಆ ಕಾರಣದಿಂದ ಅವರ ಮನಸ್ಸುಗಳು ಒಪ್ಪುತ್ತವೆ. ಮನುಷ್ಯನು ವಿಧಿಸಿದ ಶಿಕ್ಷೆ ತಪ್ಪಾಗಬಹುದು. ಇಂತಹ ಸಂದರ್ಭಗಳಲ್ಲಿ ಅವರು ದೌರ್ಜನ್ಯ ಎಂದು ಭಾವಿಸಿ ಎದುರಿಸಲು ಸಿದ್ಧರಾಗುತ್ತಾರೆ. ಆದರೆ ಅಲ್ಲಾಹನು ನ್ಯಾಯವಂತನಾದ ಕಾರಣ ಅವನ ನ್ಯಾಯವನ್ನು ಹೃದಯಗಳು ಒಪ್ಪುತ್ತವೆ. ಮತ್ತು ಆದ ತಪ್ಪಿಗೆ ಪಶ್ಚಾತ್ತಾಪಪಟ್ಟು ಕ್ಷಮೆ ಬೇಡುವವರಾಗುತ್ತಾರೆ. ಮತ್ತು ತಮ್ಮ ದುಷ್ಕರ್ಮಗಳನ್ನು ಹೋಗಲಾಡಿಸುವ ಪ್ರಯತ್ನ ಮಾಡುತ್ತಾರೆ.

ಇದರ ಇನ್ನೊಂದು ಅರ್ಥ ಹೀಗೂ ಆಗಬಹುದು. ಅಲ್ಲಾಹನ ಶಿಕ್ಷೆಯು ಅವನನ್ನು ವಿರೋಧಿಸುವವರಿಗೆ ಮಾತ್ರ ಲಭಿಸುತ್ತದೆ. "ಯಾರು ಸತ್ಯವನ್ನು ಅಲ್ಲಗಳೆಯುವರೋ ಅವರಿಗೆ ಯಾವ ಗುರಿಯೂ ಇರುವುದಿಲ್ಲ. ಮತ್ತು ಇದು ಒಂದು ತತ್ವದ ಮಾತಾಗಿದೆ. ಯಾರು ಗುರಿ ಹೊಂದುವುದಿಲ್ಲವೋ ಅವರು ತ್ಯಾಗ ಮಾಡಲು ಅಸಮರ್ಥರಾಗಿರುತ್ತಾರೆ. ಅವರ ಹೃದಯಗಳಲ್ಲಿ ಜಿಪುಣತೆ ಮತ್ತು ಅಶ್ಲೀಲತೆ ಉಂಟಾಗುತ್ತದೆ. ಆದುದರಿಂದ ಅಲ್ಲಾಹನು ಹೇಳುವನು. ಯಾರು ಸ್ವೇಚ್ಛಾಚಾರಗಳಿಗೆ ಬಲಿಯಾಗುವರೋ ಅವರ ಮೇಲೆ ನಮ್ಮ ಶಿಕ್ಷೆ ಎರಗಿ ಬರುತ್ತದೆ. ಅವರಿಗೆ ಸಾಹಸ ತೋರಿಸಲು ಸಾಧ್ಯವಾಗುವುದಿಲ್ಲ. ಕಷ್ಟಕಾಲದಲ್ಲಿ ಎಲ್ಲವನ್ನು ತ್ಯಾಗ ಮಾಡಿ ತನ್ನ ಜಿವ ಉಳಿಸಬಯಸುತ್ತಾರೆ. ಅಂದರೆ ಸಾಮುದಾಯಿಕ ಮರ್ಯಾದೆ ಇತ್ಯಾದಿಗಳನ್ನು ಸಹ ಬಲಿಕೊಡಲು ಸಿದ್ಧರಾಗುತ್ತಾರೆ. ಇದು ಅವರ ತಪ್ಪು ಹಾದಿಯಲ್ಲಾಗುವ ಸಾಕ್ಷ್ಯವಾಗಿದೆ. ಅವರು ಸತ್ಪಥದಲ್ಲಿರುತ್ತಿದ್ದರೆ ಎಂದೂ ಈ ರೀತಿಯ "ಕ್ಷುಲ್ಲಕ ಕೆಲಸಗಳು" ಮಾಡುತ್ತಿರಲಿಲ್ಲ.

**(ತಫ್ಸೀರ್ ಕಬೀರ್, ಸಂಪುಟ 3, ಪುಟ 91)**

## ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನಿನಲ್ಲಿ ಎರಡನೇ ದರ್ಜೆಯ ಹುದ್ದೆಗಳಿಗಾಗಿ ಸೇವೆ ಮಾಡ ಬಯಸುವವರು ಗಮನಿಸಿ

**ಶರತ್ತುಗಳು :** 1) ಅಭ್ಯರ್ಥಿಯ ವಯಸ್ಸು 25 ವರ್ಷಕ್ಕಿಂತ ಮೀರಿರಬಾರದು. (2) ಅಭ್ಯರ್ಥಿಯ ವಿದ್ಯಾರ್ಹತೆ ಕನಿಷ್ಠ 10,+2 ಆಗಿರಬೇಕು. (ಕನಿಷ್ಠ 45% ಅಂಕ ಪಡೆದಿರಬೇಕು.) (3) ಅಭ್ಯರ್ಥಿಯು ಉರ್ದು/ಇಂಗ್ಲೀಷ್ ಕಂಪೋಝಿಂಗ್ ತಿಳಿದರಬೇಕು. ವೇಗ ಒಂದು ನಿಮಿಷದಲ್ಲಿ 25 ಪದಗಳದ್ದಾಗಿರಬೇಕು. (4) ಈ ಜಾಹೀರಾತಿನ ನಂತರ ಎರಡು ತಿಂಗಳುಗಳ ಒಳಗೆ ಬರುವ ಅರ್ಜಿಗಳನ್ನು ಮಾತ್ರ ಪರಿಶೀಲಿಸಲಾಗುವುದು. (5) ಈ ಕೆಳಗೆ ನಮೂದಿಸಿದ ಪಠ್ಯಕ್ರಮದನ್ವಯ ಪರೀಕ್ಷೆ ತೆಗೆದುಕೊಳ್ಳಲಾಗುವುದು. ಎಲ ವಿಷಯಗಳಲ್ಲೂ ಉತ್ತೀರ್ಣನಾಗುವುದು ಕಡ್ಡಾಯವಾಗಿದೆ.

ಭಾಗ–1 : * ಪವಿತ್ರ ಖುರ್‌ಆನ್ ನಾಝಿರ (ಮೌಖಿಕ) ಸಂಪೂರ್ಣ, ಭಾಗ 1, ಅನುವಾದ ಸಹಿತ.
* ಚಾಲೀಸ್ ಜವಾಹರ್ ಪಾರೆ, ಅರ್ಕಾನೆ ಇಸ್ಲಾಂ, ನಮಾಝ್ ಮುಕಮ್ಮಲ್ ಬಾತರ್ಜುಮೆ.

ಭಾಗ–2 : * ಕಿಶ್ತಿ–ನೂಹ್, ಬರಕಾತುದ್ದುಆ, ದೀನೀ ಮೂಲೂಮಾತ್. (30 ಅಂಕಗಳು)

ಭಾಗ–3 : * ಇಂಗ್ಲೀಷ್ (10+2) ಮಟ್ಟದಲ್ಲಿ, (20 ಅಂಕಗಳು)

ಭಾಗ–4 : * ಗಣಿತ ಮೆಟ್ರಿಕ್ ಮಟ್ಟದಲ್ಲಿ (20 ಅಂಕಗಳು)

ಭಾಗ–5 : * ಸಾಮಾನ್ಯ ಜ್ಞಾನ (ಜಿ.ಕೆ.) (10 ಅಂಕಗಳು)

ಭಾಗ–6 : * ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಮಾತ್ರ ಸಂದರ್ಶನವಿರುವುದು.

ಭಾಗ–7 : * ಲಿಖಿತ ಪರೀಕ್ಷೆ, ಕಂಪ್ಯೂಟರ್ ಟೆಸ್ಟ್ ಹಾಗೂ ಸಂದರ್ಶನದಲ್ಲಿ ಉತ್ತೀರ್ಣರಾದವರಿಗೆ ಮಾತ್ರ ನೂರ್ ಹಾಸ್ಪಿಟಲ್ ಖಾದಿಯಾನ್‌ನಲ್ಲಿ ಆರೋಗ್ಯ ತಪಾಸಣೆ ಮಾಡಲಾಗುವುದು ಮತ್ತು ನೂರ್ ಹಾಸ್ಪಿಟಲ್ ಖಾದಿಯಾನಿನ ಆರೋಗ್ಯ ಸಮಿತಿ ವರದಿಯ ಪ್ರಕಾರ ಆರೋಗ್ಯವಾಗಿರುವ ಅಭ್ಯರ್ಥಿಗಳಿಗೆ ಮಾತ್ರ ಸೇವೆಗೆ ಅರ್ಹರು ಎಂದು ಪರಿಗಣಿಸಲಾಗುವುದು. (8) ಆಯ್ಕೆಗೊಂಡ ಪಕ್ಷದಲ್ಲಿ ಅಭ್ಯರ್ಥಿಯು ತನ್ನ ವಸತಿ ಏರ್ಪಾಡು ತಾನೇ ಮಾಡಿಕೊಳ್ಳಬೇಕಾಗುತ್ತದೆ. (9) ಖಾದಿಯಾನಿಗೆ ಬರುವ, ಹೋಗುವ ಖರ್ಚು ಅಭ್ಯರ್ಥಿಯದ್ದೇ ಆಗಿರುವುದು.

**(ಸೂಚನೆ:** ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ತಾರೀಖು ಅಭ್ಯರ್ಥಿಗಳಿಗೆ ನಂತರ ತಿಳಿಸಲಾಗುವುದು)

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ:**

ನಝೂರತ್ ದೀವಾನ್ ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನ್ – 143516
ಮೊಬೈಲ್ : 09682627592, 09682587713
ಕಛೇರಿ: 01872–501130: ಈಮೇಲ್: diwan@qadian.in

## ಸದ್‌ಖತುಲ್ ಫಿತ್ರ್

ಅಲ್‌ಹಮ್ದುಲಿಲ್ಲಾಹ್ ಪವಿತ್ರ ರಂಝಾನ್ ಏಪ್ರಿಲ್ ಮಾಹೆಯ ಎರಡನೇ ವಾರದಿಂದ ಪ್ರಾರಂಭವಾಗುವುದು. ಇಸ್ಲಾಂ ಧರ್ಮದಲ್ಲಿ ಒಂದು ಸಾರಿ ಧಾನ್ಯ (ಅಂದರೆ 2 ಕಿಲೋ 750 ಗ್ರಾಂ) ಫಿತ್ರಾನ ನೀಡುವ ನಿಗದಿತ ಪ್ರಮಾಣವಾಗಿದೆ. ಜಮಾಅತ್ ಬಾಂಧವರು ನಿಗದಿತ ಪ್ರಮಾಣ ಪ್ರಕಾರ ಪವಿತ್ರ ರಂಝಾನಿನ ಮೊದಲ ಅಥವಾ ಎರಡನೆಯ ಅಶ್ರಾ (ದಶಕ) ದ ಒಳಗಾಗಿ ನೀಡಲು ಪ್ರಯತ್ನ ಮಾಡಬೇಕು.

ಅಂದ ಹಾಗೆ ಭಾರತದ ವಿವಿಧ ರಾಜ್ಯಗಳಲ್ಲಿ ಧಾನ್ಯ (ಗೋಧಿ, ಅಕ್ಕಿ) ಯ ಬೆಲೆಗಳು ವಿವಿಧ ರೀತಿಯಲ್ಲಿರುತ್ತವೆ. ಆದುದರಿಂದ ತನ್ನ ಸ್ಥಳಿಯ ಬೆಲೆಯನುಸಾರ ಪ್ರಮಾಣ ನಿಗದಿಪಡಿಸಿ (ಎರಡು ಕಿಲೋ 750 ಗ್ರಾಂ) ಅದರಂತೆ ಫಿತ್ರಾನ ಮೊತ್ತ ನೀಡಬೇಕಾಗಿದೆ. ಪಂಜಾಬ್ ರಾಜ್ಯಕ್ಕೆ ಈ ವರ್ಷ ಸದಖತುಲ್–ಫಿತ್ರ್ ಪ್ರಮಾಣವು ಈಸಲ ಒಬ್ಬರಿಗೆ ಐವತ್ತೈದು (ರೂ. 55/–) ಗಳನ್ನು ನಿಗದಿಪಡಿಸಲಾಗಿದೆ.

ಸ್ಥಳೀಯ ಜಮಾಅತಿನಲ್ಲಿ ಬಡವರು ಹಾಗೂ ಅದಕ್ಕೆ ಅರ್ಹರು ಇದ್ದಲ್ಲಿ ಸದಖತುಲ್ ಫಿತ್ರ್‌ನ ಒಟ್ಟು ಮೊತ್ತದಿಂದ 90% ವರೆಗಿನ ಮೊತ್ತ ಮಜ್ಲಿಸ್ ಆಮಿಲದ (ಕಾರ್ಯಕಾರಿಣಿ ಸಭೆ)ಯ ಸಲಹೆ ಹಾಗೂ ನಿರ್ಣಯದ ನಂತರ ವಿತರಿಸಬಹುದಾಗಿದೆ. ಉಳಿದ ಮೊತ್ತ ಕೇಂದ್ರಕ್ಕೆ ರವಾನಿಸಬೇಕು. ಯಾವ ಜಮಾಅತಿನಲ್ಲಿ ಬಡವರು, ಅರ್ಹರು ಇಲ್ಲವೋ, ಆ ಜಮಾಅತಿನ ವಸೂಲಾದ ಎಲ್ಲಾ ಮೊತ್ತ (ಹಣ) ಸದರ್ ಅಂಜುಮನ್ ಅಹ್ಮದಿಯಾ, ಜಮಾಅತಿನ ಖಾತೆಗೆ ಬರತಕ್ಕದ್ದು.

ನೆನಪಿರಲಿ, ಫಿತ್ರಾನದ ಹಣವು ಮಸೀದಿ ಮುಂತಾದ ಇತರ ಅಗತ್ಯಗಳಿಗಾಗಿ ಖರ್ಚು ಮಾಡುವ ಅನುಮತಿ ಇರುವುದಿಲ್ಲ.

### ಈದ್ ಫಂಡ್

ಈ ಚಂದ ಹಝ್ರತ್ ಮಸೀಹ್ ಮೌಊದ್(ಅ) ರವರ ಕಾಲಘಟ್ಟದಿಂದ ಜಾರಿಯಲ್ಲಿದೆ. ಈ ಫಂಡಿನ ಉದ್ದೇಶವೇನಿತ್ತೆಂದರೆ, ಸಂತೋಷದ ಸಂದರ್ಭಗಳಲ್ಲಿ ಮನುಷ್ಯನು ಯಾವ ರೀತಿ ತನ್ನ ವೈಯಕ್ತಿಕ ಸಂತೋಷಗಳಿಗಾಗಿ ಹೊಸ ಉಡುಪು, ಸ್ವಾದಭರಿತ ಊಟ ಮತ್ತು ಅತಿಥಿ ಸತ್ಕಾರಗಳಿಗಾಗಿ ವ್ಯಯ ಮಾಡುವರು ಮತ್ತು ಇತರರಿಗೆ ಪಾರಿತೋಷಕ ಉಡುಗೊರೆಗಳನ್ನು ನೀಡುವರೋ, ಅದೇ ರೀತಿ ಆ ಸಂತೋಷದಲ್ಲಿ ಧರ್ಮದ ಅಗತ್ಯಗಳ ಬಗ್ಗೆಯೂ ಗಮನ ವಹಿಸಬೇಕಾಗಿದೆ. ಅಹ್ಮದಿ ಬಾಂಧವರಂತೂ ಬೈಅತ್ತಿನಲ್ಲಿ "ಧರ್ಮವನ್ನು ಲೌಕಿಕ ಕಾರ್ಯಗಳ ಮೇಲೆ ಪ್ರಧಾನ್ಯತೆ ನೀಡುವೆನು" ಎಂಬ ವಚನ ನೀಡಿರುತ್ತಾರೆ. ಆದುದರಿಂದ ಪ್ರತಿಯೋರ್ವ ಅಹ್ಮದಿಯ ಆಶಯ ಹೊಂದುವುದೇನೆಂದರೆ ಅವರು ಸಂತೋಷದ ಈ ಹಬ್ಬ ದಿನಗಳಲ್ಲಿ ಪ್ರತಿಯೊಂದು ಅಹ್ಮದಿಯರಿಂದ ಆಶಿಸುವುದೇನಂದರೆ ಅವರು ಸಂತೋಷದ ಈ ಹಬ್ಬದ ದಿನಗಳಲ್ಲಿ ಧರ್ಮದ ಅಗತ್ಯಗಳಿಗೂ ಸ್ಪಂದಿಸುವರು. ಈ ಉದ್ದೇಶಕ್ಕಾಗಿ ಹಝುರತ್ ಮಸೀಹ್ ಮೌಊದ್(ಅ) ಅವರ ಕಾಲದಲ್ಲಿ ಆದಾಯ ಉಳ್ಳ ಅಹ್ಮದಿ ಬಾಂಧವರು ಒಬ್ಬನಿಗೆ ಒಂದು ರೂಪಾಯಿಯಂತೆ ಫಂಡ್ ನೀಡುತ್ತಿದ್ದರು. ಅದು ಆ ಸಮಯಕ್ಕೆ ದೊಡ್ಡ ಮೊತ್ತವೇ ಆಗಿತ್ತು. ಇದೀಗ ಈದುಲ್ ಫಿತ್ರ್ ಸಮೀಪಿಸುತ್ತಿದೆ. ಆದುದರಿಂದ ತಮ್ಮ ಅನುಕೂಲದ ಪ್ರಕಾರ ಹಬ್ಬದ ದಿನದಂದು ಆದಷ್ಟು ಹೆಚ್ಚು ಮೊತ್ತ ಈ ಫಂಡ್‌ನಲ್ಲಿ ನೀಡಬೇಕಾಗಿದೆ. ಈದ್ ಫಂಡ್ ಈದ್ ನಮಾಝಿಗಿಂತ ಮುಂಚೆ ಯಾವುದೇ ಸಮಯದಲ್ಲಿ ಪಾವತಿಸಬಹುದಾಗಿದೆ. ಇದು ಕೇಂದ್ರಕ್ಕೆ ಸಂಬಂಧಿಸಿದ ಚಂದಾ ಆಗಿದೆ. ಪಡೆದ ಎಲ್ಲಾ ಹಣವು ಸದರ್ ಅಂಜುಮನ್ ಅಹ್ಮದಿಯಾ ಖಜಾನೆಗೆ ಪಾವತಿಸುವುದು ಅನಿವಾರ್ಯವಾಗಿದೆ. ಅದರಿಂದ ಸ್ಥಳೀಯರಿಗೆ ಖರ್ಚು ಮಾಡಲು ಅನುಮತಿ ಇರುವುದಿಲ್ಲ. ಜಝಾಕು ಮುಲ್ಲಾಅತಾಲ.

**(ಖಾಯಂ ಮಕಾಮ್ ನಾಝಿರ್ ಬೈತುಲ್ ಮಾಲ್ ಆಮದ್ ಖಾದಿಯಾನ್)**

### ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂ. 1; ರೂಹಾನೀ ಖಝಾಇನ್ ಸಂಪುಟ 17, ಪುಟ 345)***

### ವಿಷೇಶ ಸೂಚನೆ

**"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**

**ಮೊಬೈಲ್ ಸಂಖ್ಯೆ: 9866358609** (ವ್ಯವಸ್ಥಾಪಕರು)

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:

**NATIONAL TOLL FREE**

**1800–103–2131**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.02, Thursday, 15 April 2021, Issue No. 15

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)

**(ಬದರ್ ಸಂಚಿಕೆ 11–12ರ ವರದಿಯ ಉಳಿದ ಭಾಗ)**

ಹುಝೂರ್ ಹೇಳಿದರು. ಇದೀಗ ನನಗೆ ಜರ್ಮನಿಯ ಪರಿಸ್ಥಿತಿಗಳ ಬಗ್ಗೆ ತಿಳಿದಿಲ್ಲ. ಆದರೆ ಯು.ಕೆ ಪರಿಸ್ಥಿತಿಗಳನ್ನು ಬಲ್ಲೆನು. ಅಲ್ಲಿ ಯಾವ ಜನರು Radicalize ಆಗಿ ISIS ಹೆಸರಿನ ಮೇಲೆ ಅರಬ್ ದೇಶಗಳಿಗೆ ಹೋಗುತ್ತಿದ್ದಾರೆ. ಅವರು ನೌಕರಿ ಸಿಗದ ಕಾರಣಗಳಿಂದ Frustmat ಆಗಿದ್ದಾರೆ. ಬ್ರಿಟಾನಿಯಾದಲ್ಲಿ ಹೇಳಲಾಗುತ್ತಿದೆ. ದೇಶದ ಆರ್ಥಿಕ ಸ್ಥಿತಿ ಉತ್ತಮವಾಗಿದೆ ಮತ್ತು unemployment (ನಿರುದ್ಯೋಗ) ಸಮಸ್ಯೆ ಕಡಿಮೆ ಆಗಿದೆ. ಹಾಗೆ ನೋಡಿದರೆ ಯುವಕರಿಗೆ ಕಡಿಮೆ ನೌಕರಿಗಳು ಸಿಗುತ್ತಿವೆ. ವಯಸ್ಕರಿಗೆ ಹೆಚ್ಚು ಲಾಭವಾಗುತ್ತಿದೆ. ಯುವಕರ ಮತ್ತು ಸ್ಥಳೀಯ ಜನರಲ್ಲಿ ಈ ಭಾವನೆಯಿದೆ. ಸರಕಾರ ವಲಸಿಗರಿಗೆ ಮತ್ತು ವಯಸ್ಕರಿಗೆ ಹೆಚ್ಚು ಲಾಭ ಕೊಡುತ್ತಿದೆ ಮತ್ತು ತಮಗೆ ಕಡಿಮೆ ಕೊಡುತ್ತಿದೆ ಎಂದು. ಈಗ ಯು.ಕೆಯಲ್ಲಿ ಕೇವಲ ಏಷಿಯನ್ ವಲಸಿಗರ ಬದಲು ಪೂರ್ವ ಯೂರೋಪಿನ ದೇಶಗಳ ವಸಲಿಗರ ಪ್ರಶ್ನೆಯು ಜನ್ಮತಾಳಿದೆ. ಅವರು ಸಹ ದೊಡ್ಡ ಸಂಖ್ಯೆಯಲ್ಲಿ ಬರತೊಡಗಿದ್ದಾರೆ.

ಹುಝೂರ್ ಹೇಳಿದರು. ನಾನು ಯುರೋಪಿಯನ್‌ರಿಗೆ ಮೊದಲಿನಿಂದ ಹೇಳುತ್ತಾ ಬಂದಿದ್ದೇನೆ. ವಲಸಿಗರನ್ನು ನಿಭಾಯಿಸಲು, ಅವರಿಗೆ ಒಂದು ನಿಯಮವಿರಬೇಕಾಗಿದೆ, ಯಾವ ಜನರು ISIS ನತ್ತ ಹೋಗುತ್ತಾರೆ. ಅದು frustration ಕಾರಣದಿಂದಾಗಿದೆ. ಅವರು ಪಶ್ಚಿಮ ದೇಶಗಳಿಗೆ ನೋಡಿದಾಗ, ನಮ್ಮ ದೇಶಗಳ ಯುವಕರು ಅಲ್ಲಿ ಹೋಗಿ ಜಗಳ ಮಾಡುತ್ತಿದ್ದಾರೆ. ಆಗ ಅವರಲ್ಲಿ ಈ ಭಯ ಉಂಟಾಗುತ್ತಿದೆ. ಈಗ ಈ ಜನರು ಕ್ಷೋಭೆಯನ್ನುಂಟು ಮಾಡುತ್ತಿದ್ದಾರೆ.

ಹುಝೂರ್ ಹೇಳಿದರು ಜರ್ಮನಿಯಲ್ಲಿ ಯಾವ ಕ್ಷೇತ್ರದಲ್ಲಿ ಮುಸ್ಲಿಮರು ಹೆಚ್ಚಿದ್ದಾರೆ. ಅಲ್ಲಿಯ ನ್ಯಾಷ್ನಲಿಸ್ಟ್ ಪಕ್ಷಗಳಿಗೆ ಮತ ದೊರೆಯುತ್ತಿಲ್ಲ. ಈ policy ಯಿಂದ ನಷ್ಟವಾಗುವುದು ಆ ಜನರ ಧೋರಣೆ ಏಷಿಯನ್ ವಲಸಿಗರ ವಿರುದ್ಧವಾಗುವುದು.

ಹುಝೂರ್ ಹೇಳಿದರು. ಇಂತಹ ಪರಿಸ್ಥಿತಿಗಳಲ್ಲಿ ಇದೇ ಪ್ರಾರ್ಥನೆಯಾಗಿದೆ. ಎಡಪಂಥಿಯಾದವರು (Lefitist) ಮೇಲೆ ಬರಬೇಕು ಮತ್ತು ಪರಿಸ್ಥಿತಿಗಳನ್ನು ಉತ್ತಮಗೊಳಿಸಬೇಕು. ಆಗ Dr. Gysi ಹೇಳಿದರು. ಹುಝೂರರ ದುಆ ಸ್ವೀಕರಿಸಲಾಗುವುದು ಎಂದು ಆಶಿಸುತ್ತೇನೆ. ನಾವು ಮೇಲೆ ಬರುವೆವು. ಆಮೇಲೆ ಹಲವು ಸಮಸ್ಯೆಗಳ ಕುರಿತು ತಪ್ಪು ಯೋಜನೆಗಳನ್ನು ಹಾಕಿಕೊಟ್ಟಿದೆ. ಈ ಕೆಲವು ವರದಿಗಳನ್ನು ಸಂಘಟನೆಗಳು, ತನ್ನ ಜೊತೆ ಸೇರಿಸಿಕೊಂಡು ತನ್ನ ಸಮ ಶತ್ರುಗಳೊಂದಿಗೆ ಕ್ರಮ ಕೈಗೊಳ್ಳುತ್ತಿದೆ. ಯಾವ ವರದಿಗಳನ್ನು ತನ್ನ ಜೊತೆ ಸೇರಿಸಿಕೊಂಡಿದೆಯೋ ಮತ್ತು ಅವರಿಗೆ ಸಹಾಯ ನೀಡುತ್ತದೆಯೋ ಅವರಿಗೆ ನಾಳೆ ತನ್ನ ಜೊತೆಯಲ್ಲಿ ಹೇಗೆ ವರ್ತಿಸುತ್ತಾರೋ ಎಂಬುದು ಯೋಚಿಸುವುದಿಲ್ಲ.

ಆಗ ಹುಝೂರ್ ಹೇಳಿದರು. ಅಮೇರಿಕಾ, ರಷ್ಯಾ ವಿರುದ್ಧ ಅಲ್–ಖಾಯಿದಾಕ್ಕೆ ಬೆಂಬಲವಿತ್ತು. ಈಗ ಅದೇ ಅಲ್–ಖಾಯಿದಾ ಅಮೇರಿಕಾಕ್ಕೆ ವಿರುದ್ಧವಾಗಿದೆ.

ಅತಿಥಿಯವರು ಹೇಳಿದರು. ಈಗಲೂ ಎಲ್ಲ ಕಡೆ ಪರಿಸ್ಥಿತಿಗಳು ಇನ್ನಷ್ಟು ಹದಗೆಡುತ್ತಿದೆ. ಲಿಬಿಯಾ, ಸೋಮಾಲಿಯಾ, ಇರಕ್, ಸಿರಿಯಾ, ಯಮನ್, ಉಕ್ರೇನ್ ಎಲ್ಲ ಕಡೆ ಗಲಭೆಗಳು ಶಾಂತಿಯುಕ್ತವಾಗಿದೆ. ಎಲ್ಲ ಕಡೆ ಶಾಂತಿ ನಾಶವಾಗಿದೆ. ಈಗ ಪ್ರಶ್ನೆಯಿರುವುದು ಇಂತಹ ಪರಿಸ್ಥಿತಿಗಳಿಂದ ಹೇಗೆ ಹೊರಬರುವುದು ಮತ್ತು ಈ ದೇಶಗಳಲ್ಲಿ ಹೋಗಿ ಶಾಂತಿ ಸ್ಥಾಪನೆ ಮಾಡಬಹುದು ಎಂಬುದಾಗಿದೆ. ಪ್ಯಾಲಸ್ತೀನ್ ರಾಜ್ಯವು ಹೇಗೆ ಸ್ಥಾಪನೆ ಮಾಡಬಹುದು. ನನ್ನ ಬಳಿ ಅದಕ್ಕೆ ಯಾವ ಉತ್ತರವೂ ಇಲ್ಲ.

ಆಗ ಹುಝೂರ್ ಹೇಳೀದರು. ನಮ್ಮ ಬಳಿ ಅದರ ಉತ್ತರವಿದೆ. ನಾನು ಹಿಂದಿನ ವರ್ಷವು ಹೇಳಿದ್ದೆ. ಈ ವರ್ಷವೂ ತನ್ನ ಸಂಬೋಧನೆಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ಹೇಳಿದ್ದೇನೆ. ISIS ರವರಿಗೆ supply ಬಂದ್ ಮಾಡಿರಿ. ಅವರಿಗೆ ಯುದ್ಧಾಸ್ತ್ರಗಳ ಮತ್ತು ಆಯುಧಗಳು ಎಲ್ಲಿಂದ ದೊರೆಯುತ್ತಿವೆ. ಅವರ ತೈಲ ಇತರ ದೇಶಗಳಿಗೆ ಹೇಗೆ ಹೋಗುತ್ತದೆ. ಅವರಿಗೆ ದೊಡ್ಡ ದೊಡ್ಡ ಹಣದ ರಾಶಿ ಎಲ್ಲಿಂದ ದೊರೆಯುತ್ತದೆ.

ಸೆಕ್ಯೂರಿಟಿ ಕೌನ್ಸಿಲ್ ಒಂದು ರೆಸ್ಯೂಲೇಷನ್ ಪಾಸು ಮಾಡಿದ್ದರು. ಅವರ Supply line ತೊರೆಯಬೇಕೆಂದು. ಆದರೆ ಅದರ ಮೇಲೆ ನಡೆದುಕೊಳ್ಳಲಿಲ್ಲ.

ಈರಾನಿನ ಮೇಲೆ ನಿಷೇಧ ಹೇರಬಯಸುವುದಾದರೆ ಅದರ ಮೇಲೆ ಏಕೆ ಹೇರಲು ಸಾಧ್ಯವಿಲ್ಲ. ಆಗ ಅತಿಥಿಯರು ಹೇಳಿದರು. ಇದು ಕಡು ಸತ್ಯವಾಗಿದೆ ರಷ್ಯಾದ ಮೇಲೆ ನಿಷೇಧ ಹೇರುತ್ತಾರೆ. ಆದರೆ ಆ ಸಂಘಟನೆಗಳ ಮೇಲೆ ಹೇರುವುದಿಲ್ಲ.

ಪ್ಯಾಲಸ್ತೀನ್ ಕುರಿತು ಹುಝೂರ್ ಹೇಳಿದರು. ಅದರ ಗಡಿ ರೇಖೆಗಳನ್ನು ನಿಗಧಿಗೊಳಿಸಲಾಗಿತ್ತು ಮತ್ತು ಈ ಒಪ್ಪಂದವು ಆಗಿತ್ತು. ಇಸ್ರಾಯಿಲ್ ಇನ್ನು encroachment (ಗಡಿ ವಿಸ್ತರಣೆ) ಮಾಡುವುದಿಲ್ಲ ಎಂದು. ಆದರೆ ಈ ಒಪ್ಪಂದವನ್ನು ವಿರೋಧಿಸುತ್ತ ಹೋದರು.

Egypt ಇಸ್ರೇಲ್ ವಿರುದ್ಧ ಮಾಡಿದರೆ ಪ್ಯಾಲಸ್ತೀನ್ ಇಂದಿನವರೆಗೆ ಅದರ ಶಿಕ್ಷೆ ಅನುಭವಿಸುತ್ತಿದೆ. ಲುಬ್ನಾನಿನಲ್ಲಿ ಹಿಝುಬುಲ್ಲಾಹ್ ಅಧಿಕ ಸಂಖ್ಯೆಯಲ್ಲಿದೆ. ಅವರು ಇಸ್ರೇಲ್ ವಿರುದ್ಧ ಯಾವುದೇ ಕ್ರಮ ಕೈಗೊಂಡರೆ ಅದರ ಶಿಕ್ಷೆಯೂ ಒಪ್ಪುವುದಾಗಿದೆ. ಸ್ವೀಡನ್ ಅದನ್ನು ಒಪ್ಪಿಕೊಂಡಿದೆ ಎಂದು ಗುಲ್ಲೆಬ್ಬಿಸಲಾಯಿತು. ಈಗ spain ಮುಂದೆ ಬಂದಿದೆ. ಈ ಸಮಸ್ಯೆಗೆ ಪರಿಹಾರವೇನೆಂದರೆ ಪ್ಯಾಲಸ್ತೀನನ್ನು ಒಂದು ಸ್ವತಂತ್ರ ರಾಜ್ಯವನ್ನಾಗಿ ಮಾಡಬೇಕು. ಒಂದು ದೇಶ ಎಂದು ಅದನ್ನು ಪರಿಗಣಿಸಬೇಕು.

ಹುಝೂರ್ ಹೇಳಿದರು. ಆದರೆ ಯಾರು ಸಹ ಕುಳಿತು ಅದರ ಪರಿಹಾರ ಹುಡುಕ ಬಯಸುವುದಿಲ್ಲ. ನಮ್ಮ ಧ್ವನಿ ಎಲ್ಲಿಯವರೆಗೆ ತಲುಪಿಸಬಹುದು. ಅಲ್ಲಿಯವರೆಗೆ ತಲುಪಿಸುವ ಪ್ರಯತ್ನ ಮಡುತ್ತೇವೆ. ಹುಝೂರ್ ಹೇಳಿದರು. ನಮ್ಮ ಸಂದೇಶ, ನಮ್ಮ ಧ್ವನಿ ಎಲ್ಲ ಕಡೆ ತಲುಪುತ್ತಿದೆ ಮತ್ತು ಕುಳಿತುಕೊಂಡು ಮಾತನಾಡಬೇಕು, ಶಾಂತಿ ಸ್ಥಾಪನೆಯಾಗಬೇಕು ಎಂಬ ಭಾವನೆ ಎಲ್ಲ ಕಡೆ ಮೂಡಿ ಬರತೊಡಗಿದೆ.

ಅವರು ಪ್ರಶ್ನೆ ಮಾಡಿದರು. ನಾವು ಮೂರನೇ ಮಹಾಯುದ್ಧದಿಂದ ಉಳಿಯಬಹುದೇ, ಅಗ ಹುಝೂರ್ ಹೇಳಿದರು. ಮನುಷ್ಯ ಮನುಷ್ಯರ ಮೇಲೆ ದೌರ್ಜನ್ಯ ಮಾಡತೊಡಗಿದರೆ, ಇತರರ ಹಕ್ಕುಗಳನ್ನು ದಮನಿಸತೊಡಗಿದರೆ, ಆಗ ಅಲ್ಲಾಹನ ವಿಧಿ ತನ್ನ ಕೈ ತೋರಿಸುತ್ತದೆ. ಅಲ್ಲಾಹನ ವಿಧಿ ನಿಯಮ ಕಾರ್ಯಪ್ರವೃತ್ತರಾದಾಗ ಮನುಷ್ಯ ನಾಶವಾಗುವನು. ನಿಸರ್ಗ ನಾಶ ಹೊಂದುವುದಿಲ್ಲ.

ಅತಿಥಿಯವರು ಹೇಳಿದರು. ವಾರ್ಷಿಕವಾಗಿ ಎಷ್ಟೇ ಮಿಲಿಯನ್ ಜನರು ಹಸಿವಿನಿಂದ ಸಾಯುತ್ತಾರೆ. ಅದಾಗ್ಯೂ ವರ್ಷದಲ್ಲಿ ಎರಡು ಸಲ ಅವರ ಹಸಿವು ನೀಗಿಸುವಷ್ಟು ಆಹಾರ ನಮ್ಮ ಬಳಿಯಿದೆ.

ಆಗ ಹುಝೂರ್ ಹೇಳಿದರು. ಲಕ್ಷಾಂತರ ಜನರ ಹಸಿವು ನೀಗಿಸುವ ಬದಲು ಆಹಾರವನ್ನು ಸಮುದ್ರಕ್ಕೆ ಎಸೆಯಲಾಗಿದೆ. ಅದೇ ಗತಿಯಾಗುವುದು. ರಾಜಕಾರಣಿಗಳಿಗೆ ಈ ಮಾತು ಅರ್ಥವಾಗುತ್ತಿಲ್ಲ. ಅವರ ಹಸಿವು, ಬಡತನವನ್ನು ನೀಗಿಸದೆ ಇದ್ದರೆ ಮತ್ತೆ ಅದೇ ಜನರು ಅವರ ವಿರುದ್ಧ ನಿಲ್ಲುವರು.

ಅತಿಥಿಯವರು ಹೇಳಿದರು. 2007ರವರೆಗೆ ಇಲ್ಲಿ ಆತ್ಮಹತ್ಯೆಯ ಪ್ರತಿಶತ ತುಂಬ ಕಡಿಮೆಯಿತ್ತು. ಈಗ ಹೆಚ್ಚಾಗತೊಡಗಿದೆ. ಇದು frustration ಮತ್ತು ಜನರ ಅಸಮಾಧಾನಗಳ ಸಂಕೇತವಾಗಿದೆ.

ಹುಝೂರ್ ಹೇಳಿದರು. ನನ್ನ ಮಾತು ಬರೆದುಕೊಳ್ಳಿ, ಶಾಂತಿ ಸಾಧ್ಯವಿಲ್ಲ. ವಿನಾಶ ಒಂದೇ ತೀರುವುದು. UNO ಅನ್ನು ಭಗ್ನಗೊಳಿಸಿ ಮತ್ತು ಒಂದು ಹೊಸ ಸಂಸ್ಥೆ ಮಾಡಿಕೊಳ್ಳಿ.

ಇನ್ನಿತರ ವಿವಿಧ ವಿಷಯಗಳ ಬಗ್ಗೆ ಹುಝೂರ್ ಮಾತುಗಳನ್ನಾಡಿದರು. R. Gysi ಅವರ ಹುಝೂರರೊಡನೆ ಈ ಭೇಟಿ ಐದು ಗಂಟೆಯವರೆಗೆ ನಡೆಯಿತು. ಕೊನೆಯಲ್ಲಿ ಅವರು ಹುಝೂರರ ಜೊತೆಯಲ್ಲಿ ಛಾಯಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಅನಂತರ ಮುಕರ್ರಮ್ ಅಮೀರ್ ಸಾಹಿಬ್ ಜರ್ಮನಿ ಹುಝೂರ ರೊಡನೆ ಕಚೇರಿಯಲ್ಲಿ ಭೇಟಿಯಾದರು. ಹುಝೂರ್ ಕೆಲವು ಕಾರ್ಯಗಳ ಕುರಿತು ಸಲಹೆಗಳನ್ನು ನೀಡಿದರು.

**(ಮುಂದುವರಿಯುವುದು)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.